## 102 ತಾಲ್ಲೂಕುಗಳ ವರದಿ ಸರ್ಕಾರದ ಕೈ ಸೇರಿದೆ; ಬರ ಘೋಷಣೆ ಬಗ್ಗೆ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಹಲವೆಡೆ ಎದುರಾಗಿರುವ ತೀವ್ರ ಮಳೆ ಕೊರತೆಯ ಹಿನ್ನೆಲೆಯಲ್ಲಿ, ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಅಧಿಕೃತವಾಗಿ ಬರಗಾಲ ಘೋಷಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ 102 ತಾಲ್ಲೂಕುಗಳಿಂದ ನೆಲಮಟ್ಟದ ವಾಸ್ತವಿಕ ಪರಿಸ್ಥಿತಿ ಕುರಿತ ವರದಿ ಸರ್ಕಾರಕ್ಕೆ ಲಭ್ಯವಾಗಿದ್ದು, ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚಿಸಿ ಬರ ಘೋಷಣೆ ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದರು. ರಾಜ್ಯದ ಬರ ಪರಿಸ್ಥಿತಿಯನ್ನು ಪ್ರತಿ ವಾರ ಪರಿಶೀಲಿಸಲಾಗುತ್ತಿದೆ. ಕೇಂದ್ರ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳನ್ನು ಆಧರಿಸಿ ಬರ ಘೋಷಣೆ ಮಾಡಲಾಗುವುದು ಎಂದು ತಿಳಿಸಿದರು. ಬಿಜೆಪಿ ನಾಯಕರು ಕೂಡ ಬರಪೀಡಿತ ಜಿಲ್ಲೆಗಳಿಗೆ ಭೇಟಿ ನೀಡಿದ್ದಾರೆ. ಆದರೆ, ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಲಿಲ್ಲ ಎಂದು ಟೀಕಿಸಿದರು. ಬೆಳೆ ನಷ್ಟ, ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ರೈತರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳ ಬಗ್ಗೆ ಚರ್ಚಿಸುವ ಬದಲು ಪ್ರತಿಪಕ್ಷಗಳು ಅಧಿವೇಶನದಲ್ಲಿ ರಾಜಕೀಯ ಮಾಡಿವೆ ಎಂದು ಆರೋಪಿಸಿದರು. ಸಚಿವ ಬಿ. ನಾಗೇಂದ್ರ ಅವರ ರಾಜೀನಾಮೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಮುಖ್ಯಮಂತ್ರಿ ಡಿಕೆ ಶಿವಕುಮಾರ್ ದೆಹಲಿಗೆ ತೆರಳಲಿದ್ದು, ರಾಜ್ಯದ ಬೆಳವಣಿಗೆಗಳ ಕುರಿತು ಪಕ್ಷದ ಹೈಕಮಾಂಡ್ ನಾಯಕರೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಬಹುದು ಎಂದು ತಿಳಿಸಿದರು.

## ಹೇರ್ ಕಟ್ಟಿಂಗ್‌ಗೆ ಡೆಲ್ಲೀಲಿ ಖರ್ಚು ಮಾಡಿದ್ದು ಕೇವಲ 50 ರೂ.: ಟ್ರೋಲ್ ಆದ ಡಿ ಕೆ ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ಸೆಲೆಬ್ರಿಟಿಗಳು, ಶ್ರೀಮಂತ ರಾಜಕಾರಣಿಗಳು ತಮ್ಮ ಲೈಫ್ ಸ್ಟೈಲ್ ಗೆ ಸಾಕಷ್ಟು ಹಣ ಖರ್ಚು ಮಾಡುತ್ತಾರೆ. ದೇಶದ ಅತಿ ಶ್ರೀಮಂತ ಮುಖ್ಯಮಂತ್ರಿ ಎನಿಸಿಕೊಂಡಿರುವ ಡಿ ಕೆ ಶಿವಕುಮಾರ್ ಅವರು ತಾವು ಹೇರ್ ಕಟ್‌ಗೆ ಕೇವಲ 50 ರೂಪಾಯಿ ಖರ್ಚು ಮಾಡಿದ್ದೆ ಎಂದು ಹೇಳಿರುವ ಮಾತು ಸೋಷಿಯಲ್ ಮೀಡಿಯಾದಲ್ಲಿ ಭಾರೀ ಟ್ರೋಲ್ ಆಗುತ್ತಿದೆ. ನಾನು ಆಗರ್ಭ ಶ್ರೀಮಂತನಾದರೂ ಸರಳ ಜೀವನಶೈಲಿಯನ್ನೇ ಪಾಲಿಸುತ್ತೇನೆ, ನಾನು ನನ್ನ ಹೇರ್‌ಕಟ್‌ಗಾಗಿ 50 ರೂ. ಖರ್ಚು ಮಾಡಿದ್ದು ದೆಹಲಿಗೆ ಇತ್ತೀಚೆಗೆ ಹೋಗಿದ್ದಾಗ. ನಾನು ಸರಳ ಜೀವನವನ್ನು ಇಷ್ಟಪಡುತ್ತೇನೆ. ದುಂದುವೆಚ್ಚ ನನಗೆ ಹಿಡಿಸುವುದಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿಕೊಂಡಿದ್ದಾರೆ. ಇಂಗ್ಲಿಷ್ ವಾಹಿನಿಯೊಂದರ ಕಾರ್ಯಕ್ರಮದಲ್ಲಿ ಸಂದರ್ಶನದಲ್ಲಿ ಖ್ಯಾತ ಪತ್ರಕರ್ತ ರಾಜದೀಪ್ ಸರ್ದೇಸಾಯಿ ಅವರ ಪ್ರಶ್ನೆಗೆ ಉತ್ತರಿಸಿದರು. ನಾನು ಜೀವನ ಮಾಡುವುದಕ್ಕೆ ಎಷ್ಟು ಅಗತ್ಯವೋ ಅಷ್ಟು ಮಾತ್ರ ಖರ್ಚು ಮಾಡುತ್ತೇನೆ. ದಿಲ್ಲಿಯಲ್ಲಿ ನಾನು 50 ರೂ. ಕೊಟ್ಟು ಹೇರ್‌ಕಟ್ ಮಾಡಿಸಿಕೊಳ್ಳುತ್ತೇನೆ. ಸರಳ ಜೀವನ ನನ್ನ ಆಯ್ಕೆ ಎಂದು ಸಂದರ್ಶನದಲ್ಲಿ ಡಿಕೆ ಶಿವಕುಮಾರ್ ಹೇಳಿಕೊಂಡಿದ್ದಾರೆ.

50 ರೂಪಾಯಿಗೆ ಹೇರ್ ಕಟ್ ಮಾಡೋ ಬಾರ್ಬರ್ ಯಾರಿದ್ದಾರೆ ಈಗ, ಬಹುಶಃ ಮುಖ್ಯಮಂತ್ರಿಗಳು ಟಿಪ್ಸ್ ಕೊಡೋದನ್ನು ಹೇಳುತ್ತಿರಬೇಕೆಂದು ವಿರೋಧ ಪಕ್ಷದವರು, ಸಾಮಾನ್ಯ ನೆಟ್ಟಿಗರು ಸೋಷಿಯಲ್ ಮೀಡಿಯಾದಲ್ಲಿ ಪ್ರತಿಕ್ರಿಯಿಸಿದ್ದಾರೆ. ಹೇರ್ ಕಟ್ಟಿಂಗ್‌ಗೆ 50 ರೂಪಾಯಿ ಎಂದು ಹೇಳುವ ಡಿಕೆಶಿಯವರೇ ರೊಲೆಕ್ಸ್ ವಾಚ್ ಕಟ್ಟುತ್ತೀರಾ, ಏನು ಜನರು ನಿಮ್ಮ ಮಾತುಗಳನ್ನು ನಂಬುವ ಮುಟ್ಠಾಳರು ಎಂದು ಭಾವಿಸಿದ್ದೀರಾ ಎಂದು ಜೆಡಿಎಸ್ ಕೇಳಿದೆ.

## IT ಅಧಿಕಾರಿ, ಚಾರ್ಟರ್ಡ್ ಅಕೌಂಟೆಂಟ್‌ಗೆ 3 ವರ್ಷ ಜೈಲು ಶಿಕ್ಷೆ..

• ಉದಯವಾಹಿನಿ, ಬೆಂಗಳೂರು

ತೆರಿಗೆ ಮೊತ್ತವನ್ನು 80 ಲಕ್ಷದಿಂದ 30 ಲಕ್ಷ ರೂ.ಗೆ ಇಳಿಸಲು ಲಂಚಕ್ಕೆ ಬೇಡಿಕೆ ಇಟ್ಟು ಸಿಕ್ಕಿಬಿದ್ದಿದ್ದ ಆದಾಯ ತೆರಿಗೆ ಅಧಿಕಾರಿ ಹಾಗೂ ಅವರಿಗೆ ಸಾಥ್ ನೀಡಿದ್ದ ಚಾರ್ಟರ್ಡ್ ಅಕೌಂಟೆಂಟ್‌ಗೆ ವಿಶೇಷ ಸಿಬಿಐ ಪ್ರಕರಣಗಳ ಪ್ರಧಾನ ವಿಶೇಷ ನ್ಯಾಯಾಲಯವು 3 ವರ್ಷಗಳ ಕಾಲ ಸಾದಾ ಜೈಲು ಶಿಕ್ಷೆ ಹಾಗೂ ಭಾರಿ ದಂಡ ವಿಧಿಸಿ ಮಹತ್ವದ ತೀರ್ಪು ನೀಡಿದೆ. 14 ವರ್ಷಗಳ ಹಿಂದೆ ದಾಖಲಾಗಿದ್ದ ಲಂಚ ಪ್ರಕರಣದಲ್ಲಿ ಆದಾಯ ತೆರಿಗೆ ಅಧಿಕಾರಿ ವಿ. ನಾಗರಾಜ್ ಹಾಗೂ ಚಾರ್ಟರ್ಡ್ ಅಕೌಂಟೆಂಟ್ ನಾಗಿನಚಂದ್ ವಿ. ಕಿಂಚಾ ಅವರಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿದೆ. ನಾಗರಾಜ್ ಅವರಿಗೆ ರೂ.3 ಲಕ್ಷ ಹಾಗೂ ಕಿಂಚಾ ಅವರಿಗೆ ರೂ.2 ಲಕ್ಷ ದಂಡವನ್ನೂ ವಿಧಿಸಲಾಗಿದೆ. ಬೆಂಗಳೂರಿನ ಆದಾಯ ತೆರಿಗೆ ಕಚೇರಿಯ ವಾರ್ಡ್ 4(3)ರಲ್ಲಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ನಾಗರಾಜ್, ತೆರಿಗೆದಾರ ಎ.ಕೆ. ಹಲೀಂ ಅವರ ತೆರಿಗೆಗೆ ಒಳಪಡುವ ಆದಾಯವನ್ನು ರೂ.80 ಲಕ್ಷದಿಂದ ರೂ.30 ಲಕ್ಷಕ್ಕೆ ಇಳಿಸುವುದಕ್ಕಾಗಿ ರೂ.20 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

## ಸಂತ್ರಸ್ತರಿಗೆ 3 ತಿಂಗಳಲ್ಲಿ ಪರಿಹಾರ ತಲುಪುವಂತೆ ಯೋಜನೆ ರೂಪಿಸಿ; ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

• ಉದಯವಾಹಿನಿ, ಬೆಂಗಳೂರು

ಗುಂಪು ಹಲ್ಲೆ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಅಥವಾ ಅವರ ಹತ್ತಿರದ ಸಂಬಂಧಿಗಳಿಗೆ ಮೂರು ತಿಂಗಳೊಳಗೆ ಮಧ್ಯಂತರ ಪರಿಹಾರವನ್ನು ನೀಡುವ ಯೋಜನೆಯನ್ನು ರೂಪಿಸುವಂತೆ ಕರ್ನಾಟಕ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ತೆಹ್ಸೀನ್ ಎಸ್ ಪೂನ್ನವಲ್ಲ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಗುಂಪು ಹಲ್ಲೆ ಪ್ರಕರಣಗಳಲ್ಲಿ ವಿಚಾರಣಾ ನ್ಯಾಯಾಲಯಗಳು ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳನ್ನು ಪುನರುಚ್ಚರಿಸಿದೆ.

ಗುಂಪು ಹತ್ಯೆ ಪ್ರಕರಣದ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಮತ್ತು ಮೃತ ಅಶ್ರಫ್ ಸಹೋದರ ಸಲ್ಲಿಸಿದ್ದ ಅರ್ಜಿಗಳನ್ನು ವಜಾಗೊಳಿಸಿರುವ ಹೈಕೋರ್ಟ್, ಗುಂಪು ಹಲ್ಲೆ ಮತ್ತು ಹತ್ಯೆಯಲ್ಲಿ ಸಾವನ್ನಪ್ಪಿದವರ ಕುಟುಂಬದವರಿಗೆ ಪರಿಹಾರದ ನೀಡುವ ಸಂಬಂಧ ಸುಪ್ರೀಂಕೋರ್ಟ್ ಮಾರ್ಗಸೂಚಿಯಂತೆ ಮೂರು ತಿಂಗಳಲ್ಲಿ ಯೋಜನೆ ರೂಪಿಸುವಂತೆ ನಿರ್ದೇಶಿಸಿದೆ.

ರಾಜ್ಯ ಸರ್ಕಾರ ಮತ್ತು ಮೃತನ ಸಹೋದರ ಅಬ್ದುಲ್ ಜಬ್ಬಾರ್ ಸಲ್ಲಿಸಿದ್ದ ಅರ್ಜಿಗಳನ್ನು ಆಲಿಸಿದ ನ್ಯಾಯಮೂರ್ತಿ ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ಏಕ ಸದಸ್ಯ ಪೀಠ ಈ ಆದೇಶ ನೀಡಿದೆ. ಆದೇಶದ ಸಂಬಂಧ ಅನುಪಾಲನಾ ವರದಿ ಸಲ್ಲಿಸಲು ಆದೇಶಿಸಿದೆ.

ಅಲ್ಲದೇ, ಪ್ರಕರಣದಲ್ಲಿ ಈಗಾಗಲೇ ಆರೋಪಪಟ್ಟಿ ಸಲ್ಲಿಕೆಯಾಗಿರುವುದರಿಂದ ಆರೋಪಿಗಳನ್ನು ವಶಕ್ಕೆ ಪಡೆಯುವ ಅಗತ್ಯವಿಲ್ಲ ಎಂಬ ಆಧಾರದಲ್ಲಿ ಜಾಮೀನು ರದ್ದುಪಡಿಸಲು ಸಾಧ್ಯವಿಲ್ಲ. ಜೊತೆಗೆ, ಈ ಹಂತದಲ್ಲಿ ಜಾಮೀನು ಅರ್ಜಿ ವಜಾಗೊಳಿಸಿ ಹೊಸದಾಗಿ ಅವುಗಳನ್ನು ಪರಿಗಣಿಸುವಂತೆ ವಿಚಾರಣಾಧೀನ ನ್ಯಾಯಾಲಯಕ್ಕೆ ಆದೇಶಿಸುವುದರಿಂದ ವಿಚಾರಣೆ ವಿಳಂಬವಾಗುತ್ತದೆ.

## ನೂತನ ತಯಾರಿಕೆ, ಸಂಶೋಧನಾ ಘಟಕ ಲೋಕಾರ್ಪಣೆ

ಉದಯವಾಹಿನಿ ಚಿತ್ರ




• ಉದಯವಾಹಿನಿ, ಬೆಂಗಳೂರು

ದೇವನಹಳ್ಳಿ ತಾಲ್ಲೂಕಿನ ಕುಂದಾಣ ಸಾಮಾನ್ಯ ಕೈಗಾರಿಕಾ ಪ್ರದೇಶದಲ್ಲಿ ದಕ್ಷಿಣ ಕೊರಿಯಾ ಮೂಲದ ಡಿ.ಎನ್.ಸೊಲ್ಯೂಷನ್ಸ್ ಕಂಪನಿಯು 600 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ನೂತನ ತಯಾರಿಕೆ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಮತ್ತು ಡಿ) ಘಟಕವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಇಂದು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಶೀನ್ ಟೂಲ್ ತಯಾರಿಕೆಗೆ ಹೆಸರಾಗಿರುವ ಡಿ.ಎನ್.ಸೊಲ್ಯೂಷನ್ಸ್ ಕಂಪನಿಯೊಂದಿಗೆ ಎರಡು ವರ್ಷಗಳ ಹಿಂದೆ ನಾನು ಕೊರಿಯಾ ಪ್ರವಾಸ ಕೈಗೊಂಡಿದ್ದಾಗ ಈ ಒಡಂಬಡಿಕೆ ಆಗಿತ್ತು. ಇಷ್ಟು ಕ್ಷಿಪ್ರ ಅವಧಿಯಲ್ಲಿ ತಯಾರಿಕೆ ಮತ್ತು ಆರ್ ಮತ್ತು ಡಿ ಘಟಕಗಳು ಸಿದ್ಧವಾಗಿರುವುದು ದೊಡ್ಡ ದಾಖಲೆಯಾಗಿದೆ. ಹೀಗೆ ಎರಡೂ ಸ್ಥಾವರಗಳು ಒಂದೆಡೆ ಸಾಕಾರಗೊಂಡಿರುವುದು ವಿಶಿಷ್ಟ ಸಂಗತಿಯಾಗಿದೆ ಎಂದಿದ್ದಾರೆ. ರಾಜ್ಯವು ಸೇವಾಧಾರಿತ ಆರ್ಥಿಕತೆಯಿಂದ ಉತ್ಪಾದನೆ ಆಧರಿತ ಆರ್ಥಿಕತೆಯಾಗಿ ರೂಪಾಂತರಗೊಳ್ಳುತ್ತಿರುವ ಸಂಕ್ರಮಣಾವಸ್ಥೆಯಲ್ಲಿದೆ.

ತಯಾರಿಕೆ ವಲಯದಲ್ಲಿ ಬರುವ ಆಟೋಮೊಬೈಲ್, ಹೆವಿ ಇಂಜಿನಿಯರಿಂಗ್, ಏರೋಸ್ಪೇಸ್, ರಕ್ಷಣೋದ್ಯಮ, ಪ್ರಿಸಿಷನ್ ತಯಾರಿಕೆ ಹೀಗೆ ಪ್ರತಿಯೊಂದರಲ್ಲೂ ಮಶೀನ್ ಟೂಲ್ಸ್ ನಿರ್ಣಾಯಕ ಪಾತ್ರ ವಹಿಸುತ್ತದೆ. ನಾವು ಹೆಚ್ಚಾಗಿ ಈ ಸ್ವರೂಪದ ಬಂಡವಾಳ ಹೂಡಿಕೆಗೇ ಆದ್ಯತೆ ಕೊಡುತ್ತಿದ್ದೇವೆ ಎಂದು ಅವರು ತಿಳಿಸಿದ್ದಾರೆ. ದೇಶದ ಒಟ್ಟಾರೆ ಮಶೀನ್ ಟೂಲ್ಸ್ ತಯಾರಿಕೆ ವಲಯಕ್ಕೆ ರಾಜ್ಯವು ಶೇ.52ರಷ್ಟು ಕೊಡುಗೆ ನೀಡುತ್ತಿದೆ. ಡಿ.ಎನ್.ಸೊಲ್ಯೂಷನ್ಸ್ ತನ್ನ ಹೂಡಿಕೆಗೆ ನಮ್ಮಲ್ಲಿಗೆ ಬರಲು ಇದು ಪ್ರಮುಖ ಕಾರಣವಾಗಿದೆ. ಇಲ್ಲಿ ಈಗಾಗಲೇ 350 ಮಂದಿ ಉದ್ಯೋಗನಿರತರಾಗಿರುವುದು ಸಂತಸದ ಸಂಗತಿಯಾಗಿದೆ.

## ಈದ್ ಮಿಲಾದ್ ಮೆರವಣಿಗೆ ವೇಳೆ ಘರ್ಷಣೆ ಪ್ರಕರಣ: 8 ಮಂದಿ ಪೊಲೀಸ್ ವಶಕ್ಕೆ..!

• ಉದಯವಾಹಿನಿ, ಬೆಂಗಳೂರು

ಈದ್ ಮಿಲಾದ್ ಮೆರವಣಿಗೆ ವೇಳೆ ಎರಡು ಗುಂಪುಗಳ ನಡುವೆ ಘರ್ಷಣೆ ಸಂಭವಿಸಿದ ಹಿನ್ನೆಲೆಯಲ್ಲಿ ಬಸವನಗುಡಿಯ ಕೆ.ಆರ್. ರಸ್ತೆಯಲ್ಲಿ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಪ್ರಕರಣ ಸಂಬಂಧ ಪೊಲೀಸರು 8 ಮಂದಿಯನ್ನು ವಶಕ್ಕೆ ಪಡೆದಿದ್ದು, ವಿಚಾರಣೆ ನಡೆಸುತ್ತಿದ್ದಾರೆ. ಸುಮಾರು 4 ಗಂಟೆಗೆ 2ನೇ ಮುಖ್ಯರಸ್ತೆ ಸಮೀಪ ಕೆ.ಆರ್. ರಸ್ತೆಯಲ್ಲಿ ಈದ್ ಮಿಲಾದ್ ಮೆರವಣಿಗೆ ಸಾಗುತ್ತಿತ್ತು.

ಇದೇ ಪ್ರದೇಶದಲ್ಲಿ ಹಿಂದೂ ಕಾರ್ಯಕರ್ತ ಪುನೀತ್ ಕೆರೆಹಳ್ಳಿ ಅವರ ಕಚೇರಿಯೂ ಇದೆ. ಘೋಷಣೆಗಳ ವಿಚಾರಕ್ಕೆ ಎರಡು ಗುಂಪುಗಳ ನಡುವೆ ಮಾತಿನ ಚಕಮಕಿ ನಡೆದು ಬಳಿಕ ಘರ್ಷಣೆ ನಡೆದಿದೆ ಎನ್ನಲಾಗಿದೆ. ಘರ್ಷಣೆಯಲ್ಲಿ ಮುರಳಿ ಎಂಬ ವ್ಯಕ್ತಿಯ ತಲೆಗೆ ಗಂಭೀರ ಗಾಯಗಳಾಗಿದ್ದು, ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆ ಸಂಬಂಧ ದಕ್ಷಿಣ ವಿಭಾಗದ ಉಪ ಪೊಲೀಸ್ ಆಯುಕ್ತ ಕೆ. ವಾಮಶಿಕೃಷ್ಣ ಅವರು ಮಾತನಾಡಿದ್ದು, ಸಂಜೆ 4 ಗಂಟೆ ಸುಮಾರಿಗೆ ಘರ್ಷಣೆ ನಡೆದಿರುವ ಬಗ್ಗೆ ಮಾಹಿತಿ ಲಭಿಸಿತು. ತಕ್ಷಣವೇ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದ್ದು, ಪೊಲೀಸ್ ಸಿಬ್ಬಂದಿಯೂ ಸ್ಥಳದಲ್ಲಿದ್ದರು. ಘಟನೆಯ ಕುರಿತು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

## ಮಾಲೀಕರಿಗೆ ಬೀಳಲಿದೆ ಭಾರೀ ದಂಡ; ಕಠಿಣ ಕ್ರಮ

• ಉದಯವಾಹಿನಿ, ಬೆಂಗಳೂರು

ಖಾಲಿ ನಿವೇಶನಗಳಲ್ಲಿ ಕಸ ಹಾಗೂ ಕಟ್ಟಡ ನಿರ್ಮಾಣದ ಅವಶೇಷಗಳನ್ನು ತೆರವುಗೊಳಿಸದ ಮಾಲೀಕರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ದಂಡ ವಿಧಿಸಲು ಆರಂಭಿಸಿದೆ. ಈ ಅಭಿಯಾನದ ಭಾಗವಾಗಿ, ಜಿಬಿಎ ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸಿ, ಅದಕ್ಕೆ ತಗಲುವ ವೆಚ್ಚವನ್ನು ಸಂಬಂಧಪಟ್ಟ ಆಸ್ತಿ ಮಾಲೀಕರಿಂದಲೇ ವಸೂಲಿ ಮಾಡಲಿದೆ. ಶಾಂತಿನಗರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಇಂದು ಈ ಜಾರಿ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. ಶಾಂತಿನಗರ ಶಾಸಕ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎನ್.ಎ. ಹ್ಯಾರಿಸ್ ಅವರು ಉಪಸ್ಥಿತರಿರಲಿದ್ದಾರೆ. 20=30 ಚದರ ಅಡಿ ವಿಸ್ತೀರ್ಣದ ನಿವೇಶನಕ್ಕೆ 19,200 ರೂಪಾಯಿಗಳಿಂದ 30=40 ಚದರ ಅಡಿ ನಿವೇಶನಕ್ಕೆ 38,400 ರೂಪಾಯಿಗಳವರೆಗೆ ದಂಡ ವಿಧಿಸಲಾಗುತ್ತದೆ. ಈ ಶುಲ್ಕದಲ್ಲಿ ಖಾಲಿ ನಿವೇಶನ ಸ್ವಚ್ಛಗೊಳಿಸುವುದು ಹಾಗೂ ಕಸ ಅಥವಾ ಅವಶೇಷಗಳನ್ನು ಸಾಗಿಸುವ ವೆಚ್ಚವೂ ಸೇರಿದೆ. 2020ರ ಘನತ್ಯಾಜ್ಯ ನಿರ್ವಹಣೆ ಉಪನಿಯಮಗಳ ಬೈಲಾ 18(1) ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಹಾವು ಕಡಿತಕ್ಕೆ ಬಾಲಕನಿಗೆ ತಪ್ಪು ಲಸಿಕೆ ನೀಡಿದ ಆರೋಪ: ವೈದ್ಯರ ಮೇಲೆ FIR

### ಬಾಲಕನನ್ನು ಗೋಲ್ಡನ್ ಅವರ್‌ನಲ್ಲೇ ಆಸ್ಪತ್ರೆಗೆ ಕರೆತಂದಿದ್ದರೂ ವೈದ್ಯರು ಸರಿಯಾದ ಚುಚ್ಚುಮದ್ದು ನೀಡಿಲ್ಲ ಎಂಬ ಆರೋಪ ಕೇಳಿಬಂದಿದೆ.

• ಉದಯವಾಹಿನಿ, ಬೆಂಗಳೂರು

1 ಚುಚ್ಚುಮದ್ದು ನೀಡಿಲ್ಲ ಎಂಬ ಆರೋಪ
2 ನಾಗರ ಹಾವು ಎರಡು ಬಾರಿ ಕಡಿದಿತ್ತು.
3 ತಂದೆ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ

ಹಾವಿನ ಕಡಿತದಿಂದ ನಾಲ್ಕೂವರೆ ವರ್ಷದ ಬಾಲಕ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನಿರ್ದೇಶನದ ಮೇರೆಗೆ ಚನ್ನಪಟ್ಟಣ ಟೌನ್ ಪೊಲೀಸರು ಸರ್ಕಾರಿ ವೈದ್ಯರೊಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಬಾಲಕನನ್ನು ಗೋಲ್ಡನ್ ಅವರ್‌ನಲ್ಲೇ ಆಸ್ಪತ್ರೆಗೆ ಕರೆತಂದಿದ್ದರೂ ವೈದ್ಯರು ಸರಿಯಾದ ಚುಚ್ಚುಮದ್ದು ನೀಡಿಲ್ಲ ಎಂಬ ಆರೋಪ ಕೇಳಿಬಂದಿದೆ.

ವೈದ್ಯರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಪೊಲೀಸರಿಗೆ ನಿರ್ದೇಶನ ನೀಡಬೇಕೆಂದು ಬಾಲಕನ ತಂದೆ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯವು 60 ದಿನಗಳೊಳಗೆ ಎಫ್‌ಐಆರ್ ದಾಖಲಿಸುವಂತೆ ಪೊಲೀಸರಿಗೆ ಸೂಚಿಸಿತ್ತು. ಏಪ್ರಿಲ್‌ನಲ್ಲಿ ಬಾಲಕ ಮೃತಪಟ್ಟಿದ್ದ. ಘಟನೆಯ ಬಳಿಕ ವೈದ್ಯರನ್ನು ಅಮಾನತುಗೊಳಿಸಲಾಗಿದೆ ಎನ್ನಲಾಗಿದೆ.

ಕುಶಾಲ್ ಅವರ ಪ್ರಕಾರ, ಸಂಜೆ ಸುಮಾರು 5.50ಕ್ಕೆ ಸಾತ್ವಿಕ್‌ನ ಬಲಗಾಲಿನ ಕಿರುಬೆರಳಿಗೆ ನಾಗರ ಹಾವು ಎರಡು ಬಾರಿ ಕಡಿದಿತ್ತು. ಸಂಜೆ 6 ಗಂಟೆಯೊಳಗೆ, ಅಂದರೆ ಗೋಲ್ಡನ್ ಅವರ್‌ನಲ್ಲೇ, ನಾನು ಸಾತ್ವಿಕ್‌ನನ್ನು ಬೈಕ್‌ನಲ್ಲಿ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಡಾ. ರಂಜಿತ್ ಅವರು ಆಯಂಟಿ ಸ್ನೇಕ್ ವೆನಮ್ ಚುಚ್ಚುಮದ್ದು ನೀಡುವ ಬದಲು ಟಿಟಿ ಹಾಗೂ ಮತ್ತೊಂದು ಚುಚ್ಚುಮದ್ದು ನೀಡಿದರು. ಬಳಿಕ ಸಾತ್ವಿಕ್‌ನನ್ನು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದರು. ಆಸ್ಪತ್ರೆಯಿಂದ ಆಂಬ್ಯುಲೆನ್ಸ್ ವ್ಯವಸ್ಥೆಯನ್ನೂ ಮಾಡಿಕೊಡಲಿಲ್ಲ ಎಂದು ಕುಶಾಲ್ ದೂರಿನಲ್ಲಿ ತಿಳಿಸಿದ್ದಾರೆ.

ಉದಯವಾಹಿನಿ ಚಿತ್ರ




ನನ್ನ ಸೋದರಳಿಯನನ್ನು ಬೆಂಗಳೂರಿನ ಆಸ್ಪತ್ರೆಗೆ ಕರೆದೊಯ್ಯಲು ಖಾಸಗಿ ಆಂಬ್ಯುಲೆನ್ಸ್ ವ್ಯವಸ್ಥೆ ಮಾಡುವಷ್ಟರಲ್ಲಿ ವಿಷ ದೇಹದಾದ್ಯಂತ ಹರಡಿತ್ತು. ಬಳಿಕ ಆರ್.ಆರ್. ನಗರದ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಸರ್ಕಾರಿ ಆಸ್ಪತ್ರೆಯ ಚಿಕಿತ್ಸಾ ದಾಖಲೆಯನ್ನು ಪರಿಶೀಲಿಸಿದ ಅಲ್ಲಿನ ವೈದ್ಯರು, ಆಯಂಟಿ ಸ್ನೇಕ್ ವೆನಮ್ ಚುಚ್ಚುಮದ್ದು ನೀಡುವ ಬದಲು ಬೇರೆ ಎರಡು ಚುಚ್ಚುಮದ್ದುಗಳನ್ನು ನೀಡಲಾಗಿದೆ ಎಂದು ತಿಳಿಸಿದರು. ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಡಾ. ರಂಜಿತ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಏಪ್ರಿಲ್ 28ರಂದು ನಾಗರ ಹಾವು ಕಡಿತಕ್ಕೊಳಗಾಗಿದ್ದ ಎನ್. ಸಾತ್ವಿಕ್ ಎಂಬ ಬಾಲಕ ಎರಡು ದಿನಗಳ ಬಳಿಕ ಆರ್.ಆರ್. ನಗರದ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದ. ಏಪ್ರಿಲ್ 30ರಂದು ಚನ್ನಪಟ್ಟಣ ಪೊಲೀಸರು ಅಸ್ವಾಭಾವಿಕ ಸಾವಿನ ಪ್ರಕರಣ ದಾಖಲಿಸಿದ್ದರು. ಸಾತ್ವಿಕ್ ಚಿಕ್ಕಪ್ಪ ಸಿ. ಕುಶಾಲ್ ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

**ಡಾ. ರಂಜಿತ್ ASV ಚುಚ್ಚುಮದ್ದು ನೀಡಿದ್ದರೆ ನನ್ನ ಸೋದರಳಿಯ ಬದುಕುಳಿಯುತ್ತಿದ್ದ. ವೈದ್ಯರ ನಿರ್ಲಕ್ಷ್ಯ ಸ್ಪಷ್ಟವಾಗಿದ್ದರೂ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿರಲಿಲ್ಲ. ಹೀಗಾಗಿ ಸಾತ್ವಿಕ್‌ನ ತಂದೆ ಹೈಕೋರ್ಟ್ ಮೊರೆ ಹೋದರು ಎಂದು ಹೇಳಿದ್ದಾರೆ.** - ಕುಶಾಲ್

### ವೈದ್ಯರ ನಿರ್ಲಕ್ಷ್ಯ

ಜಾಲಹಳ್ಳಿಯಲ್ಲಿ ವಾಸವಾಗಿರುವ ಬಿಇಎಲ್ ಉದ್ಯೋಗಿ ಹಾಗೂ ಸಾತ್ವಿಕ್ ತಂದೆ ಎನ್. ನಿರಂಜನ್ (36) ಅವರು ಜೂನ್‌ನಲ್ಲಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಹಾವಿನ ವಿಷ ನಿರೋಧಕ ಔಷಧಿ ಲಭ್ಯವಿದ್ದರೂ ವೈದ್ಯರು ಅದನ್ನು ನೀಡದೆ ನಿರ್ಲಕ್ಷ್ಯ ತೋರಿದ್ದರಿಂದಲೇ ತಮ್ಮ ಮಗ ಮೃತಪಟ್ಟಿದ್ದಾನೆ ಎಂದು ಅವರು ಆರೋಪಿಸಿದ್ದರು.




# ಎಸ್‌ಸಿ ಒಳಮೀಸಲಾತಿ ವಿರುದ್ಧ ಶಾಂತಿಯುತ ಹೋರಾಟ ಮುಂದುವರಿಕೆ ಎಸ್‌ಸಿ ಒಳವರ್ಗೀಕರಣಕ್ಕೆ ಅವಕಾಶ ಸಲ್ಲದು: ಮಾಲ ಮಹಾನಾಡು ರಾಷ್ಟ್ರೀಯ ಅಧ್ಯಕ್ಷ ಡಾ. ಆರ್.ಎಸ್.ರತ್ನಾಕರ್

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿಗಳ (ಎಸ್‌ಸಿ) ಒಳಮೀಸಲಾತಿ, ಒಳವರ್ಗೀಕರಣವು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಹೆಸರಿನಲ್ಲಿ ದಲಿತ ಸಮುದಾಯಗಳ ಏಕತೆಗೆ ಧಕ್ಕೆ ತರುವ ಕ್ರಮವಾಗಿದ್ದು, ಒಳಮೀಸಲಾತಿಗೆ ಅವಕಾಶ ಕಲ್ಪಿಸಬಾರದು ಎಂದು ಮಾಲ ಮಹಾನಾಡು ರಾಷ್ಟ್ರೀಯ ಅಧ್ಯಕ್ಷ ಡಾ. ಆರ್.ಎಸ್. ರತ್ನಾಕರ್ ಹೇಳಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಾದ್ಯಂತ ಎಸ್‌ಸಿ ಒಳಮೀಸಲಾತಿಯನ್ನು ದಲಿತ ಸಮುದಾಯ ವಿರೋಧಿಸುತ್ತಿದ್ದು, ಈ ಸಂಬಂಧ ಹಮ್ಮಿಕೊಂಡಿರುವ ಶಾಂತಿಯುತ ಹೋರಾಟ ನಿಲ್ಲುವುದಿಲ್ಲ.

ಮೀಸಲಾತಿಯ ಪಾಲಿಗಾಗಿ ದಲಿತ ಸಮುದಾಯಗಳ ನಡುವೆ ಸಂಘರ್ಷ ಉಂಟುಮಾಡುವ ಬದಲು, ಪರಿಶಿಷ್ಟ ಜಾತಿಗಳ ಏಕತೆ ಮತ್ತು ರಾಜಕೀಯ ಶಕ್ತಿಯನ್ನು ಬಲಪಡಿಸುವ ಅಗತ್ಯವಿದೆ ಎಂದು ಹೇಳಿದರು. ತೆಲುಗು ರಾಜ್ಯಗಳಲ್ಲಿ ಒಟ್ಟು 59 ಪರಿಶಿಷ್ಟ ಜಾತಿಗಳಿದ್ದು,

ಉದಯವಾಹಿನಿ ಚಿತ್ರ




ಒಳಮೀಸಲಾತಿಯ ಮೂಲಕ ಕೆಲವೇ ಸಮುದಾಯಗಳಿಗೆ ಸೀಮಿತ ಪ್ರಯೋಜನ ದೊರೆಯುವತ್ತಿದೆ. ಕರ್ನಾಟಕದಲ್ಲಿ 101 ಪರಿಶಿಷ್ಟ ಜಾತಿಗಳು ಹಾಗೂ ದೇಶಾದ್ಯಂತ 1,108 ಪರಿಶಿಷ್ಟ ಜಾತಿಗಳು ಇರುವ ಸಂದರ್ಭದಲ್ಲಿ, ಸಮುದಾಯಗಳಿಗೂ ಸಮಾನವಾಗಿ ನ್ಯಾಯ ಒದಗಿಸುವುದು ಹೇಗೆ ಸಾಧ್ಯ ಎಂಬುದನ್ನು ಸರ್ಕಾರಗಳು ಸ್ಪಷ್ಟಪಡಿಸಬೇಕು ಎಂದು ಅವರು ಪ್ರಶ್ನಿಸಿದರು. ಇತರ ಸಮುದಾಯಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸುವ ಉದ್ದೇಶ ಸರ್ಕಾರಕ್ಕಿದ್ದರೆ, ಪರಿಶಿಷ್ಟ ಜಾತಿಗಳ ಒಟ್ಟಾರೆ ಮೀಸಲಾತಿಯನ್ನು ಹೆಚ್ಚಿಸಿ ಹೆಚ್ಚುವರಿ ಅವಕಾಶ ನೀಡಬಹುದು. ಇದಕ್ಕೆ ನಮ್ಮ ವಿರೋಧವಿಲ್ಲ.

ಆದರೆ, ಮೀಸಲಾತಿಯ ಹೆಸರಿನಲ್ಲಿ ದಲಿತ ಸಮುದಾಯಗಳ ನಡುವೆ ಭಿನ್ನಾಭಿಪ್ರಾಯ ಮತ್ತು ಸಂಘರ್ಷ ಸೃಷ್ಟಿಸುವ ಕ್ರಮವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇತ್ತೀಚೆಗೆ ಜಾರಿಗೊಳಿಸಿರುವ ಒಳಮೀಸಲಾತಿ ಸಂಬಂಧಿತ ಕಾನೂನುಗಳು ಶಾಶ್ವತವಲ್ಲ.


ಜನರು ಪ್ರಜಾಪ್ರಭುತ್ವದ ಮಾರ್ಗದಲ್ಲಿ ಒಗ್ಗಟ್ಟಿನಿಂದ ಹಾಗೂ ಶಾಂತಿಯುತವಾಗಿ ಹೋರಾಟ ನಡೆಸಿದರೆ ಯಾವುದೇ ತಪ್ಪು ಕಾನೂನನ್ನು ಸರ್ಕಾರ ಹಿಂಪಡೆಯಬೇಕಾಗುತ್ತದೆ.

ರೈತರ ಹೋರಾಟದ ಸಂದರ್ಭದಲ್ಲಿ ಕೃಷಿ ಕಾಯ್ದೆಗಳನ್ನು ಹಿಂಪಡೆದಿರುವುದು ಇದಕ್ಕೆ ಉದಾಹರಣೆಯಾಗಿದೆ ಎಂದು ಅವರು ಹೇಳಿದರು. ಪ್ರಜಾಪ್ರಭುತ್ವದಲ್ಲಿ ಜನರೇ ಸಾರ್ವಭೌಮರು. ಜನರು ನ್ಯಾಯಯುತ ಮತ್ತು ಗಂಭೀರವಾದ ಹೋರಾಟ ನಡೆಸಿದಾಗ ಸರ್ಕಾರಗಳು ಜನರ ಧ್ವನಿಗೆ ಸ್ಪಂದಿಸಲೇಬೇಕು. ಎಸ್‌ಸಿ ಸಮುದಾಯಗಳನ್ನು ಒಳವರ್ಗೀಕರಣಕ್ಕೆ ಅವಕಾಶವಿಲ್ಲದಂತೆ ಸಂಸತ್ತಿನಲ್ಲಿ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿ ತರಬೇಕು.

ಈ ಬೇಡಿಕೆ ಈಡೇರುವವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದು ಡಾ. ರತ್ನಾಕರ್ ಸ್ಪಷ್ಟಪಡಿಸಿದರು.


ದಲಿತ ಸಮುದಾಯಗಳ ಏಕತೆ, ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯವನ್ನು ರಕ್ಷಿಸುವ ನಿಟ್ಟಿನಲ್ಲಿ ಎಲ್ಲರೂ ಶಾಂತಿಯುತ, ನಿರಂತರ ಹಾಗೂ ಪ್ರಜಾಸತ್ತಾತ್ಮಕ ಹೋರಾಟಕ್ಕೆ ಸಜ್ಜಾಗಬೇಕು ಎಂದು ಅವರು ಕರೆ ನೀಡಿದರು. ಈ ಸಂದರ್ಭದಲ್ಲಿ ಜೆ. ಕೇಶವ ಪ್ರಸಾದ್, ಎಂ. ನರೇಶ್, ಜಿ. ಗೋವಿಂದಪ್ಪ, ಅರವಿಂದ್ ಎಚ್. ಎನ್. ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಶಿರಾ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಗುರುರಾಯರ ಆರಾಧನೆ



ಉದಯವಾಹಿನಿ ಚಿತ್ರ





• ಉದಯವಾಹಿನಿ, ಶಿರಾ

ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ತುಮಕೂರು ಜಿಲ್ಲೆಯ ಶಿರಾ ಪಟ್ಟಣದ ಆರ್.ಟಿ. ರಸ್ತೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀ ರಾಘವೇಂದ್ರ ಗುರುಸಾರ್ವಭೌಮರ 355ನೇ ಆರಾಧನಾ ಮಹೋತ್ಸವವನ್ನು ಆಗಸ್ಟ್ 28 ರಿಂದ 31ರ ವರೆಗೆ ಹಮ್ಮಿಕೊಂಡಿದೆ. ಕಾರ್ಯಕ್ರಮಗಳು : ಆರಾಧನೆಯ ಎಲ್ಲಾ ದಿನಗಳಲ್ಲೂ ಬೆಳಗ್ಗೆ ಗುರುರಾಜರ ಬೃಂದಾವನಕ್ಕೆ ಫಲಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ, ಭಜನಾ ಕಾರ್ಯಕ್ರಮ, ರಥೋತ್ಸವ ಇನ್ನಿತರ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಆ.28 - ಬಾಗಲಕೋಟೆಯ ವಿದ್ವಾನ್ ಶ್ರೀ ಅನಂತ ಕುಲಕರ್ಣಿ ಮತ್ತು ಸಂಗಡಿಗರಿಂದ ದಾಸವಾಣಿ, ಆಗಸ್ಟ್ 29 - ವಿದುಷಿ ಶ್ರೀಮತಿ ರಮ್ಯಾ ಸುಧೀರ್ ಇವರಿಂದ ದಾಸರ ಪದಗಳ ರಸಧಾರೆ.

**ಕೀಬೋರ್ಡ್ :** ಶ್ರೀ ಎಸ್. ಪ್ರವೀಣ್, ತಬಲಾ : ಶ್ರೀ ರವಿಕುಮಾರ್. ಆಗಸ್ಟ್ 30 - ವಿದುಷಿ ಶ್ರೀಮತಿ ರಂಜಿತಾ ಪ್ರಸಾದ್ ಇವರಿಂದ ಹರಿದಾಸ ಮಂಜರಿ.

ಕೀಬೋರ್ಡ್ ; ಶ್ರೀ ಪ್ರವೀಣ್, ತಬಲಾ : ಶ್ರೀ ರವಿಕುಮಾರ್. ಆಗಸ್ಟ್ 31 - ಏಕನಾಥೇಶ್ವರಿ ಗಾನ ವಿದ್ಯಾಲಯದ ಸದಸ್ಯರಿಂದ ದಾಸವಾಣಿ ಕಾರ್ಯಕ್ರಮ ನಡೆಯಲಿದೆ.

## ರೇಣುಕಾಸ್ವಾಮಿ ಕೇಸ್‌ನಲ್ಲಿ ಬಿಗ್ ಟ್ವಿಸ್ಟ್: ಉಲ್ಟಾ ಹೊಡೆದ ದರ್ಶನ್ ಆಪ್ತ

• ಉದಯವಾಹಿನಿ, ಬೆಂಗಳೂರು

ಚಿತ್ರದುರ್ಗದ ರೇಣುಕಾಸ್ವಾಮಿ ಭೀಕರ ಕೊಲೆ ಪ್ರಕರಣದಲ್ಲಿ ಎ-1 ನಟ ದರ್ಶನ್ ಹಾಗೂ ಇತರೆ ಆರೋಪಿಗಳಿಗೆ ಭಾರೀ ಕಾನೂನು ಹಿನ್ನಡೆಯಾಗಿದೆ.

ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಆರೋಪಿ ನಂಬರ್ 14 ಪ್ರದೋಷ್ ಎಸ್.ರಾವ್ ಸರ್ಕಾರಿ ಸಾಕ್ಷಿಯಾಗಲು ಮುಂದಾಗಿರುವುದು ಪ್ರಕರಣದ ವಿಚಾರಣೆಯಲ್ಲಿ ಮಹತ್ವದ ಬೆಳವಣಿಗೆಯಾಗಿದೆ. ಈಗಾಗಲೇ ಪೊಲೀಸರು ಸಂಗ್ರಹಿಸಿರುವ ಸಾಂದರ್ಭಿಕ ಸಾಕ್ಷ್ಯಗಳಿಗೆ ಪ್ರದೋಷ್ ಅವರ ಹೇಳಿಕೆ ಪೂರಕವಾಗುವ ಸಾಧ್ಯತೆಯಿದ್ದು, ನಟ ದರ್ಶನ್ ಸೇರಿದಂತೆ ಇತರ ಆರೋಪಿಗಳ ವಿರುದ್ಧದ ಪ್ರಾಸಿಕ್ಯೂಷನ್ ಪ್ರಕರಣಕ್ಕೆ ಇದು ಮತ್ತಷ್ಟು ಬಲ ನೀಡುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ.

ಘಟನೆ ನಡೆದ ಸಂದರ್ಭ, ಆರೋಪಿಗಳ ಪಾತ್ರ, ಹಾಗೂ ಹತ್ಯೆಯ ನಂತರ ನಡೆದ ಬೆಳವಣಿಗೆಗಳ ಕುರಿತು ಅವರ ಹೇಳಿಕೆ ತನಿಖೆಯಲ್ಲಿನ ಹಲವು ಅಂಶಗಳನ್ನು ಜೋಡಿಸುವಲ್ಲಿ ಪ್ರಮುಖವಾಗುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ.

ಹೆಸರನ್ನು ಬಹಿರಂಗಪಡಿಸದ ಷರತ್ತಿನ ಮೇಲೆ ಮಾತನಾಡಿದ ಸರ್ಕಾರಿ ಅಭಿಯೋಜಕರೊಬ್ಬರು, ಅಪರಾಧದಲ್ಲಿ ಸಹ ಆರೋಪಿಯಾಗಿರುವ ವ್ಯಕ್ತಿಯೊಬ್ಬರು ಪ್ರಾಸಿಕ್ಯೂಷನ್ ಪರ ಸಾಕ್ಷಿಯಾಗಿ, ಪ್ರಕರಣ ಮತ್ತು ಇತರ ಆರೋಪಿಗಳ ಪಾತ್ರದ ಕುರಿತು ಸಂಪೂರ್ಣ ಹಾಗೂ



ಉದಯವಾಹಿನಿ ಚಿತ್ರ

ಸತ್ಯವಾದ ಮಾಹಿತಿಯನ್ನು ನೀಡಲು ಒಪ್ಪಿಕೊಂಡರೆ ಅವರನ್ನು ಸರ್ಕಾರಿ ಸಾಕ್ಷಿ ಎಂದು ಕರೆಯಲಾಗುತ್ತದೆ. ಇದಕ್ಕೆ ಪ್ರತಿಯಾಗಿ ಅವರಿಗೆ ಕ್ಷಮಾದಾನ ನೀಡಲಾಗುತ್ತದೆ ಎಂದು ವಿವರಿಸಿದ್ದಾರೆ. ಗಂಭೀರ ಅಪರಾಧಗಳಿಗೆ ಸಂಬಂಧಿಸಿದಂತೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಸೆಕ್ಷನ್ 343ರ ಅಡಿಯಲ್ಲಿ, ಕೆಲವು ಷರತ್ತುಗಳಿಗೆ ಒಳಪಟ್ಟು ಸಮರ್ಥ ನ್ಯಾಯಾಲಯವು ಸಹ ಆರೋಪಿಗೆ ಕ್ಷಮಾದಾನ ನೀಡಬಹುದು.

### ಫೋರ್ಜರಿ ಪ್ರಕರಣ ದಾಖಲಿಸುವ ಸಾಧ್ಯತೆ

**ಆದರೆ, ಸರ್ಕಾರಿ ಸಾಕ್ಷಿಯು ತನ್ನ ಸಾಕ್ಷ್ಯ ಮತ್ತು ಹೇಳಿಕೆಗಳ ಮೂಲಕ ಪ್ರಾಸಿಕ್ಯೂಷನ್‌ಗೆ ಸಹಕರಿಸಲು ವಿಫಲವಾದರೆ, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪ್ರಾಸಿಕ್ಯೂಷನ್ ನ್ಯಾಯಾಲಯವನ್ನು ಕೋರಬಹುದು. ಸುಳ್ಳು ಸಾಕ್ಷ್ಯ ನೀಡಿದ ಆರೋಪದಲ್ಲಿ ಫೋರ್ಜರಿ ಪ್ರಕರಣ ದಾಖಲಿಸುವ ಸಾಧ್ಯತೆಯೂ ಇದ್ದು, ಪ್ರತ್ಯೇಕವಾಗಿ ವಿಚಾರಣೆ ನಡೆಸಬಹುದಾಗಿದೆ ಎಂದು ಹೇಳದ್ದಾರೆ.**

# ಕಲಬುರಗಿಯ ಇಬ್ಬರು ನೇಪಾಳದಲ್ಲಿ ಸಿಲುಕಿದ್ದಾರೆ; ಇನ್ನೂ ಯಾರಾದರೂ ಇದ್ದಾರೆಯೇ ?

### ಬೆಳಗಾವಿಯಿಂದ ಕೆಲವರು ಅಲ್ಲಿದ್ದಾರೆ ಎಂಬ ವರದಿಗಳು ಬರುತ್ತಿವೆ, ಆದರೆ ಅದು ಇನ್ನೂ ದೃಢಪಟ್ಟಿಲ್ಲ


• ಉದಯವಾಹಿನಿ, ಬೆಂಗಳೂರು

1 ಮಾಹಿತಿ ಪೊಲೀಸರಿಗೆ ನೀಡಿ
2 ಸಿಲುಕಿರುವುದು ದೃಢಪಟ್ಟಿದ್ದು
3 ವಾಟ್ಸ್‌ಆಪ್‌ನಲ್ಲಿಯೂ ಲಭ್ಯವಿವೆ

ನೇಪಾಳದಲ್ಲಿ ಸಂಭವಿಸಿದ ಭೀಕರ ಹಠಾತ್ ಪ್ರವಾಹದ ಬಳಿಕ ಸುಮಾರು 130ರಿಂದ 140 ಭಾರತೀಯರು ನಾಪತ್ತೆಯಾಗಿದ್ದಾರೆ ಎಂದು ವರದಿಯಾಗಿದ್ದು, ಈ ಸಂಖ್ಯೆ ಇನ್ನೂ ಖಚಿತವಾಗಿಲ್ಲ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ನೇಪಾಳದಲ್ಲಿ ಸಿಲುಕಿರುವ ಕರ್ನಾಟಕದವರ ಕುರಿತು ಹೆಚ್ಚಿನ ನಿಖರ ಮಾಹಿತಿ ಪಡೆಯಲು ರಾಜ್ಯ ಸರ್ಕಾರವು ವಿದೇಶಾಂಗ ವ್ಯವಹಾರಗಳ ಸಚಿವಾಲಯದಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದು ಅವರು ಹೇಳಿದರು. ಸದ್ಯದ ಮಾಹಿತಿಯ ಪ್ರಕಾರ ನೇಪಾಳದ ಪ್ರವಾಹದಲ್ಲಿ ಸುಮಾರು 130ರಿಂದ 140 ಭಾರತೀಯರು ನಾಪತ್ತೆಯಾಗಿದ್ದಾರೆ. ಆದರೆ ಈ ಸಂಖ್ಯೆ ಇನ್ನೂ ಖಚಿತಪಡಿಸಬೇಕಿದೆ. ಸರ್ಕಾರವು ವಿದೇಶಾಂಗ ವ್ಯವಹಾರಗಳ ಸಚಿವಾಲಯದೊಂದಿಗೆ ಸಂಪರ್ಕದಲ್ಲಿದೆ. ಕಲಬುರಗಿಯ ಇಬ್ಬರು ನೇಪಾಳದಲ್ಲಿ ಸಿಲುಕಿರುವುದು ದೃಢಪಟ್ಟಿದ್ದು, ಇನ್ನೂ ಯಾರಾದರೂ ಅಲ್ಲಿ ಸಿಲುಕಿದ್ದಾರೆಯೇ ಎಂಬುದನ್ನು ಪತ್ತೆಹಚ್ಚಲು ಪ್ರಯತ್ನಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ನೇಪಾಳದಲ್ಲಿ ಸಿಲುಕಿರುವ ತಮ್ಮ ಕುಟುಂಬದವರು ಅಥವಾ ಸಂಬಂಧಿಕರ ಕುರಿತು ಯಾವುದೇ ಮಾಹಿತಿ ಇದ್ದರೆ, ಅವರ ವಿವರಗಳನ್ನು ಸ್ಥಳೀಯ ಪೊಲೀಸ್ ಠಾಣೆಗಳಿಗೆ ನೀಡುವಂತೆ ಅವರು ಮನವಿ ಮಾಡಿದ್ದಾರೆ.

ಉದಯವಾಹಿನಿ ಚಿತ್ರ



ನಮ್ಮ ಜನರ ಅನುಕೂಲಕ್ಕಾಗಿ ಸಚಿವಾಲಯವು ಮೂರು ದೂರವಾಣಿ ಸಂಖ್ಯೆಗಳನ್ನು ನೀಡಿದ್ದು, ಅವು ವಾಟ್ಸ್‌ಆಪ್‌ನಲ್ಲಿಯೂ ಲಭ್ಯವಿವೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು. ಬೆಳಗಾವಿಯ ಕೆಲವರು ನೇಪಾಳದಲ್ಲಿರುವ ಬಗ್ಗೆ ವರದಿಗಳು ಬಂದಿವೆ. ಅದೇ ರೀತಿ ಕಲಬುರಗಿ ಜಿಲ್ಲೆಯ ಚಿಂಚೋಳಿಯ ಇಬ್ಬರು ನೇಪಾಳ ಪ್ರವಾಹದಲ್ಲಿ ಸಿಲುಕಿರುವ ಬಗ್ಗೆ ಮಾಹಿತಿ ಲಭ್ಯವಾಗಿದ್ದು, ಈ ವಿಷಯವನ್ನು ಸ್ಥಳೀಯ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದರು. ಸದ್ಯ ಕರ್ನಾಟಕದ ಎಷ್ಟು ಮಂದಿ ನೇಪಾಳದಲ್ಲಿ ಸಿಲುಕಿದ್ದಾರೆ ಎಂಬುದು ನಮಗೂ ಖಚಿತವಾಗಿಲ್ಲ, ಬೆಳಗಾವಿಯಿಂದ ಕೆಲವರು ಅಲ್ಲಿದ್ದಾರೆ ಎಂಬ ವರದಿಗಳು ಬರುತ್ತಿವೆ, ಆದರೆ ಅದು ಇನ್ನೂ ದೃಢಪಟ್ಟಿಲ್ಲ. ಕಲಬುರಗಿಯ ಚಿಂಚೋಳಿಯ ಇಬ್ಬರು ನೇಪಾಳ ಪ್ರವಾಹದಲ್ಲಿ ಸಿಲುಕಿದ್ದಾರೆ ಎಂಬ ಮಾಹಿತಿ ಬಂದಿದ್ದು, ಈ ಕುರಿತು ನಮ್ಮ ಎಸ್‌ಪಿಗೆ ತಿಳಿಸಲಾಗಿದೆ ಎಂದು ಹೇಳಿದರು.

**ನೇಪಾಳದಲ್ಲಿ ಕರ್ನಾಟಕದ ಯಾವುದೇ ನಿವಾಸಿಗಳು ನಾಪತ್ತೆಯಾಗಿರುವ ಬಗ್ಗೆ ಮಾಹಿತಿ ಇದ್ದರೆ, ಕೂಡಲೇ ಸ್ಥಳೀಯ ಪೊಲೀಸ್ ಠಾಣೆ ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ಸಂಪರ್ಕಿಸುವಂತೆ ಸಚಿವರು ಮನವಿ ಮಾಡಿದರು.** ಸಚಿವ ಪ್ರಿಯಾಂಕ್ ಖರ್ಗೆ

### ಸ್ನೇಹಿತರಿಗೆ ಸೂಕ್ತ ಮಾಹಿತಿ

**ನಮ್ಮ ರಾಜ್ಯದ ಯಾರಾದರೂ ನೇಪಾಳದಲ್ಲಿ ನಾಪತ್ತೆಯಾಗಿರುವ ಬಗ್ಗೆ ನಿಮಗೆ ಮಾಹಿತಿ ಇದ್ದರೆ, ದಯವಿಟ್ಟು ಸಾಧ್ಯವಾದಷ್ಟು ಬೇಗ ಸ್ಥಳೀಯ ಪೊಲೀಸ್ ಠಾಣೆಯನ್ನು ಅಥವಾ ಕನಿಷ್ಠ ಜಿಲ್ಲಾ ಎಸ್‌ಪಿಯನ್ನು ಸಂಪರ್ಕಿಸಿ. ನೀವು ನಮಗೆ ಮಾಹಿತಿ ನೀಡಿದರೆ, ಅವರ ಕುಟುಂಬಸ್ಥರು ಹಾಗೂ ಸ್ನೇಹಿತರಿಗೆ ಸೂಕ್ತ ಮಾಹಿತಿ ತಲುಪಿಸಲು ಅಗತ್ಯ ಸಂಪರ್ಕ ವ್ಯವಸ್ಥೆ ಕಲ್ಪಿಸುವುದನ್ನು ನಾವು ಖಚಿತಪಡಿಸುತ್ತೇವೆ ಎಂದು ಅವರು ಹೇಳಿದರು.**

**ನೇಪಾಳದ ಭೋಟೆ ಕೋಶಿ ನದಿಯಲ್ಲಿ ಭೀಕರ ಹಠಾತ್ ಪ್ರವಾಹ ಸಂಭವಿಸಿದ ಹಿನ್ನೆಲೆಯಲ್ಲಿ ಹಲವು ರಾಜ್ಯ ಸರ್ಕಾರಗಳು ಹಾಗೂ ಕಠ್ಮಂಡುವಿನಲ್ಲಿರುವ ಭಾರತೀಯ ರಾಯಭಾರ ಕಚೇರಿ ತುರ್ತು ಸಹಾಯವಾಣಿ ವ್ಯವಸ್ಥೆಗಳನ್ನು ಸ್ಥಾಪಿಸಿವೆ.**

ಉದಯ ವಾಹಿನಿ

ಪ್ರಾದೇಶಿಕ

ಶುಕ್ರವಾರ 28 ಆಗಸ್ಟ್ 2026 | 03

# ಗುಂಡ್ಲುಪೇಟೆ ಸ್ಪೋರ್ಟ್ಸ್ ಅಸೋಸಿಯೇಷನ್‌ನಿಂದ ಸ್ವಚ್ಛತಾ ಕಾರ್ಯ

• ಉದಯವಾಹಿನಿ, ಗುಂಡ್ಲುಪೇಟೆ

ಪಟ್ಟಣದ ಹಿಂದೂ ರುದ್ರಭೂಮಿಯಲ್ಲಿ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯ, ಮೈ ಭಾರತ್ ಕೇಂದ್ರ, ಚಾಮರಾಜನಗರ ಹಾಗೂ ಗುಂಡ್ಲುಪೇಟೆ ಸ್ಪೋರ್ಟ್ಸ್ ಅಸೋಸಿಯೇಷನ್ ವತಿಯಿಂದ 'ಸ್ವಚ್ಛತಾ ಪಕ್ವಾಡಾ 2026-27' ಅಂಗವಾಗಿ ಸ್ವಚ್ಛತಾ ಕಾರ್ಯ ಹಮ್ಮಿಕೊಳ್ಳಲಾಯಿತು.

ಗುಂಡ್ಲುಪೇಟೆ ಸ್ಪೋರ್ಟ್ಸ್ ಅಸೋಸಿಯೇಷನ್ ಅಧ್ಯಕ್ಷ ಗೋವಿಂದರಾಜು ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿ, ರುದ್ರಭೂಮಿಯಲ್ಲಿ ಸಾರ್ವಜನಿಕರು ಕುಳಿತುಕೊಳ್ಳುವ ಸ್ಥಳಗಳಲ್ಲಿ ಮದ್ಯದ ಬಾಟಲಿಗಳು, ಪೌಚ್‌ಗಳು ಸೇರಿದಂತೆ ವಿವಿಧ ತ್ಯಾಜ್ಯ ವಸ್ತುಗಳು ಬಿದ್ದಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಸ್ಮಶಾನವೆಂದರೆ ಭಯಪಡುವ ಸ್ಥಳ ಎಂಬ ಮೂಢನಂಬಿಕೆಯಿಂದ ಜನರು ಹೊರಬರಬೇಕು. ರುದ್ರಭೂಮಿಯನ್ನ ಪವಿತ್ರ ಸ್ಥಳವೆಂದು ಪರಿಗಣಿಸಿ, ಯಾವುದೇ ತ್ಯಾಜ್ಯವನ್ನ ಎಸೆಯದೆ ಮನೆಯ ಪರಿಸರದಂತೆ ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಮನವಿ ಮಾಡಿದರು. ರುದ್ರಭೂಮಿಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಎದ್ದು ಕಾಣುತ್ತಿದೆ.



ಉದಯವಾಹಿನಿ ಚಿತ್ರ

ಶವಸಂಸ್ಕಾರಕ್ಕೆ ಆಗಮಿಸುವ ಸಾರ್ವಜನಿಕರು ಕೈಕಾಲು ಹಾಗೂ ಮುಖ ತೊಳೆಯಲು ಕನಿಷ್ಠ ನೀರಿನ ವ್ಯವಸ್ಥೆಯೂ ಇಲ್ಲ.

ಅಲ್ಲದೆ, ಕುಳಿತುಕೊಳ್ಳಲು ಸೂಕ್ತ ವ್ಯವಸ್ಥೆ ಇಲ್ಲದಿರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ಪುರಸಭೆ ಕೂಡಲೇ ಗಮನಹರಿಸಿ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಕರವೇ ರಾಜೇಂದ್ರ ವಿ. ನಾಯಕ್, ಜಾರಕಿಹೊಳಿ ಬ್ರಿಗೇಡ್‌ನ ಗಿರೀಶ್, ಎಸ್. ರವಿ ಬಾಂಡ್, ಧನುಷ್ ಗೌಡ, ಮನೋಜ್ ಪಿ. ನಾಯಕ್, ಮಾಚೇಶ್, ಅಪ್ಪು, ಅರುಣ್ ಹಾಗೂ ಕೆಂಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಸಿದ್ದರಾಮಯ್ಯ ಕ್ಷೇತ್ರದಲ್ಲಿ 165 ಎಕರೆ ಕೃಷಿ ಭೂಮಿಗೆ ಕೈ ಹಾಕಿದ ಸರ್ಕಾರ!

• ಉದಯವಾಹಿನಿ, ಮೈಸೂರು

ರಾಮನಗರ ಜಿಲ್ಲೆಯ ಬಿಡದಿ ಟೌನ್‌ಶಿಪ್ ಭೂಸ್ವಾಧೀನ ವಿವಾದದ ಬೆನ್ನಲ್ಲೇ, ಇದೀಗ ಮೈಸೂರು ಜಿಲ್ಲೆಯಲ್ಲೂ ರೈತರ ಫಲವತ್ತಾದ ಕೃಷಿ ಭೂಮಿಗೆ ರಾಜ್ಯ ಸರ್ಕಾರ ಕೈಹಾಕಿದೆ ಎಂಬ ಆರೋಪ ಕೇಳಿಬಂದಿದೆ.ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿನಿಧಿಸುವ ವರುಣಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಬರೋಬ್ಬರಿ 165 ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಸ್ಥಳೀಯ ರೈತರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಮೈಸೂರು ವಿಮಾನ ನಿಲ್ದಾಣದ ಸಮೀಪವಿರುವ ವರುಣಾ ಕ್ಷೇತ್ರದ ಮರಸೆ ಹಾಗೂ ಮದರಗಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿ ಈ 165 ಎಕರೆ ಭೂಮಿಯನ್ನು ಗುರುತಿಸಲಾಗಿದೆ. ಈ ಜಮೀನುಗಳಲ್ಲಿ ರೈತರು ಅಡಕೆ, ಬಾಳೆ, ತೆಂಗು, ಭತ್ತ ಸೇರಿದಂತೆ ವಾಣಿಜ್ಯ ಮತ್ತು ಆಹಾರ ಬೆಳೆಗಳನ್ನು ಬೆಳೆದು ಜೀವನ ಸಾಗಿಸುತ್ತಿದ್ದಾರೆ. ಸಮೃದ್ಧವಾಗಿ ಬೆಳೆ ತೆಗೆಯುತ್ತಿರುವ ಭೂಮಿಯನ್ನೇ ಕೈಗಾರಿಕೆ ಹೆಸರಿನಲ್ಲಿ ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಮುಂದಾಗಿರುವುದು ಅನ್ನದಾತರ ಆತಂಕವನ್ನು ಹೆಚ್ಚಿಸಿದೆ. ವಿಮಾನ ನಿಲ್ದಾಣಕ್ಕೆ ಹತ್ತಿರವಿರುವ ಮರಸೆ-ಮದರಗಳ್ಳಿ ಭಾಗದಲ್ಲಿ ಕೈಗಾರಿಕಾ ಪ್ರದೇಶ ನಿರ್ಮಾಣಕ್ಕಾಗಿ ಕೆಐಎಡಿಬಿ ನೋಟಿಫಿಕೇಷನ್ ಜಾರಿ ಮಾಡಿದೆ. ಜೀವನಕ್ಕೆ ಆಧಾರವಾಗಿರುವ ಫಲವತ್ತಾದ ಭೂಮಿಯನ್ನು ಯಾವುದೇ ಕಾರಣಕ್ಕೂ ಕೈಗಾರಿಕೆಗೆ ಬಿಟ್ಟುಕೊಡುವುದಿಲ್ಲ ಎಂದು ಸ್ಥಳೀಯ ರೈತರು ಪಟ್ಟುಹಿಡಿದಿದ್ದಾರೆ.

# ನಂಜನಗೂಡು ಶ್ರೀಕಂಠೇಶ್ವರ ದೇವಾಲಯದಲ್ಲಿ ಕೋಟಿ ಕೋಟಿ ಗೋಲ್ಮಾಲ್ ಶಂಕೆ!

## ದಕ್ಷಿಣ ಕಾಶಿ ನಂಜನಗೂಡಿನ ಐತಿಹಾಸಿಕ ಶ್ರೀಕಂಠೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಕೋಟ್ಯಂತರ ರೂಪಾಯಿ ಗೋಲ್ಮಾಲ್ ನಡೆದಿರುವ ಆರೋಪ ಕೇಳಿಬಂದಿದೆ.

• ಉದಯವಾಹಿನಿ, ನಂಜನಗೂಡು

**1** 25.86 ಕೋಟಿ ರೂ. ಆದಾಯ ಬಂದಿದ್ದು

**2** 4 ರಿಂದ 5 ಕೋಟಿ ರೂ. ದುರುಪಯೋಗ

**3** ಖರ್ಚು-ವೆಚ್ಚಗಳ ಲೆಕ್ಕಪತ್ರವನ್ನು ಪರಿಶೀಲಿಸಿ

ದಕ್ಷಿಣ ಕಾಶಿ ಎಂದೇ ಹೆಸರಾದ ಮೈಸೂರು ಜಿಲ್ಲೆಯ ಪ್ರಸಿದ್ಧ ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ 2024-25ನೇ ಸಾಲಿನ ಲೆಕ್ಕಪತ್ರದಲ್ಲಿ ಕೋಟ್ಯಂತರ ರೂಪಾಯಿ ಅಕ್ರಮ ನಡೆದಿರುವ ಶಂಕೆ ವ್ಯಕ್ತವಾಗಿದೆ. ಶಾಸಕ ದರ್ಶನ್ ಧ್ರುವನಾರಾಯಣ್ ಅವರ ನೇತೃತ್ವದಲ್ಲಿ ನಡೆದ ದೇವಾಲಯದ ವ್ಯವಸ್ಥಾಪನಾ ಸಮಿತಿ ಕುಂದು-ಕೊರತೆಗಳ ಸಭೆಯಲ್ಲಿ ವಾರ್ಷಿಕ ಆಯವ್ಯಯ ಪರಿಶೀಲನೆ ನಡೆಸಿದಾಗ, 2024-25ನೇ ಸಾಲಿನ ಲೆಕ್ಕಪತ್ರದಲ್ಲಿ ಸುಮಾರು 4 ರಿಂದ 5 ಕೋಟಿ ರೂಪಾಯಿಗಳ ಭಾರೀ ಅಕ್ರಮ ನಡೆದಿರುವ ಶಂಕೆ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ದೇವಾಲಯದ ವ್ಯವಸ್ಥಾಪನ ಸಮಿತಿ ಸಭೆಯಲ್ಲಿ ಸಮಗ್ರ ತನಿಖೆಗೆ ಆದೇಶಿಸಲಾಗಿದೆ. ಆ ಕುರಿತ ವರದಿ ಇಲ್ಲಿದೆ:

ಶಾಸಕ ದರ್ಶನ್ ಧ್ರುವನಾರಾಯಣ್ ಅವರ ನೇತೃತ್ವದಲ್ಲಿ ನಡೆದ ದೇವಾಲಯದ ವ್ಯವಸ್ಥಾಪನಾ ಸಮಿತಿಯ ವಾರ್ಷಿಕ ಸಭೆಯಲ್ಲಿ, 2024-25ನೇ ಸಾಲಿನ ಲೆಕ್ಕಪತ್ರವನ್ನು ಪರಿಶೀಲಿಸಿದಾಗ, ದೇವಾಲಯಕ್ಕೆ ಒಟ್ಟು 25.86 ಕೋಟಿ ರೂ. ಆದಾಯ ಬಂದಿದ್ದು, ಅದರಲ್ಲಿ ಬರೋಬ್ಬರಿ 25.68 ಕೋಟಿ ರೂ. ಖರ್ಚು ತೋರಿಸಲಾಗಿದೆ. ಅದರಲ್ಲೂ, ಬಂದ ಆದಾಯದಲ್ಲಿ ಬಹುಪಾಲು ಹಣವನ್ನು ವಿವಿಧ ವೆಚ್ಚಗಳ ಹೆಸರಿನಲ್ಲಿ ಖಾಲಿ ಮಾಡಿರುವುದರ ಹಿಂದೆ 4 ರಿಂದ 5 ಕೋಟಿ ರೂ. ದುರುಪಯೋಗ ಆಗಿರುವ ಬಲವಾದ ಸಂಶಯ ಮೂಡಿದೆ.



ಅದರಂತೆ, ದೇವಾಲಯದ ಸಿಸಿಟಿವಿ ರಿಪೇರಿಗೆ 29 ಲಕ್ಷ, ಪಾರ್ಕಿಂಗ್ ನಿರ್ವಹಣೆಗೆ 17 ಲಕ್ಷ, ಲಾಡು ತಯಾರಿಕೆಗೆ 3 ಕೋಟಿಗೂ ಅಧಿಕ ಹಾಗೂ ಅತಿಥಿಗಳ ಶಲ್ಯ ಖರೀದಿಗೆ 11 ಲಕ್ಷ ರೂಪಾಯಿ ವೆಚ್ಚ ತೋರಿಸಿರುವುದು ಅನುಮಾನಕ್ಕೆ ಕಾರಣವಾಗಿದೆ. ಅದರಲ್ಲೂ, ಈ ಹಿಂದಿನ ವರ್ಷಗಳಲ್ಲಿ ಸುಮಾರು 4 ಕೋಟಿಗೂ ಹೆಚ್ಚು ಉಳಿತಾಯವಾಗುತ್ತಿದ್ದ ಸಂದರ್ಭದಲ್ಲಿ 2024-25ರಲ್ಲಿ ಮಾತ್ರ ಉಳಿತಾಯ ಇಷ್ಟು ಕಡಿಮೆಯಾಗಿರುವುದೇಕೆ ಎಂಬ ಪ್ರಶ್ನೆ ಎತ್ತಿದ್ದಾರೆ.

ಏತನ್ಮಧ್ಯೆ, ಯಾವುದೇ ಅಭಿವೃದ್ಧಿ ಕಾಮಗಾರಿ ನಡೆಯದ ಕಳಲೆ ದೇವಸ್ಥಾನಕ್ಕೂ 18 ಲಕ್ಷ ವೆಚ್ಚದ ಲೆಕ್ಕ ತೋರಿಸಿರುವ ಬಗ್ಗೆ ಪ್ರಶ್ನೆಗಳು ಎದ್ದಿವೆ. ಯಾಕಂದ್ರೆ, ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ 2024-25 ನೇ ಸಾಲಿನ ಖರ್ಚು-ವೆಚ್ಚದ ಲೆಕ್ಕಪತ್ರಗಳ ಪ್ರಕಾರ, ಶ್ರೀ ಲಕ್ಷ್ಮೀಕಾಂತ ಸ್ವಾಮಿ ದೇವಾಲಯದ ಕಾಮಗಾರಿಗೆ 14 ಲಕ್ಷ ಹಾಗೂ ಜಾತ್ರೆಗೆ 4 ಲಕ್ಷ ಖರ್ಚು ಮಾಡಲಾಗಿದೆ. ಆದರೆ, ಆ ವರ್ಷ, ದೇವಾಲಯದಲ್ಲಿ ಯಾವುದೇ ಕಾಮಗಾರಿ ನಡೆದಿಲ್ಲ ಎನ್ನಲಾಗಿದೆ. ಹಾಗಾಗಿ, ಶ್ರೀಕಂಠೇಶ್ವರ ದೇವಾಲಯದ ಹೆಸರಲ್ಲಿ ಲೆಕ್ಕಪತ್ರದಲ್ಲಿ ಕೋಟ್ಯಂತರ ರೂಪಾಯಿ ಅಕ್ರಮ ನಡೆದಿರಬಹುದು ಎನ್ನಲಾಗಿದೆ.

**ಇನ್ನು, ದೇವಾಲಯದ ಈ ಖರ್ಚು-ವೆಚ್ಚಗಳ ಲೆಕ್ಕಪತ್ರವನ್ನು ಪರಿಶೀಲಿಸಿದ ಸ್ಥಳೀಯ ಶಾಸಕರಾದ ದರ್ಶನ್ ಧ್ರುವನಾರಾಯಣ್ ಅವರು ತೀವ್ರ ಆಶ್ಚರ್ಯ ಹಾಗೂ ಆಘಾತ ವ್ಯಕ್ತಪಡಿಸಿ, ಕ್ಕಪತ್ರದ ಸತ್ಯಾಸತ್ಯತೆಯನ್ನು ಹೊರತರಲು ಉನ್ನತ ಮಟ್ಟದ ತನಿಖೆಗೆ ಸೂಚನೆ ನೀಡಿದ್ದಾರೆ.**

### 86 ಲಕ್ಷಕ್ಕೂ ಅಧಿಕ ಆದಾಯ

**ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿಯಾದ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ 2024-25ನೇ ಸಾಲಿನ ಖರ್ಚು-ವೆಚ್ಚದ ಲೆಕ್ಕಪತ್ರಗಳ ಪ್ರಕಾರ, ದೇವಾಲಯಕ್ಕೆ ಬರೋಬ್ಬರಿ 25 ಕೋಟಿ 86 ಲಕ್ಷಕ್ಕೂ ಅಧಿಕ ಆದಾಯ ಬಂದಿದ್ದು, ಅದರಲ್ಲಿ ಅಧಿಕಾರಿಗಳು ಬರೋಬ್ಬರಿ 25 ಕೋಟಿ 68 ಲಕ್ಷ ರೂಪಾಯಿಗಳನ್ನು ಖರ್ಚು ತೋರಿಸಿ ಕೇವಲ 17.84 ಲಕ್ಷ ರೂಪಾಯಿಗಳನ್ನು ಮಾತ್ರ ಉಳಿತಾಯ ಎಂದು ತೋರಿಸಿದ್ದಾರೆ.**

### 4 ರಿಂದ 5 ಕೋಟಿ ವಂಚನೆ

**ಶಾಸಕ ದರ್ಶನ್ ಧ್ರುವನಾರಾಯಣ್ ಅವರ ನೇತೃತ್ವದಲ್ಲಿ ನಡೆದ ದೇವಾಲಯದ ವ್ಯವಸ್ಥಾಪನಾ ಸಮಿತಿಯ ವಾರ್ಷಿಕ ಸಭೆಯಲ್ಲಿ, 2024-25ನೇ ಸಾಲಿನ ಲೆಕ್ಕಪತ್ರವನ್ನು ಪರಿಶೀಲಿಸಿದಾಗ, ದೇವಾಲಯಕ್ಕೆ ಒಟ್ಟು 25.86 ಕೋಟಿ ರೂ. ಆದಾಯ ಬಂದಿದ್ದು, ಅದರಲ್ಲಿ ಬರೋಬ್ಬರಿ 25.68 ಕೋಟಿ ರೂ. ಖರ್ಚು ತೋರಿಸಲಾಗಿದೆ. ಅದರಲ್ಲೂ, ಬಂದ ಆದಾಯದಲ್ಲಿ ಬಹುಪಾಲು ಹಣವನ್ನು ವಿವಿಧ ವೆಚ್ಚಗಳ ಹೆಸರಿನಲ್ಲಿ ಖಾಲಿ ಮಾಡಿರುವುದರ ಹಿಂದೆ 4 ರಿಂದ 5 ಕೋಟಿ ರೂ. ದುರುಪಯೋಗ ಆಗಿರುವ ಬಲವಾದ ಸಂಶಯ ಮೂಡಿದೆ.**

# ಜಿಲ್ಲಾ ಜೆಡಿಎಸ್ ಕಚೇರಿ ಉದ್ಘಾಟಿಸಿದ ಮಾಜಿ ಶಾಸಕ ಎ.ಮಂಜುನಾಥ್



ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಮನಗರ

ಜಿಲ್ಲಾ ಕೇಂದ್ರದಲ್ಲಿ ಉತ್ತಮ ಜೆಡಿಎಸ್ ಕಚೇರಿ ಬೇಕೆಂಬುದು ಕಾರ್ಯಕರ್ತರ ಬಹು ದಿನಗಳ ಬೇಡಿಕೆಯಾಗಿತ್ತು. ಇದೀಗ ಬಸ್ ನಿಲ್ದಾಣಕ್ಕೆ ಸಮೀಪದಲ್ಲಿ ಎಲ್ಲರಿಗೂ ಅನುಕೂಲವಾಗಲೆಂದು ಕಚೇರಿ ಪ್ರಾರಂಭಿಸಲಾಗಿದೆ ಎಂದು ಮಾಜಿ ಶಾಸಕ ಎ.ಮಂಜುನಾಥ್ ಹೇಳಿದರು.

ನಗರದ ಭಾರತಿ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟಿ ಕಟ್ಟಡದಲ್ಲಿ ಜೆಡಿಎಸ್ ನೂತನ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ತುರ್ತು ಕಾರ್ಯ ನಿಮಿತ್ತ ದೆಹಲಿಗೆ ತೆರಳಿರುವುದರಿಂದ ಕಾರ್ಯಕ್ರಮಕ್ಕೆ ಬರಲು ಸಾಧ್ಯವಾಗಲಿಲ್ಲ ಎಂದ ಅವರು, ಪಕ್ಷದ ಸಂಘಟನೆಗೆ ಹೊಸ ಕಚೇರಿಯಿಂದ ಮತ್ತಷ್ಟು ಬಲ ಬರಲಿದೆ ಎಂದು ಹೇಳಿದರು. ನೈಸ್ ರಸ್ತೆ ಟೋಲ್ ಸಂಗ್ರಹದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಟೋಲ್ ಸಂಗ್ರಹ ಹಗಲು ದರೋಡೆಯಾಗಿದ್ದು, ಇದರ ವಿರುದ್ಧ ಈಗಾಗಲೆ ಹೋರಾಟ ಪ್ರಾರಂಭಿಸಲಾಗಿದ್ದು, ಸರ್ಕಾರ ಕೂಡಲೆ ಟೋಲ್ ಸಂಗ್ರಹ ನಿಲ್ಲಿಸಲು ಕ್ರಮವಹಿಸದಿದ್ದರೆ ಹೋರಾಟ ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದರು. ಕೋರ್ಟ್ ಆದೇಶವಿದೆ ಎಂದು ಬೆಂಗಳೂರಿನಲ್ಲಿ ಪಾದಚಾರಿ ಮಾರ್ಗ ತೆರವುಗೊಳಿಸಲು ಮುಂದಾದ ಸರ್ಕಾರ, ನೈಸ್ ರಸ್ತೆ ಟೋಲ್ ಸಂಗ್ರಹದ ವಿಚಾರದಲ್ಲಿ ನ್ಯಾಯಾಲಯದ ಆದೇಶವನ್ನು ಏಕೆ ಗೌರವಿಸುತ್ತಿಲ್ಲ ಎಂದು ಪ್ರಶ್ನಿಸಿದರು. ಜೆಡಿಎಸ್ ಜಿಲ್ಲಾಧ್ಯಕ್ಷ ಜಯಮುತ್ತು, ತಾಲ್ಲೂಕು ಅಧ್ಯಕ್ಷ ಸಪ್ಪಗೆರೆ ಶಿವಲಿಂಗಪ್ಪ, ಭಾರತಿ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟಿ ಅಧ್ಯಕ್ಷ ಕೆ.ಚಂದ್ರಯ್ಯ, ಮುಖಂಡರಾದ ಸೋಮಣ್ಣ, ಪಾದರಹಳ್ಳಿ ಚಂದ್ರಶೇಖರ್, ಗೂಳಿ ಕುಮಾರ್, ದೊರೆಸ್ವಾಮಿ, ಆರ್.ಎ.ಮಂಜುನಾಥ್, ಜೈಕುಮಾರ್(ಜೈಕು) ಇದ್ದರು.

# ಕಾಮಗಾರಿ ಮುಗಿದು 6 ತಿಂಗಳು ಕಳೆದರೂ ಉದ್ಘಾಟನೆ ಭಾಗ್ಯವಿಲ್ಲದ ಅಂಗನವಾಡಿ ಕಟ್ಟಡ

• ಉದಯವಾಹಿನಿ, ನಂಜನಗೂಡು

ನಗರಸಭೆಗೆ ಸೇರಿದ 31ನೇಯ ವಾರ್ಡಿನಲ್ಲಿ ನೂತನವಾಗಿ ನಿರ್ಮಿಸಿರುವ ಅಂಗನವಾಡಿ ಕಟ್ಟಡ ಉದ್ಘಾಟನೆಯ ಭಾಗ್ಯವಿಲ್ಲದೆ ಆರು ತಿಂಗಳು ಕಳೆದಿದೆ ಎಂದು ವಾರ್ಡಿನ ಮಾಜಿ ನಗರಸಭೆ ಉಪಾಧ್ಯಕ್ಷೆ ಪತಿ ಶಂಕ್ರಪ್ಪ ಅಧಿಕಾರಿಗಳ ನಡೆಯನ್ನು ಕಂಡು ಬೇಸರ ವ್ಯಕ್ತಪಡಿಸಿದರು.

ವಾರ್ತಾಪತ್ರಿಕೆಚಂದಾದಾರಿಕೆ ನಗರಸಭೆಗೆ ಸೇರಿದ 31ನೇ ವಾರ್ಡಿನ ಸದಸ್ಯರು ಹಾಗೂ ಉಪಾಧ್ಯಕ್ಷ ಸ್ಥಾನ ಹೊಂದಿದ್ದ ನಾಗಮಣಿ ಶಂಕ್ರಪ್ಪ ಅವರ ಅವಧಿಯಲ್ಲಿ ತಮ್ಮ 31ನೆಯ ವಾರ್ಡಿಗೆ ಸುಮಾರು 20 ಲಕ್ಷ ವೆಚ್ಚದ ಹಣದಲ್ಲಿ ನಗರಸಭೆ ನಿಧಿಯಿಂದ ನೂತನ ಅಂಗನವಾಡಿ ನಿರ್ಮಾಣ ಮಾಡಲು ಅನುದಾನ ತಂದಿದ್ದರು ಅದರಂತೆ ಕೆಲಸವು ಪ್ರಾರಂಭವಾಗಿತ್ತು ಕಾಮಗಾರಿಯು, ಕುಂಟುತ್ತ ಕುಂಟುತ್ತ ಸಾಗಿ ಸುಂದರವಾದ ಅಂಗನವಾಡಿ ನಿರ್ಮಾಣವಾಗಿದೆ ಮತ್ತು ಕಾಮಗಾರಿ ಮುಗಿದು ಆರು ತಿಂಗಳು ಕಳೆದಿದೆ ಆದರೆ ಇನ್ನೂ ಕೂಡ ಉದ್ಘಾಟನೆ ಮಾಡಲು ಅಧಿಕಾರಿಗಳು ಮೀನಾ ಮೇಷ ಮಾಡುತ್ತಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ.

ಇದಕ್ಕೆ ಸಂಬಂಧಪಟ್ಟಂತೆ ನಗರಸಭೆ ಮಾಜಿ ಉಪಾಧ್ಯಕ್ಷ ನಾಗಮಣಿ ಪತಿ ಶಂಕ್ರಪ್ಪ ಮಾತನಾಡಿ ನಮ್ಮ ವಾರ್ಡಿನಲ್ಲಿ ನೂತನ ಅಂಗನವಾಡಿ ಅವಶ್ಯಕತೆ ಇತ್ತು , ಅದರಂತೆ ವಾರ್ಡಿನ ಸದಸ್ಯರು ಹಾಗೂ ಉಪಾಧ್ಯಕ್ಷರು ಆಗಿದ್ದ ನನ್ನ ಪತ್ನಿ ನಾಗಮಣಿಯವರು ನೂತನ ಕಟ್ಟಡ ನಿರ್ಮಾಣಕ್ಕೆ ನಗರಸಭೆ ನಿಧಿಯಿಂದ 20 ಲಕ್ಷ ಹಣ ಬಿಡುಗಡೆ ಮಾಡಿಸಿದರು ಅದರಂತೆ ಅಂಗನವಾಡಿ ಕಟ್ಟಡ ಕೂಡ ಬಹಳ ಸುಂದರವಾಗಿ ನಿರ್ಮಾಣ ಆಗಿದೆ ಕಾಮಗಾರಿ ಮುಗಿದು ಆರು ತಿಂಗಳು ಕಳೆಯುತ್ತಾ ಬರುತ್ತಿದೆ ಉದ್ಘಾಟನೆ ಮಾಡಲು ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಮಾಡಿದ್ದೆ .




ಉದಯವಾಹಿನಿ ಚಿತ್ರ

### ಮೀನಾ ಮೇಷ

**ಅಧಿಕಾರಿಗಳು ಕುಂಟ ನೆಪ ಹೇಳಿಕೊಂಡು ಆರು ತಿಂಗಳು ತಳ್ಳಿದ್ದಾರೆ ಇನ್ನೂ ಕೂಡ ಉದ್ಘಾಟನೆ ಮಾಡಲು ಮೀನಾ ಮೇಷ ಮಾಡುತ್ತಿದ್ದಾರೆ ಎಂದು ಅಧಿಕಾರಿಗಳ ಬಗ್ಗೆ ಬೇಸರ ವ್ಯಕ್ತಪಡಿಸಿದೆ.**

# ಹಾಥ್ ಕರ್ಗ್-ಉತ್ಸವಕ್ಕೆ ಚಾಲನೆ

• ಉದಯವಾಹಿನಿ, ಮೈಸೂರು

ಗೌರಿ ಗಣೇಶ ಹಬ್ಬದ ಹಿನ್ನೆಲೆಯಲ್ಲಿ ನಗರದ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಸೆ.8ರವರೆಗೆ ಆಯೋಜಿಸಿರುವ ಹಾಥ್ ಕರ್ಗ್-ಉತ್ಸವ ನನ್ನ ಕೈಮಗ್ಗ ನನ್ನ ಹೆಮ್ಮೆ ಶೀರ್ಷಿಕೆ ಅಡಿಯ ಕೈಮಗ್ಗ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಬುಧವಾರ ಚಾಲನೆ ದೊರೆಯಿತು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರ್ನಾಥ್ ಮೇಳಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮೇಳದಲ್ಲಿ ನೇಕಾರರೇ ನೇಯ್ದ ಉತ್ಪನ್ನಗಳು ಯಾವುದೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ಗ್ರಾಹಕರಿಗೆ ಸಿಗುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು.

ನೇಕಾರರಿಗೆ ಬೆಂಬಲ, ಪ್ರೋತ್ಸಾಹ ನೀಡಬೇಕು ಎಂದು ತಿಳಿಸಿದರು. ಮೇಳದಲ್ಲಿ ಮೊಳಕಾಲ್ಮೂರು ಸೀರೆ, ಇಳಕಲ್ ಸೀರೆ, ರೇಷ್ಮೆ, ಕಾಟನ್ ಸೀರೆ, ಕಸೂತಿ ಸೀರೆ, ಬೆಡ್‌ಶೀಟ್, ನೆಲಹಾಸು ಸೇರಿದಂತೆ ವಿವಿಧ ಕೈಮಗ್ಗ ಉತ್ಪನ್ನಗಳು, ತಮಿಳುನಾಡಿನ ಕಾಂಜೀವರಂ ಸೀರೆ, ಬಿಹಾರ ಮತ್ತು ಜಾರ್ಖಂಡ್‌ನ ತಸ್ಸರ್ ಸೀರೆ, ಪಶ್ಚಿಮ ಬಂಗಾಳದ ಕಾಂತಾ ಮತ್ತು ಬಾಲುಚರಿ ಸೀರೆ, ಉತ್ತರ ಪ್ರದೇಶದ ಬನಾರಸಿ ಸಿಲ್ಕ್, ಚಿಕನ್ ಎಂಬ್ರಾಯಿಡರಿ ಸೀರೆ, ಮಧ್ಯಪ್ರದೇಶದ ಚಂದೇರಿ ಮತ್ತು ಮಹೇಶ್ವರಿ ಸೀರೆ,



ಉದಯವಾಹಿನಿ ಚಿತ್ರ

ಒಡಿಶಾದ ಸಂಬಲ್ಪುರಿ, ಇಕ್ಕತ್ ಮತ್ತು ಬೋಂಕಾಯಿ ಸೀರೆಗಳು, ಇನ್ನಿತರ ಕೈಮಗ್ಗದ ಉತ್ಪನ್ನಗಳು ನೇಕಾರರಿಂದ ನೇರವಾಗಿ ಗ್ರಾಹಕರ ಕೈಗೆ ಸೂಕ್ತ ದರದಲ್ಲಿ ತಲುಪಲಿವೆ. ವೀಕ್ಷಿಸಲು ಸಹಾ ಅವಕಾಶವಿದೆ.

ಗೌರಿ-ಗಣೇಶ ಹಬ್ಬದ ಖರೀದಿಗೆ ವಿಶೇಷ ಅವಕಾಶವಾಗಿರುವ ಈ ಮೇಳದಲ್ಲಿ ಸಾರ್ವಜನಿಕರು ನೇಕಾರರಿಂದ ನೇರವಾಗಿ ಗುಣಮಟ್ಟದ ಕೈಮಗ್ಗ ಉತ್ಪನ್ನಗಳನ್ನು ಖರೀದಿಸಬಹುದಾಗಿದೆ. ಮೇಳ ಪ್ರತಿದಿನ ಬೆಳಿಗ್ಗೆ 10ರಿಂದ ರಾತ್ರಿ 9ರವರೆಗೆ ತೆರೆದಿರಲಿದ್ದು, ಪ್ರವೇಶ ಉಚಿತವಾಗಿದೆ.

### ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ

**ಸಾರ್ವಜನಿಕರ ಅನುಕೂಲಕ್ಕಾಗಿ ವಿಶಾಲವಾದ ಪಾರ್ಕಿಂಗ್ ವ್ಯವಸ್ಥೆಯೂ ಇದೆ. ಮೈಸೂರು ಹಾಗೂ ಸುತ್ತಮುತ್ತಲಿನ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ, ಕೈಮಗ್ಗ ನೇಕಾರರನ್ನು ಪ್ರೋತ್ಸಾಹಿಸುವಂತೆ ಆಯೋಜಕರು ಮನವಿ ಮಾಡಿದ್ದಾರೆ.**

# ಕಬ್ಬಿನ ತೋಟದಲ್ಲಿ ನಾಲ್ಕು ಚಿರತೆ ಮರಿಗಳು ಪ್ರತ್ಯಕ್ಷ: ಅರಣ್ಯ ಇಲಾಖೆಯಿಂದ ತಾಯಿ ಚಿರತೆ ಸೆರೆಗೆ ಕಾರ್ಯಾಚರಣೆ

• ಉದಯವಾಹಿನಿ, ರಾಮನಗರ

ನಾಲ್ಕು ಚಿರತೆ ಮರಿಗಳು ಕಬ್ಬಿನ ಗದ್ದೆಯಲ್ಲಿ ಕಾಣಿಸಿಕೊಂಡಿದೆ. ಬೊಂಬೆನಗರಿ ಚನ್ನಪಟ್ಟಣ ತಾಲೂಕಿನ ನೇರಳೂರು ಗ್ರಾಮದ ರೈತ ನಾಗೇಶ್ ಎಂಬುವವರಿಗೆ ಸೇರಿದ ಕಬ್ಬಿನ ತೋಟದಲ್ಲಿ ಕಬ್ಬು ಕಟಾವು ಮಾಡುವ ವೇಳೆ ಚಿರತೆ ಮರಿಗಳು ಕಾಣಿಸಿಕೊಂಡಿವೆ.

ನೇರಳೂರು ಗ್ರಾಮದ ನಾಗೇಶ್ ಎಂಬುವರ ತೋಟದಲ್ಲಿ ಎಂದಿನಂತೆ ಕಾರ್ಮಿಕರು ಕಬ್ಬು ಕಟ್ ಮಾಡುವಾಗ ಚಿರತೆ ಮರಿಗಳನ್ನು ಕಂಡು ಗಾಬರಿಗೊಂಡಿದ್ದಾರೆ.

ತಾಯಿ ಚಿರತೆಯೂ ಸ್ಥಳದಲ್ಲಿದ್ದು, ತಮ್ಮ ಮೇಲೆ ದಾಳಿ ನಡೆಸಬಹುದೆಂಬ ಆತಂಕದಿಂದ ತೋಟದಿಂದ ಓಡಿ ಬಂದು ಮಾಲೀಕರಿಗೆ ವಿಷಯ ತಿಳಿಸಿದ್ದಾರೆ. ಮಾಲೀಕರು ತಕ್ಷಣ ಅರಣ್ಯ ಇಲಾಖೆ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿ ಸ್ಥಳಕ್ಕೆ ಬಂದ ಅಧಿಕಾರಿಗಳು ಚಿರತೆ ಮರಿಗಳನ್ನು ರಕ್ಷಿಸಿದ್ದಾರೆ. ಅರಣ್ಯಾಧಿಕಾರಿಗಳು ಸ್ಥಳಕ್ಕೆ ಬಂದಾಗ ತಾಯಿ ಚಿರತೆ ಮರಿಗಳನ್ನು ಬಿಟ್ಟು ಹೊರಟಿತ್ತು.

ಸ್ಥಳದ ಸುತ್ತಮುತ್ತ ಚಿರತೆ ಇರಬಹುದು ಎಂದು ಹುಡುಕಾಟ ನಡೆಸಿದರು. ಆದರೆ ತಾಯಿ ಚಿರತೆ ಪತ್ತೆಯಾಗಲಿಲ್ಲ. ಮಾಲೀಕರು ತಕ್ಷಣ ಅರಣ್ಯ ಇಲಾಖೆ ಅಧಿಕಾರಿಗಳಿಗೆ ನಾಲ್ಕೂ ಮರಿಗಳು ನಾಲ್ಕೈದು ದಿನಗಳ ಹಿಂದೆ ಜನಿಸಿರುವ ಸಾಧ್ಯತೆ ಇದ್ದು, ಅವುಗಳನ್ನು ಪೋಷಣೆ ಮಾಡುವುದು ಕಷ್ಟವಾಗುತ್ತದೆ. ಹಾಗಾಗಿ ಮರಿಗಳನ್ನು ಸ್ಥಳದಲ್ಲೆ ಬಿಟ್ಟು, ತಾಯಿ ಚಿರತೆ ಸೆರೆಗೆ ಸ್ಥಳದಲ್ಲಿ ಬೋನು ಇಡಲಾಗಿದೆ. ಸೆರೆಯಾದ ಬಳಿಕ, ತಾಯಿ ಚಿರತೆ ಹಾಗೂ ಮರಿಗಳ ಸಮೇತ ಕಾಡಿಗೆ ಬಿಡಲಾಗುವುದು ಎಂದು ಅರಣ್ಯಾಧಿಕಾರಿ ಮಲ್ಲೇಶ್ ತಿಳಿಸಿದ್ದಾರೆ.

# ದಯಾಮರಣ ಕೋರಿದ್ದ ಮಹಿಳೆ ಮಕ್ಕಳೊಂದಿಗೆ ಆತ್ಮಹತ್ಯೆ

• ಉದಯವಾಹಿನಿ, ತುಮಕೂರು

ದಯಾಮರಣ ಕೋರಿದ್ದ ಮಹಿಳೆ ತನ್ನಿಬ್ಬರು ಮಕ್ಕಳೊಂದಿಗೆ ಆತ್ಮಹತ್ಯೆ ಮಾಡಿಕೊಂಡ ಘಟನೆ ತುಮಕೂರು ಜಿಲ್ಲೆ ಶಿರಾ ನಗರದ ಹೊರವಲಯದಲ್ಲಿ ನಡೆದಿದೆ.

ತಾಯಿ ರಾಬಿಯಾ ಪಾಷಾ (39), ಮಗಳು ತಮನ್ನಾ (9), ಮಗ ಸಿಮ್ರಾನ್ (5) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿಗಳು. ಘಟನೆ ಸಂಬಂಧ ಶಿರಾ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಎಸ್ಪಿ ಅಶೋಕ್ ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. 2025ರಲ್ಲಿ ತುಮಕೂರಿನಲ್ಲಿ ನಡೆದ ಸರ್ಕಾರದ ವಿವಿಧ ಸವಲತ್ತು ವಿತರಣೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಬಂದಿದ್ದ ಅಂದಿನ ಸಿಎಂ ಸಿದ್ದರಾಮಯ್ಯರ ಬಳಿ ರಾಬಿಯಾ ತನ್ನ ಮನವಿ ಆಲಿಸುವಂತೆ ಹೋರಾಟ ನಡೆಸಿದ್ದರು. ರಾಬಿಯಾ ಮನವಿಗೆ ಸ್ಪಂದಿಸಿ ಸಿಎಂ ಸಿದ್ದರಾಮಯ್ಯ 20/30 ನಿವೇಶನ ಮಂಜೂರು ಮಾಡಿದ್ದರು. ಸಿಎಂ ಆದೇಶ ನೀಡಿ ಒಂದೂವರೆ ವರ್ಷ ಕಳೆದಿದ್ದರು ನಿವೇಶನ ನೀಡದೆ ಅಧಿಕಾರಿಗಳು ಸತಾಯಿಸಿದ್ದರು. ಇದರಿಂದ ರೋಸಿಹೋದ ರಾಬಿಯಾ ಅಂದಿನ ಗೃಹಸಚಿವ ಡಾ.ಜಿ ಪರಮೇಶ್ವರ್ ನೇತೃತ್ವದಲ್ಲಿ ತುಮಕೂರಿನಲ್ಲಿ ನಡೆದ ಜನಸ್ಪಂದನ ಸಭೆಯಲ್ಲೂ ರಂಪಾಟ ಮಾಡಿದ್ದರು.

# ದಸರಾ ಜಂಬೂ ಸವಾರಿಯಲ್ಲಿ ಈವರೆಗೆ ಚಿನ್ನದ ಅಂಬಾರಿ ಹೊತ್ತ ಪ್ರಸಿದ್ಧ ಆನೆಗಳು

• ಉದಯವಾಹಿನಿ, ಮೈಸೂರು

**1** ಅದ್ದೂರಿ ನಾಡಹಬ್ಬಕ್ಕೆ ಸಾಕ್ಷಿ

**2** ಆನೆಗಳು ಅರಮನೆಯನ್ನು ಈ ದ್ವಾರದಿಂದಲೇ ಪ್ರವೇಶ

**3** ನೆಯ ಮಾವುತನೇ ಈ ಚಿತ್ರದ ನಾಯಕ

ವಿಶ್ವವಿಖ್ಯಾತ ಮೈಸೂರು ದಸರಾದಲ್ಲಿ ಈವರೆಗೆ ಜಂಬೂ ಸವಾರಿಯ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿಯನ್ನು ಹೊತ್ತು ಸಾಗುವ ಮೂಲಕ ನಾಡಹಬ್ಬದ ಮೆರುಗನ್ನು ಹೆಚ್ಚಿಸಿದ ಪ್ರಸಿದ್ಧ ಆನೆಗಳ ಮೈಸೂರು ಎಂದರೆ ತಕ್ಷಣ ನೆನಪಾಗುವುದು ವಿಶ್ವವಿಖ್ಯಾತ ದಸರಾ. ಅದರಲ್ಲೂ ಜಂಬೂಸವಾರಿ ನೋಡುಗರ ಕೇಂದ್ರಬಿಂದು. ಚಿನ್ನದ ಅಂಬಾರಿಯನ್ನು ಹೊತ್ತ ಆನೆಯನ್ನು ನೋಡಲು ಜನ ಕಿಕ್ಕಿರಿದು ನೆರೆದಿರುತ್ತಾರೆ. ಈ ಅಂಬಾರಿಯನ್ನು ಹೊತ್ತ ಆನೆಗಳ ಬಗ್ಗೆ ನಿಮಗೆಷ್ಟು ಗೊತ್ತು? ಇಲ್ಲಿಯವರೆಗೆ ಸುಮಾರು 12 ಆನೆಗಳು ಅಂಬಾರಿಯನ್ನು ಬೆನ್ನಿಗೇರಿಸಿಕೊಂಡು ಅದ್ದೂರಿ ನಾಡಹಬ್ಬಕ್ಕೆ ಸಾಕ್ಷಿಯಾಗಿವೆ.

**ಜಯಮಾರ್ತಾಂಡ ಆನೆ:** ರಾಜ ಕೃಷ್ಣದೇವರಾಯ ಒಡೆಯರ್ ಕಾಲದಲ್ಲಿ ಪಿರಿಯಾಪಟ್ಟಣದ ಬೆಟ್ಟದಪುರ ಬಳಿ ಈ ಆನೆಯನ್ನು ಸೆರೆ ಹಿಡಿಯಲಾಗಿತ್ತು. ಚಿನ್ನದ ಅಂಬಾರಿಯನ್ನು ಹೊತ್ತ ಮೊದಲ ಆನೆ ಎಂಬ ಹೆಗ್ಗಳಿಕೆಗೆ ಜಯಮಾರ್ತಾಂಡ ಆನೆ ಪಾತ್ರವಾಗಿದೆ. ಜಯಮಾರ್ತಾಂಡ ಸುಮಾರು 45 ವರ್ಷಗಳ ಕಾಲ ಅಂದರೆ 1870-1915ರವರಿಗೆ ಅಂಬಾರಿಯಲ್ಲಿ 10ನೇ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ



ಉದಯವಾಹಿನಿ ಚಿತ್ರ

ಜಯಚಾಮರಾಜೇಂದ್ರ ಒಡೆಯರ್ ಅವರನ್ನು ಹೊತ್ತು ಸಾಗಿದ ಏಕೈಕ ಆನೆ ಇದಾಗಿದೆ. ಮಹಾರಾಜರಿಗೆ ಜಯಮಾರ್ತಾಂಡ ಅಚ್ಚುಮೆಚ್ಚಿನ ಆನೆಯಾಗಿದ್ದರಿಂದ ಇದರ ನೆನಪಿಗಾಗಿ ಅರಮನೆಯ ಮುಂಭಾಗದ ದ್ವಾರಕ್ಕೆ ಇದರ ಹೆಸರಿಡಲಾಗಿದೆ.

ಪ್ರತಿ ವರ್ಷ ದಸರಾಗೆ ಬರುವ ಆನೆಗಳು ಅರಮನೆಯನ್ನು ಈ ದ್ವಾರದಿಂದಲೇ ಪ್ರವೇಶ ಮಾಡುವುದು ವಿಶೇಷ. ಜಯಮಾರ್ತಾಂಡನ ನಂತರ ವಿಜಯಬಹಾದ್ದೂರ್, ನಂಜುಂಡ, ರಾಮಪ್ರಸಾದ್ ಹಾಗೂ ಮೋತಿಲಾಲ್‌ರಾಜ್ ಎಂಬ ಆನೆಗಳು ಅಂಬಾರಿಯನ್ನು ಹೊತ್ತು ಸಾಗಿದ್ದವು.

ಜಗತ್ ಪ್ರಸಿದ್ಧಿ ಪಡೆದ ಆನೆಗಳಲ್ಲಿ ಇದು ಕೂಡ ಸೇರಿದೆ. ಈ ಆನೆಯನ್ನು ದಿ ಎಲಿಫೆಂಟ್ ಬಾಯ್' ಎಂಬ ಹಾಲಿವುಡ್ ಚಿತ್ರಕ್ಕೆ ಬಳಕೆ ಮಾಡಲಾಗಿತ್ತು. ವಿಶ್ವದಾದ್ಯಂತ ಇದು ಪ್ರದರ್ಶನಗೊಂಡು ಚಿತ್ರ ಹಲವು ಪ್ರಶಸ್ತಿಗಳಿಗೆ ಪಾತ್ರವಾಗಿತ್ತು. ಈ ಆನೆಯ ಮಾವುತನೇ ಈ ಚಿತ್ರದ ನಾಯಕ. ಇಲ್ಲಿಯವರೆಗೂ ಅಂಬಾರಿ ಹೊತ್ತ ಆನೆಗಳಲ್ಲಿ ಬಿಳಿಗಿರಿಯೇ ದೈತ್ಯಾಕಾರದ ಆನೆಯಾಗಿದ್ದು, ಸುಮಾರು 7,000ಕೆ.ಜಿ ತೂಕ ಹೊಂದಿತ್ತು. ಮಹಾರಾಜರನ್ನು ಹೊತ್ತು ಸಾಗಿದ ಕೊನೆಯ ಆನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಐರಾವತ. ರಾಜೇಂದ್ರ : ಜಯಚಾಮರಾಜೇಂದ್ರ ಒಡೆಯರ್ ಕಾಲವಾದ ನಂತರ 1977ರಿಂದ ಚಿನ್ನದ ಅಂಬಾರಿಯಲ್ಲಿ ನಾಡದೇವತೆ ಚಾಮುಂಡಿ ದೇವಿಯ ವಿಗ್ರಹವನ್ನಿಟ್ಟು ಮೆರವಣಿಗೆ ಮಾಡಿಕೊಂಡು ಬರಲಾಗುತ್ತಿದೆ. ರಾಜೇಂದ್ರ ಚಾಮುಂಡಿಯನ್ನು ಹೊತ್ತ ಮೊದಲ ಆನೆಯಾಗಿದೆ. ಇವನ ಇನ್ನೊಂದು ವಿಶೇಷತೆ ಏನೆಂದರೆ, ಡಾ.ರಾಜ್‌ಕುಮಾರ್ ಅಭಿನಯಿಸಿದ 'ಗಂಧದಗುಡಿ' ಚಿತ್ರದಲ್ಲಿ ಬರುವ 'ನಾವಾಡುವ ನುಡಿಯೇ ಕನ್ನಡ ನುಡಿ' ಎಂಬ ಪ್ರಸಿದ್ಧ ಹಾಡಿನಲ್ಲಿ ಬರುವ ಆನೆ ಇದಾಗಿದೆ. ರಾಜೇಂದ್ರ ಚಿತ್ರದ ಕೊನೆಯವರೆಗೂ ಭಾಗವಹಿಸಿದ್ದು ಗಮನಾರ್ಹ.

### ದ್ರೋಣ



**197ರಲ್ಲಿ ಕಾಕನಕೋಟೆಯ ಅರಣ್ಯದಲ್ಲಿ ಖೆಡ್ಡಾ ಕಾರ್ಯಾಚರಣೆಯಲ್ಲಿ ಈತನನ್ನು ಸೆರೆಹಿಡಿಯಲಾಯಿತು. ಸತತ 18 ಬಾರಿ ಅಂದರೆ 1980 ರಿಂದ 1998ರವರೆಗೆ ಅಂಬಾರಿಯನ್ನು ಹೊತ್ತಿದ್ದಾನೆ. 10.2 ಅಡಿ ಎತ್ತರದ ಸುಮಾರು 6,400 ಕೆ.ಜಿ ತೂಕವಿದ್ದ ಈ ಆನೆ ಹಿಂದಿ ಕಿರುತರೆಯಲ್ಲಿ ಬರುತ್ತಿದ್ದ ಈ ಆನೆಯನ್ನು ಬಳಸಿಕೊಳ್ಳಲಾಗಿತ್ತು. 1998ರಲ್ಲಿ ಮೇವಿಗಾಗಿ ಕಾಡಿಗೆ ತೆರಳಿದ್ದ ಸಂದರ್ಭದಲ್ಲಿ ವಿದ್ಯುತ್ ತಂತಿ ತಗುಲಿ ಈ ದೈತ್ಯಾಕಾರದ ಆನೆ ಸಾವನ್ನಪ್ಪಿತು.**

## ಮಿನಿ ನ್ಯೂಸ್

# ಗ್ರಾಮದೇವತೆ ಅದ್ದೂರಿ ಜಾತ್ರೆಗೆ ಗುಬ್ಬಿ ಪಟ್ಟಣ ಸಜ್ಜು

• ಉದಯವಾಹಿನಿ, ಗುಬ್ಬಿ

ಪಟ್ಟಣದ ಅಧಿ ದೇವತೆ ಶ್ರೀ ಗ್ರಾಮದೇವತೆ ಅಮ್ಮನವರ ಜಾತ್ರಾ ಮಹೋತ್ಸವ ಇದೇ ತಿಂಗಳ 31 ರಿಂದ ಸೆ.3 ರವರೆಗೆ ಅದ್ದೂರಿಯಾಗಿ ನಡೆಸಲು ಇಡೀ ಗುಬ್ಬಿ ಪಟ್ಟಣ ಅಲಂಕೃತವಾಗಿ ಸಜ್ಜಾಗು ತ್ತಿದೆ ಎಂದು ಹದಿನೆಂಟು ಕೋಮಿನ ದೇವಾಲಯ ಸಮಿತಿ ತಿಳಿಸಿದೆ. ಆಗಸ್ಟ್ 31 ರ ಸೋಮವಾರ ರಾತ್ರಿ 12 ರವರೆಗೆ ಪಣಗಾರರ ಬೀದಿಯಲ್ಲಿನ ಶ್ರೀ ಗ್ರಾಮದೇವತೆ ಅಮ್ಮನವರ ದೇವಾಲಯದಲ್ಲಿ ಪೂಜಾ ವಿಧಿ ಆರಂಭವಾಗಿ ವಿಶ್ವಕರ್ಮ ಮತಸ್ಥರಿಂದ ಅಮ್ಮನವ ರಿಗೆ ನೇತ್ರೋನ್ಮಿಲನ , ಆರತಿ ಸೇವೆ ನಡೆಯಲಿದೆ. ಸೆ.1 ರಂದು ಬೆಳಿಗ್ಗೆ 10.30 ಕ್ಕೆ ಸಂತೆ ಮೈದಾನದ ಶಿಲಾ ಗದ್ದುಗೆ ದೇವಾಲಯದಲ್ಲಿ ಗದ್ದುಗೆ ಪೂಜೆ ನಡೆಯಲಿದೆ. ಮಧ್ಯಾಹ್ನ 1.30 ಕ್ಕೆ ಹೂವಿನ ಪಲ್ಲಕ್ಕಿಯಲ್ಲಿ ಅಲಂಕರಿಸಿ ಊರಿನ ರಾಜಬೀದಿಗಳಲ್ಲಿ ವಿವಿಧ ಕಲಾ ತಂಡದೊಂದಿಗೆ ಮೆರವಣಿಗೆ ಸಾಗಿ ಸಂಜೆ 5 ಗಂಟೆಗೆ ಹಳೇ ಸಂತೆ ಮೈದಾನದ ಗದ್ದುಗೆ ತಲುಪಿ ಮೂರು ದಿನಗಳ ಆರತಿ ಸೇವೆಗೆ ಅಮ್ಮನವರನ್ನು ಪ್ರತಿಷ್ಠಾಪಿಸಲಾಗುವುದು. ನಂತರ ವಿವಿಧ ಜನಾಂಗದವರ ಆರತಿ ಸೇವೆ ನಡೆಯಲಿದೆ. ಮುಂದುವರೆದು ಸೆ.2 ರಂದು ಸಹ ಕೆಲ ಸಮುದಾಯದ ಆರತಿ ಸೇವೆ ನಡೆಯಲಿದೆ. ಸೆ.3 ರಂದು ಆರತಿ ಜೊತೆ ಬಾನ ಪೂಜೆ, ಘಟ ಸೇವೆ ನಡೆಯಲಿದೆ.



ಉದಯವಾಹಿನಿ ಚಿತ್ರ

ರಾತ್ರಿ 9 ಗಂಟೆಗೆ ಅಮ್ಮನವರನ್ನು ಉತ್ಸವ ಮೂಲಕ ಮೆರವಣಿಗೆ ಹೊರಟು ಲಕ್ಕೇನಹಳ್ಳಿ ಸಮೀಪದ ಗ್ರಾಮದೇವತೆ ವನದಲ್ಲಿನ ಗದ್ದುಗೆಯಲ್ಲಿ ಮುಂಜಾನೆ ವೇಳೆಗೆ ಅಮ್ಮನವರ ಸ್ಥಾಪಿಸಿ ಬೀಳ್ಕೊಡುವ ಮೂಲಕ ಜಾತ್ರೆ ಅಂತಿಮ ಹಂತಕ್ಕೆ ತಲುಪಲಿದೆ.ನಂತರ ಸೆ.4 ರ ಸಂಜೆ 7.30 ಕ್ಕೆ ಮರುಪೂಜೆ ಸಲ್ಲಿಸಿ ಜಾತ್ರೆ ಸಂಪನ್ನಗೊಳಿಸಲಾಗುವುದು ಎಂದು ಹದಿನೆಂಟು ಕೋಮಿನ ಜಾತ್ರಾ ಸಮಿತಿ ತಿಳಿಸಿದೆ.

# ಚಿಟ್ನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರ ಸಭೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೋಲಾರ

ತಾಲ್ಲೂಕಿನ ಚಿಟ್ನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ 2025-26 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಗೆ ಕೋಲಾರ ಹಾಲು ಒಕ್ಕೂಟದ ವಿಸ್ತರಣಾಧಿಕಾರಿ ಎಸ್.ಆರ್.ಶಿವಕುಮಾರ್ ಚಾಲನೆ ನೀಡಿ ಸಂಘ ಈ ಸಾಲಿನಲ್ಲಿ ನಿವ್ವಳ 867310 ರೂ ಲಾಭ ಗಳಿಸುವ ಮೂಲಕ ಉತ್ತಮ ಸಾಧನೆ ಮಾಡಿದೆ ಎಂದರು. ಈ ಸಂದರ್ಭದಲ್ಲಿ ಅವರು ಮಾತನಾಡಿ, ಗುಣಮಟ್ಟದ ಹಾಗೂ ಉತ್ತಮ ಹಾಲು, ಸರಬರಾಜು ಮಾಡುವುದರಿಂದ ಸಹಕಾರ ಸಂಘವು ಆರ್ಥಿಕವಾಗಿ ಬಲಗೊಳ್ಳಲು ಸಾಧ್ಯ, ಎಂದ ಅವರು, ಚಿಟ್ನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘವು ತಮ್ಮ ವಿಸ್ತರಣಾ ವ್ಯಾಪ್ತಿಗೆ ಬರುವ ಸಂಘಗಳಲ್ಲಿಯೇ ಅತ್ಯುತ್ತಮ ಸಂಘವಾಗಿದೆ ಎಂದು ಶ್ಲಾಘಿಸಿದರು. ಕೋಲಾರ ಹಾಲು ಒಕ್ಕೂಟದಿಂದ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವಂತೆ ಸಲಹೆ ನೀಡಿದ ಅವರು, ಇಂದು ಹೈನುಗಾರಿಕೆಯೇ ಜನರ ಜೀವಾಳವಾಗಿದೆ, ಈ ಉದ್ಯಮವನ್ನು ಉಳಿಸಿ ಬೆಳೆಸುತ್ತಿ ರುವ ರೈತರು,ಮಹಿಳೆಯರು ಆರ್ಥಿಕವಾಗಿಯೂ ಸಬಲರಾಗಲು ಸಾಧ್ಯವಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.ಸಂಘದ ಕಾರ್ಯನಿರ್ವಹಣಾಧಿಕಾರಿ ಗಳಾದ ಸಿ.ಎಂ.ರಮೇಶ ಸಂಘದ 2025-26 ನೇ ಸಾಲಿನ ಆಯವ್ಯಯ ಮಂಡಿಸಿ, ಖರ್ಚು ವೆಚ್ಚಗಳು ಬಗ್ಗೆ ಕೂಲಂಕುಶವಾಗಿ ವಿವರಿಸಿ, ಸಂಘಕ್ಕೆ ಈ ಸಾಲಿನಲ್ಲಿ 13,11710 ರೂಗಳು ವ್ಯಾಪಾರ ಲಾಭ ಬಂದಿದ್ದು ಇದರಲ್ಲಿ 612900 ರೂಗಳು ಖರ್ಚಾಗಿದ್ದು ನಿವ್ವಳ 867310 ರೂಗಳು ಆಗಿರುತ್ತದೆ ಎಂದು ತಿಳಿಸಿದರು.

# ಬರೋಬ್ಬರಿ 125 ಜೋಡಿಗಳಿಗೆ ಸೀಮೆ ಹಸು ಉಡುಗೊರೆ ನೀಡಿದ ಕಾಂಗ್ರೆಸ್ ಶಾಸಕ!

• ಉದಯವಾಹಿನಿ, ಚಿಕ್ಕಬಳ್ಳಾಪುರ



ಉದಯವಾಹಿನಿ ಚಿತ್ರ

ಬಾಗೇಪಲ್ಲಿ ತಾಲ್ಲೂಕಿನ ಗಡಿದಂ ಲಕ್ಷ್ಮಿ ವೆಂಕಟರಮಣಸ್ವಾಮಿ ದೇವಾಲಯದ ಬಳಿ ಎಸ್.ಎನ್. ಚಾರಿಟೇಬಲ್ ಟ್ರಸ್ಟ್ ವತಿಯಿಂದ 23ನೇ ವರ್ಷದ ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಬರೋಬ್ಬರಿ 106 ಜೋಡಿಗಳು ಸಾಮೂಹಿಕ ವಿವಾಹದ ಮೂಲಕ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ನೂತನ ದಂಪತಿಗಳಿಗೆ ಬಾಗೇಪಲ್ಲಿ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಅವರು ಸೀಮೆ ಹಸುವನ್ನು ಉಡುಗೊರೆಯಾಗಿ ನೀಡಿದ್ದಾರೆ.ಸೀಮೆ ಹಸುವಿನ ಜೊತೆಗೆ 50 ಸಾವಿರ ರೂ. ನಗದು ಸಹಾಯ ನೀಡಿದ್ದಾರೆ. ಇನ್ನು ಸಾಮೂಹಿಕ ವಿವಾಹದ ಜೊತೆಗೆ ಶ್ರೀತಿರುಮಲ ತಿರುಪತಿ ದೇವಸ್ಥಾನದ ವತಿಯಿಂದ ಶ್ರೀಲಕ್ಷ್ಮಿ ವೆಂಕಟೇಶ್ವರ ಕಲ್ಯಾಣೋತ್ಸವವನ್ನೂ ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೆ ಸಚಿವ ಕೆ.ಹೆಚ್.ಮುನಿಯಪ್ಪ, ಮಾಜಿ ಸಂಸದ ಡಿ.ಕೆ. ಸುರೇಶ್, ಬಂಗಾರಪೇಟೆ ಶಾಸಕ ನಾರಾಯಣಸ್ವಾಮಿ, ಮಾಜಿ ಸಚಿವ ಶಿವಶಂಕರ ರೆಡ್ಡಿ, ಮಾಜಿ ಶಾಸಕ ಎನ್. ಸಂಪಂಗಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು. ಸುಬ್ಬಾರೆಡ್ಡಿ ನೇತೃತ್ವದ ಟ್ರಸ್ಟ್ ಕಳೆದ 23 ವರ್ಷಗಳಿಂದ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಇಲ್ಲಿಯವರೆಗೆ ಸುಮಾರು 10,000 ಜೋಡಿಗಳು ಸಾಮೂಹಿಕ ವಿವಾಹದ ಪ್ರಯೋಜನ ಪಡೆದಿವೆ.

# ಎರಡು ಬೈಕ್‌ಗಳ ನಡುವೆ ಡಿಕ್ಕಿ: ಮೂವರಿಗೆ ಗಾಯ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ಎರಡು ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಮೂವರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ತೆರಕಣಾಂಬಿ ಸಮೀಪದ ಕೆಇಬಿ ಕಚೇರಿ ಬಳಿ ಬುಧವಾರ ರಾತ್ರಿ ನಡೆದಿದೆ. ಚಾಮರಾಜನಗರ ತಾಲ್ಲೂಕಿನ ಕಿಲಗೆರೆ ಗ್ರಾಮದ ಅಂಕಪ್ಪ ಹಾಗೂ ನಾಗಪ್ಪ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ, ಬೊಮ್ಮನಹಳ್ಳಿ ಗ್ರಾಮದ ಮನು ಎಂಬಾತ ಮತ್ತೊಂದು ಬೈಕ್‌ನಲ್ಲಿ ಬರುತ್ತಿದ್ದಾಗ ಅಪಘಾತ ಸಂಭವಿಸಿದೆ. ಡಿಕ್ಕಿಯ ರಭಸಕ್ಕೆ ಮೂವರಿಗೂ ಗಾಯಗಳಾಗಿದ್ದು, ಗಾಯಾಳುಗಳನ್ನ ಖಾಸಗಿ ವಾಹನದ ಮೂಲಕ ಚಾಮರಾಜನಗರದ ಸಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿಷಯ ತಿಳಿದು ತೆರಕಣಾಂಬಿ ಪೊಲೀಸ್ ಠಾಣೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅಪಘಾತಕ್ಕೀಡಾದ ಎರಡೂ ಬೈಕ್‌ಗಳನ್ನ ವಶಕ್ಕೆ ಪಡೆದಿರುವ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಅಂತರಾಳದಿಂದ...
EDITORIAL

# ವಿದ್ಯಾರ್ಥಿ ಸಂಘ ಚುನಾವಣೆ ಇನ್ನಷ್ಟು ಚಿಂತನ-ಮಂಥನ ಅಗತ್ಯ




ರಾಜ್ಯ ಸರಕಾರ ಈ ಹಿಂದೆ ಘೋಷಿಸಿದಂತೆ ಹಾಲಿ ಶೈಕ್ಷಣಿಕ ವರ್ಷದಿಂದ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸಲು ಮುಂದಡಿ ಇರಿಸಿದೆ. ಈ ಸಂಬಂಧ ಮಾರ್ಗಸೂಚಿಯನ್ನು ರೂಪಿಸಲು ಆಡಳಿತ ಪಕ್ಷವಾದ ಕೆಪಿಸಿಸಿ ರಚಿಸಿದ್ದ ಸಮಿತಿ ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿದ್ದು ಪ್ರಸಕ್ತ ವರ್ಷದಿಂದಲೇ ಹಂತಹಂತವಾಗಿ ಕಾಲೇಜು ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸಲು ಶಿಫಾರಸು ಮಾಡಿದೆ. ಇದೇ ವೇಳೆ ಸಮಿತಿಯು ಕಾಲೇಜು ವಿದ್ಯಾರ್ಥಿ ಸಂಘಗಳ ಚುನಾವಣೆಯನ್ನು ರಾಜಕೀಯ, ಬಾಹ್ಯ ವ್ಯಕ್ತಿಗಳು ಮತ್ತು ರಾಜಕೀಯ ಪಕ್ಷ ಬೆಂಬಲಿತ ಸಂಘಟನೆಗಳ ಹಸ್ತಕ್ಷೇಪವಿಲ್ಲದೆ ಅತ್ಯಂತ ಕಟ್ಟುನಿಟ್ಟಾಗಿ ನಡೆಸಲು ಮಾರ್ಗಸೂಚಿಯೊಂದನ್ನು ರೂಪಿಸಿ ಸರಕಾರಕ್ಕೆ ಸಲ್ಲಿಸಿದೆ. ಈ ಮೂಲಕ ರಾಜ್ಯದ ಕಾಲೇಜುಗಳ ವಿದ್ಯಾರ್ಥಿ ಸಂಘಗಳಿಗೆ 37 ವರ್ಷಗಳ ಬಳಿಕ ಚುನಾವಣೆ ನಡೆಸಲು ಸಜ್ಜಾಗಿದೆ.


ಸರಿ ಸುಮಾರು ನಾಲ್ಕು ದಶಕಗಳ ಹಿಂದೆ ರಾಜ್ಯದ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸಲಾಗುತ್ತಿತ್ತು. ಆದರೆ ಈ ಚುನಾವಣೆಗಳ ಸಂದರ್ಭದಲ್ಲಿ ಕಾಲೇಜು ಆವರಣ ರಾಜಕೀಯ ಅಖಾಡವಾಗಿ ಮಾರ್ಪಡುತ್ತಿತ್ತು. ಮಿತಿ ಮೀರಿದ ರಾಜಕೀಯ ಹಸ್ತಕ್ಷೇಪ, ಹಣದ ಪ್ರಭಾವ, ರಾಜಕೀಯ ಪಕ್ಷ ಬೆಂಬಲಿತ ಹಾಗೂ ಸೈದ್ಧಾಂತಿಕ ವಿದ್ಯಾರ್ಥಿ ಸಂಘಟನೆಗಳು ಇದರಲ್ಲಿ ಶಾಮೀಲಾಗುತ್ತಿದ್ದ ಪರಿಣಾಮ ಹಿಂಸಾಚಾರ, ದಾಂಧಲೆ, ಗೂಂಡಾಗಿರಿ ಎಲ್ಲವೂ ಸಾಮಾನ್ಯ ಎಂಬಂತಾಗಿತ್ತು. ವರ್ಷಗಳುರುಳಿದಂತೆಯೇ ಇವೆಲ್ಲವೂ ಅತಿರೇಕಕ್ಕೆ ತಲುಪಿದ್ದರಿಂದ 1989ರಲ್ಲಿ ಆಗಿನ ಸರಕಾರ ಕಾಲೇಜುಗಳ ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸುವುದನ್ನು ನಿಷೇಧಿಸಿತ್ತು. ಆದರೆ ವಿದ್ಯಾರ್ಥಿ ಸಂಘಗಳ ಚುನಾವಣೆಯನ್ನು ನಿರ್ಬಂಧಿಸಿದ ಬಳಿಕ ರಾಜಕೀಯ ಪ್ರವೇಶಿಸುವ ಯುವಜನರ ಸಂಖ್ಯೆ ತೀರಾ ಕಡಿಮೆಯಾಗಿತ್ತು. ಬೆರಳೆಣಿಕೆ ಸಂಖ್ಯೆಯಲ್ಲಿ ಯುವ ನಾಯಕರು ರಾಜಕೀಯದಲ್ಲಿ ಗುರುತಿಸಿಕೊಂಡರೂ ಅವರಲ್ಲಿ ಬಹುತೇಕರು ಒಂದೋ ರಾಜಕೀಯ ಹಿನ್ನೆಲೆಯ ವಂಶದಿಂದ ಇಲ್ಲವೇ ರಾಜಕೀಯ ವರಿಷ್ಠ ಮುಖಂಡರಿಂದ ಹೇರಲ್ಪಟ್ಟವರೇ ಆಗಿದ್ದಾರೆ.

> ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಯುವ ಜನಾಂಗ ದೂರ ಸರಿಯುತ್ತಿದೆ ಎಂಬ ಮಾತುಗಳು ಸರ್ವೇಸಾಮಾನ್ಯವಾಗಿದೆಯಾದರೂ ವಿದ್ಯಾರ್ಥಿ ಯುವ ಸಮುದಾಯದಲ್ಲಿ ನಾಯಕತ್ವ ಗುಣವನ್ನು ಬೆಳೆಸುವ ದಿಸೆಯಲ್ಲಿ ಯಾವೊಂದು ಸರಕಾರವೂ ಹೆಚ್ಚಿನ ಆಸ್ಥೆ ತೋರಿರಲಿಲ್ಲ.
> ಹಾಲಿ ರಾಜ್ಯ ಸರಕಾರ ವಿದ್ಯಾರ್ಥಿ ಸಂಘಗಳ ಚುನಾವಣೆ ಮೇಲಣ ನಿಷೇಧವನ್ನು ತೆರವುಗೊಳಿಸುವುದಾಗಿ ಘೋಷಿಸುತ್ತಿದ್ದಂತೆಯೇ ವಿರೋಧ, ಅಸಮಾಧಾನಗಳು ವ್ಯಕ್ತವಾಗಿದ್ದವು. ಈ ಹಿನ್ನೆಲೆಯಲ್ಲಿ ಕೆಪಿಸಿಸಿ, ತನ್ನ ಸರಕಾರದ ಚಿಂತನೆಗೆ ಪೂರಕವಾಗಿ ಕಾಲೇಜು ವಿದ್ಯಾರ್ಥಿ ಸಂಘದ ಚುನಾವಣೆಗಾಗಿ ಕಟ್ಟುನಿಟ್ಟಿನ ಮಾರ್ಗಸೂಚಿಯನ್ನು ರೂಪಿಸಲು ಕೌಶಲಾಭಿವೃದ್ಧಿ ಸಚಿವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿತ್ತು.

ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವದ ಗುಣಗಳು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸುವ ಉದ್ದೇಶದೊಂದಿಗೆ ಸರಕಾರ ಕಾಲೇಜು ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸಲು ತೀರ್ಮಾನಿಸಿದೆ. ಕಾಲೇಜು ಕ್ಯಾಂಪಸ್‌ನ ಒಳಗಡೆ ರಾಜಕೀಯಕ್ಕೆ ಅವಕಾಶವಿಲ್ಲದಂತೆ ಈ ಚುನಾವಣೆ ನಡೆಸಲು ಕಠಿನ ಮಾರ್ಗಸೂಚಿಯನ್ನು ರೂಪಿಸಿದೆ.

ಕಾಲೇಜು ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸುವ ಸರಕಾರದ ಚಿಂತನೆ ದೂರದೃಷ್ಟಿಯಿಂದ ಕೂಡಿದ್ದೇ ಆದರೂ ಶಾಂತಿಯುತವಾಗಿ ಹಾಗೂ ಶೈಕ್ಷಣಿಕ ಚಟುವಟಿಕೆಗಳಿಗೆ ಅಡ್ಡಿಯಾಗದಂತೆ ಚುನಾವಣೆ ನಡೆಸುವುದು ಕಾಲೇಜುಗಳ ಆಡಳಿತ ಮಂಡಳಿ ಹಾಗೂ ಸರಕಾರದ ಪಾಲಿಗೆ ಬಲುದೊಡ್ಡ ಸವಾಲಾಗಿದೆ. ಇತಿಹಾಸ ಮರುಕಳಿಸಿದ್ದೇ ಆದಲ್ಲಿ ಸರಕಾರದ ಉದ್ದೇಶ ನಿರರ್ಥಕವಾಗುವುದರ ಜೊತೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಗಳೂ ಸೃಷ್ಟಿಯಾಗುವ ಸಾಧ್ಯತೆಗಳಿಲ್ಲದಿಲ್ಲ. ಹೀಗಾಗಿ ಕಾಲೇಜು ವಿದ್ಯಾರ್ಥಿ ಸಂಘದ ಚುನಾವಣೆಯ ಕುರಿತಂತೆ ಇನ್ನಷ್ಟು ಚಿಂತನ-ಮಂಥನ ನಡೆಸಿ ಸರಕಾರ ಮುಂದುವರಿಯುವುದು ಸೂಕ್ತ.

# ರಾಮಾಯಣ



ಶ್ರೀರಾಮನು ಸಮುದ್ರರಾಜನನ್ನು ಕುರಿತು ಪ್ರಾರ್ಥಿ

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಒಂದರೊಡನೊಂದು ಸೇರಿ ಈ ಪ್ರಪಂಚವಾಯಿತು. ಎರಕಗೊಂಡಿರುವ ಅವುಗಳಿಲ್ಲದೆ ಪ್ರಾಣಿಗಳು ಹೇಗಿರಬಲ್ಲವು? ನಿನ್ನ ಕೃಪೆಯಿಂದ ಅವುಗಳನ್ನು ಪರಿಪಾಲಿಸಬೇಕು, ಹೀಗೆ ಪರವಶಗೊಂಡರೆ ಗತಿಯೇನು, ಸ್ವಾಮಿ ನೆಲಕ್ಕೆ ಐದು, ನೀರಿಗೆ ನಾಲ್ಕು, ಅಗ್ನಿಗೆ ಮೂರು, ಮಾರುತಕ್ಕೆ ಎರಡು, ಬಾಂದಳಕ್ಕೆ ಒಂದು ಗುಣಗಳನ್ನು ಹಂಚಿಕೆ ಮಾಡಿ ನೀನು ನಿರ್ಮಿಸಿದಂತೆ ಭೂತಳದ ಜೀವಜಂತುಗಳು ಅಸ್ತಿತ್ವದಲ್ಲಿವೆ. ಮಹಾದೇವನೇ, ಈಗ ಅವನ ತಪ್ಪನ್ನು ಗಣಿಸಿ ಪ್ರಾಣಿಗಳ ನೈಜಸ್ವರೂಪವನ್ನೇ ಕೊಲ್ಲಬಯಸಿರುವೆಯಲ್ಲಾ ಪರಬೊಮ್ಮನೇ, ಇದು ನಿನ್ನ ಚಿತ್ತವು ತಿಳಿಯದುದೇನು? ಕಾರ್ಯಗಳೆಲ್ಲವೂ ಕಾರಣಾಧೀನವಲ್ಲವೇ? ಅವಕ್ಕೆ ಬೇರೆ ಗುಣಗಳಿವೆಯೇ? ಮಹಾಪ್ರಭು, ಸೂತ್ರವು ಹೇಗೆ ಆಡಿದರೆ ಬೊಂಬೆಗಳು ಹಾಗೆ ಆಡುತ್ತವೆ ಅವುಗಳ ಮೇಲೆ ಕೋಪಗೊಳ್ಳಲು ಏನು ಕಾರಣವಿದೆ, ಮಹಾಸ್ವಾಮಿ ಸೃಜಿಸುವ ಎಡೆಯಲ್ಲಿ ಜಡಾತ್ಮತೆಯನ್ನುಂಟುಮಾಡಿ ಅದರ ರೂಪವನ್ನು ಪೂಜಿಸುವುದು ಎಂದು ತಾಮಸಸಂಗತೆಯ ತ್ಯಜಿಸಲಾರೆನೆನುತ್ತ ಕ್ರೋಧದಿಂದ ತರಿದಿಟ್ಟರೆ ಗಜಬಜವು ಕೊನೆಗೊಳ್ಳುವುದೇ, ಅಖಿಲಾಂಡ ಮೂಲರೂಪಾ ಭಜಕಜನರಿಗೆ ನಿನ್ನ ಅನುಗ್ರಹವಿಲ್ಲದಿರಲು ಹರವಿರಿಂಚಿಗಳು ಹೇಗೆ ತಾನೇ ಕ್ರಿಯಾತ್ಮಕರಾಗಿರುತ್ತಾರೆ, ಜಗದಾತ್ಮಾ ಅಗಸ್ತ್ಯಮುನಿಯು ಒಮ್ಮೆ ಮುನಿದು ವನಧಿಯನ್ನು ಅಂಗೈಯಲ್ಲಿ ಹಿಡಿದುಕೊಂಡು ಆಪೋಶನವಾಗಿ ಹೀರಿದ, ಭಾರ್ಗವನು ಅಸ್ತವಿಟ್ಟಾಗ ಕಂಪಿಸುತ್ತ ಮನದಿಷ್ಟವನ್ನಿತ್ತು ಮತ್ತೆ ಒಮ್ಮೆ ಬಾಡಬದ ಉಪದವದಲ್ಲಿ ತೊಲಗಿದ ಹೀಗೆ ಸಮುದ್ರನು ಅನುದಿನವೂ ನೆನೆನೆನೆದು ಅವಮಾನದಿಂದ ಬಿಸುಸುಯ್ಯುತ್ತ ತೊಳಲುತ್ತಿದ್ದಾನೆ. ಈ ರೀತಿ ಅವನು ಭವಬಂಧನದ ರೀತಿಯಲ್ಲಿದ್ದಾನೆಯೇ ಹೊರತು ಅವನಿಗೆ ಸ್ವಾತಂತ್ರ್ಯವೇ ಇಲ್ಲ. ನಿನ್ನ ಕೋಪದ ಕಾರಣರಾರು, ನಿನ್ನ ಪಾದಗಳಿಗೆ ಶರಣರಾದವರನ್ನು ಪೊರೆಯದಿರುತ್ತಾರೆಯೇ? ಬ್ರಹ್ಮನೇ ಮುಂತಾದ ಎಲ್ಲಾ ದೇವತೆಗಳನ್ನೂ ಹಮ್ಮುಬಿಮ್ಮುಗಳಿಂದ ಕೂಡಿದವರಂತೆ ಸೃಷ್ಟಿಸಿದ್ದರಿಂದ ಅವರು ತಮ್ಮಿಷ್ಟದಂತೆ ನಡೆಯುತ್ತಾರೆ ವನಧಿಯೂ ಹಾಗಿದ್ದಾನಲ್ಲವೇ? ಅಂತಹುದರಲ್ಲಿ ಅವನ ಮೇಲೆ ಕೋಪಿಸಿಕೊಳ್ಳುವುದು ನ್ಯಾಯವೇ? ನನಗೆ ಮುತ್ತೈದೆತನವನ್ನು ಪಾಲಿಸು ಎಂದು ಉತ್ತಮೋತ್ತಮ ನುಡಿಗಳನ್ನಾಡುತ್ತಿರುವ ಭಾಗೀರಥಿಯ ಮಾತುಗಳ ವೈಖರಿಯನ್ನು ನೋಡಿ ಕರುಣಾವನಧಿಯಾದ ರಾಘವನು ಕರೆದು, ಅಂಬೆ, ಜಲನಿಧಿಗೆ ಅಭಯವನಿತ್ತಿದ್ದೇನೆ ಎಂದು ನುಡಿಯಲು ಜಾಹ್ನವಿಯು ಭಯವನ್ನು ತೊರೆದು ರಘೂತ್ತಮನ ಪಾದಗಳಿಗೆರಗಿ ಪತಿಯ ಬಳಿಗೆ ಬಂದಳು.

ಬಂದವಳೇ, ಕರುಣಾಳುಗಳ ದೇವನು ನಿನಗೆ ಅಭಯವನಿತ್ತಿದ್ದಾನೆ ಎಂದು ಭಾಗೀರಥಿಯು ಹೇಳಲು, ಸಂತಸದಿಂದ ಉದಧಿರಾಜನು ತನ್ನ ಮನೆಯಲ್ಲಿದ್ದ ರತ್ನಗಳನ್ನು ಕೈಗಳಲ್ಲಿ ಕಾಣಿಕೆಯಾಗಿ ತುಂಬಿಕೊಂಡು ಆನಂದದಿಂದ ಬಂದು ರಾಘವನ ಪಾದಗಳಲ್ಲಿ ಸುರಿದು ಕೈಮುಗಿದು ರಘುಪತಿಯ ದಿವ್ಯ ಮೂರ್ತಿಯನ್ನು ಹೃತ್ಪೂರ್ವಕವಾಗಿ ಸ್ತುತಿಸಲು ಅಮರವೃಂದವು ಸಂತಸಗೊಂಡಿತು. ಮೂಲಪ್ರಕೃತಿ ವಿಕೃತಿ ಮಹತ್ ಮುಂತಾದ ವೈಕಾರಜಾಲಸಂಬಂಧವಾದ ಎಂಟು ತನುಗಳಲ್ಲಿ ಬೆಳಗುತ್ತ ವಾಲಾಗ್ರ ಶತಭಾಗೆಯ ಲೇಶದಲ್ಲಿ ಒಂದು ಸಂನ್ನಿಕಾಶತೆಯಿಂದ ಕೂಡಿ ಲೀಲೆಯಿಂದ ಕ್ಷೇತ್ರಜ್ಞನೆನ್ನಿಸಿ ಇಂದ್ರಿಯ ಸುಖತತಿಗಳನ್ನು ಅನುಭವಿಸದೆ – ಬೆಳಕು ಬತ್ತಿಯ ಕೆಳಗಿನಿಂದಲೇ ಎಣ್ಣೆಯನ್ನು ಹೀರುವ ಪರಿಯಲ್ಲಿ – ಶೋಭಿಸುವ ರಘುವೀರನೇ ಶರಣು. ಆಧಾರ ಜಾಲಂದಮೆನ್ನಿಸಿ ಬಂಧತ್ರಯದಿಂದ ಶೋಭಿಸುತ್ತ ಷಟ್ಚಕ್ರದಲ್ಲಿ ಅಳವರಿತು ಶಾರೀರದ ಆಧಾರವೆನಿಸುವ ತನುನಾಡಿಯನ್ನು ಕೊರೆದು ಒಳಗೆ ಹೊಕ್ಕ ಸಹಸ್ರಾರದ ಮಧ್ಯದಲ್ಲಿ ಮತ್ತೊಂದು ವಸ್ತುಸಂಬಂಧವರ್ಜಿತನಾಗಿ ತಾನೇ ತಾನಾಗಿರುವ ಚಿದ್ರೂಪ ಭೋಗಾತ್ಮ ಭವರೋಗಹರಣ ರಘುವೀರ ದೇವೇಶ ಶರಣು ಶರಣು. ಮೂರು ಗುಣಗಳೂ ತಾನೇ ಆಗಿ, ಮೂರು ರೂಪಗಳನ್ನು ಧಾರಣೆ ಮಾಡಿ ಜೀವತ್ರಯಾತ್ಮಕತೆಯನ್ನು ತಳೆದು, ಜಾಗ್ರತ್ ಸ್ವಪ್ನ ಸುಷುಪ್ತಿಗಳಲ್ಲಿ ತೋರುವ ಈತನು ಮೂರರಲ್ಲಿಯೂ ಬೆಳಗಿ, ಕನ್ನಡಿಯು ನೆರಳನ್ನು ತೋರಿಸುವಂತೆ ತೋರಿ ದೂರಿಗೊಳಗಾಗದಿರುವ ಶುದ್ಧ ಚೈತನ್ಯನಾದ ರಘುವೀರ, ಲೋಕಾಧಾರ ಆಪದೋದ್ಧಾರಕನ ಚರಣವನ್ನು ಮೊರೆವೊಕ್ಕಿದ್ದೇನೆ. ಅರಸುಕುಲದಲ್ಲಿ ಹುಟ್ಟಿ, ಸನ್ಮುನಿಯ ಯಜ್ಞವನ್ನು ರಕ್ಷಿಸಿ, ಮುನಿಸಂಕುಲವನ್ನು ಪೊರೆದು, ಹರಚಾಪವನ್ನು ನೆಗ್ಗೊತ್ತಿ ಧರಣಿಜೆಯ ಕೈಹಿಡಿದು, ದಾರಿಯಲ್ಲಿ ಭಾರ್ಗವನ ದರ್ಪವನ್ನು ಮುರಿದು, ತಾಟಕಿಸುಬಾಹುಗಳ ಬಾಧೆಯನ್ನು ಪರಿಹರಿಸಿದ ರಘುವೀರನೇ, ನಿನಗೆ ಮನದುಂಬಿ ವಂದಿಸುತ್ತೇನೆ.

ಮುಂದುವರೆಯುವುದು



## ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

66

**ಈ ಕಲೆಯ ಬೀಜ ಆತ್ಮವಿಶ್ವಾಸ. ಜನಸ್ತೋಮದ ಮುಂದೆ ಅಳುಕಿಲ್ಲದೆ ನುಡಿಯುವ ಧೀರತೆ, ಗೊಂದಲದ ಗಳಿಗೆಯಲ್ಲಿ ಖಚಿತ ನಿಲುವು ತಳೆಯುವ ಪ್ರಜ್ಞೆ, ತಂಡದ ನಾಡಿಮಿಡಿತಕ್ಕೆ ತನ್ನ ಹೃದಯವನ್ನು ಬೆಸೆಯುವ ಸೌಹಾರ್ದತೆ – ಇವೇ ನಾಯಕನನ್ನು ರೂಪಿಸುವ ಮೂಲಮಂತ್ರಗಳು. ತನ್ನ ತಪ್ಪನ್ನು ತಾನೇ ತಿದ್ದಿಕೊಳ್ಳುವ ವಿನಯವೇ ಅವನ ನಿಜವಾದ ಅಲಂಕಾರ.**

# ಒಳಗಿನ ನಾಯಕ

ಅಂಕಗಳ ಸರದಾರಿಕೆ ಮಾತ್ರ ಬದುಕಿನ ಶಿಖರವನ್ನು ಮುಟ್ಟಿಸಲಾರದು. ಜ್ಞಾನದ ಜೊತೆಗೆ ಬೇಕು ದಾರಿ ತೋರುವ ದೀಪ – ಅದೇ ನಾಯಕತ್ವ. ನಾಯಕತ್ವ ಎಂದರೆ ಆಜ್ಞಾಪಿಸುವ ಅಹಂಕಾರವಲ್ಲ. ಅದು ಹೊಣೆ ಹೊರುವ ಹೃದಯವೈಶಾಲ್ಯತೆ, ಕತ್ತಲಲ್ಲಿ ಕೈಹಿಡಿದು ನಡೆಸುವ ಕರುಣಾಮಯಿ ಕಲೆ. ವಿಜ್ಞಾನದ ಭಾಷೆಯಲ್ಲಿ, ನಾಯಕತ್ವದ ಸಾಧನೆಯು ಮೆದುಳಿನ ಮುಂಚಾಚುವಿಕೆಯ ನಿರ್ಣಯ ಕೇಂದ್ರವನ್ನು ಹಾಗೂ ಸಾಮಾಜಿಕ ಅಂತಃಸಂಬಂಧದ ಎಳೆಗಳನ್ನು ಪ್ರಜ್ವಲಗೊಳಿಸುತ್ತದೆ. ಆಗ ತರ್ಕವು ಹರಿತವಾಗುತ್ತದೆ, ಆತ್ಮಸ್ಥೈರ್ಯವು ಗಟ್ಟಿಗೊಳ್ಳುತ್ತದೆ, ಆತಂಕದ ಮಂಜು ಕರಗಿ ಚಿಂತನೆಯಲ್ಲಿ ಬೆಳ್ಳಕ್ಕಿಯ ಬೆಳಕು ಮೂಡುತ್ತದೆ. ನಿಜವಾದ ನಾಯಕ ತನ್ನ ಪಾಲಿನ ಯಶಸ್ಸಿಗೆ ಮಾತ್ರ ತೃಪ್ತನಾಗುವುದಿಲ್ಲ ಅವನು ಇತರರ ಬದುಕಲ್ಲೂ ಭರವಸೆಯ ಬೀಜ ಬಿತ್ತುತ್ತಾನೆ. ಅವನಲ್ಲಿ ಸ್ಫೂರ್ತಿಯ ಝರಿ, ಜವಾಬ್ದಾರಿಯ ಅರಿವು ಮತ್ತು ಅಚಲ ಧೃಢತೆ ನೆಲೆಯೂರುತ್ತದೆ. ನಾಯಕತ್ವವೆಂಬುದು ಒಳಗಿನ ಸುಪ್ತ ಚೈತನ್ಯವನ್ನು ಜಾಗೃತಗೊಳಿಸುವ ಮೌನ ಕ್ರಾಂತಿ.



# ವಿದ್ಯಾರ್ಥಿ ಜೀವನದಲ್ಲೆ ತಾತ್ವಿಕವಾಗಿ ಮುನ್ನಡೆಯೋಣ

ಒಬ್ಬ ವಿದ್ಯಾರ್ಥಿಯು ಮುಖ್ಯವಾಗಿ ಜೀವನದಲ್ಲಿ, ಗೌರವ ಮತ್ತು ಉತ್ತಮ ನಡವಳಿಕೆಯುಳ್ಳ ಸಂಸ್ಕೃತಿಯನ್ನು ರೂಢಿಸಿಕೊಂಡಿರುವುದರ ಮೂಲಕ ತನ್ನದೇ ಆದ ಉತ್ತಮ ಸಂದೇಶ ನೀಡುವ ಒಬ್ಬ ವಿದ್ಯಾವಂತ ಪ್ರಜೆ ಯಾಗಿ ಬೆಳೆಯಬೇಕು. ಹಾಗೆಯೇ, ದೃಢವಾದ ಗುರಿಯನ್ನು ಮತ್ತು ಆತ್ಮವಿಶ್ವಾಸವನ್ನು ಹೊಂದಿರಬೇಕು. ಕೇವಲ ಜ್ಞಾನವೊಂದದ್ದರೆ ಸಾಲದು ಅದರಿಂದ ಸಮಾಜಕ್ಕೆ ಮತ್ತು ದೇಶದ ಒಳಿತಿಗಾಗಿ ಮಾಡಬಹುದಾದ ಪ್ರಯೋಜನಗಳನ್ನು ತಿಳಿದು ಮತ್ತೊಬ್ಬರಿಗೂ ತಿಳಿಸುವಂತವನಾಗಬೇಕು.

ಜೀವನದಲ್ಲಿ ತನ್ನದೇ ಆದ ಶಿಸ್ತು ಮತ್ತು ಪ್ರಾಮಾಣಿಕತೆಯನ್ನು ಬೆಳೆಸಿಕೊಳ್ಳುವುದರ ಮೂಲಕ ಸಮಾಜಕ್ಕೆ ಒಬ್ಬ ಉತ್ತಮ ನಾಯಕನಾಗಿ, ಅಲ್ಲದೆ ಶ್ರದ್ಧೆಯಿಂದ ತಮ್ಮ ತಂದೆ ತಾಯಿಯರನ್ನು ಗೌರವಿಸುವ ಮನೋಭಾವನೆಯನ್ನು ಹೊಂದಿಕೊಂಡು ಯಶಸ್ಸನ್ನು ಕಾಣಬೇಕು. ಶಿಸ್ತು ಮತ್ತು ಸಮಯ ಪ್ರಜ್ಞೆ ಎಂಬ ಎರಡು ಮೂಲಾಂಶಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಈ ಸಮಾಜದ ಒಲಿತಿಗೆ ತನ್ನದೆ ಆದ ಒಂದು ಚಾಪು ಮೂಡಿಸುವುದರಲ್ಲಿ ಎತ್ತಿದ ಕೈಯಾಗಬೇಕು. ನಾನೇ ಎಲ್ಲಾ ಎಂಬ ರೀತಿಯಲ್ಲಿ ನಡೆದುಕೊಂಡರೆ,ಅದು ವಿದ್ಯಾರ್ಥಿಯ ಉತ್ತಮ ಲಕ್ಷಣವಲ್ಲ, ಯಾಕೆಂದರೆ ನಮ್ಮನ್ನು ನೋಡಿ ಕಲಿಯುವ ಮಂದಿಗಳು ಸಾಕಷ್ಟು. ಮುಂದಿನ ಪೀಳಿಗೆಗೆ ಮಾದರಿಯಾಗುವಂತೆ ನಮ್ಮ ಜೀವನವನ್ನು ತಾತ್ವಿಕವಾಗಿ ಮುನ್ನಡೆಸಬೇಕು. ಅಲ್ಲದೆ ಒಳ್ಳೆಯ ನಡತೆ ಉತ್ತಮ ರೀತಿಯ ಮನೋಜ್ಞಾನವನ್ನು ರೂಪಿಸಿಕೊಂಡಿರಬೇಕು.

ವಿದ್ಯಾರ್ಥಿಯಾದವರು ಶ್ರದ್ಧೆಯಿಂದ ಭಕ್ತಿಯಿಂದ ಎಲ್ಲರನ್ನು ಗೌರವಿಸಬೇಕು.ಮತ್ತು ಅವರಿಂದ ಉತ್ತಮ ರೀತಿಯ ಪ್ರಶಂಸೆಯನ್ನು ಪಡೆಯುವುದು ಮುಖ್ಯ.

ಒಬ್ಬ ವಿದ್ಯಾರ್ಥಿಯು ಮುಖ್ಯವಾಗಿ ಜೀವನದಲ್ಲಿ , ಗೌರವ ಮತ್ತು ಉತ್ತಮ ನಡವಳಿಕೆಯುಳ್ಳ ಸಂಸ್ಕೃತಿಯನ್ನು ರೂಢಿಸಿಕೊಂಡಿರುವುದರ ಮೂಲಕ ತನ್ನದೇ ಆದ ಉತ್ತಮ ಸಂದೇಶ ನೀಡುವ ಒಬ್ಬ ವಿದ್ಯಾವಂತ ಪ್ರಜೆ ಯಾಗಿ ಬೆಳೆಯಬೇಕು. ಹಾಗೆಯೇ, ದೃಢವಾದ ಗುರಿಯನ್ನು ಮತ್ತು ಆತ್ಮವಿಶ್ವಾಸವನ್ನು ಹೊಂದಿರಬೇಕು.

ಕೇವಲ ಜ್ಞಾನವೊಂದದ್ದರೆ ಸಾಲದು ಅದರಿಂದ ಸಮಾಜಕ್ಕೆ ಮತ್ತು ದೇಶದ ಒಳಿತಿಗಾಗಿ ಮಾಡಬಹುದಾದ ಪ್ರಯೋಜನಗಳನ್ನು ತಿಳಿದು ಮತ್ತೊಬ್ಬರಿಗೂ ತಿಳಿಸುವಂತವನಾಗಬೇಕು. ಜೀವನದಲ್ಲಿ ತನ್ನದೇ ಆದ ಶಿಸ್ತು ಮತ್ತು ಪ್ರಾಮಾಣಿಕತೆಯನ್ನು ಬೆಳೆಸಿಕೊಳ್ಳುವುದರ ಮೂಲಕ ಸಮಾಜಕ್ಕೆ ಒಬ್ಬ ಉತ್ತಮ ನಾಯಕನಾಗಿ, ಅಲ್ಲದೆ ಶ್ರದ್ಧೆಯಿಂದ ತಮ್ಮ ತಂದೆ ತಾಯಿಯರನ್ನು ಗೌರವಿಸುವ ಮನೋಭಾವನೆಯನ್ನು ಹೊಂದಿಕೊಂಡು ಯಶಸ್ಸನ್ನು ಕಾಣಬೇಕು. ಶಿಸ್ತು ಮತ್ತು ಸಮಯ ಪ್ರಜ್ಞೆ ಎಂಬ ಎರಡು ಮೂಲಾಂಶಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಈ ಸಮಾಜದ ಒಲಿತಿಗೆ ತನ್ನದೆ ಆದ ಒಂದು ಚಾಪು ಮೂಡಿಸುವುದರಲ್ಲಿ ಎತ್ತಿದ ಕೈಯಾಗಬೇಕು. ನಾನೇ ಎಲ್ಲಾ ಎಂಬ ರೀತಿಯಲ್ಲಿ ನಡೆದುಕೊಂಡರೆ, ಅದು ವಿದ್ಯಾರ್ಥಿಯಾದವನ ಉತ್ತಮ ಲಕ್ಷಣವಲ್ಲ, ಯಾಕೆಂದರೆ ನಮ್ಮನ್ನು ನೋಡಿ ಕಲಿಯುವ ಮಂದಿಗಳು ಸಾಕಷ್ಟು. ಮುಂದಿನ ಪೀಳಿಗೆಗೆ ಮಾದರಿಯಾಗುವಂತೆ ನಮ್ಮ ಜೀವನವನ್ನು ತಾತ್ವಿಕವಾಗಿ ಮುನ್ನಡೆಸಬೇಕು. ಅಲ್ಲದೆ ಒಳ್ಳೆಯ ನಡತೆ ಉತ್ತಮ ರೀತಿಯ ಮನೋಜ್ಞಾನವನ್ನು ರೂಪಿಸಿಕೊಂಡು, ಶ್ರದ್ಧೆಯಿಂದ ಭಕ್ತಿಯಿಂದ ಎಲ್ಲರನ್ನು ಗೌರವಿಸುವ ಒಬ್ಬ ವಿದ್ಯಾರ್ಥಿ ಇಡಿ ಸಮಾಜಕ್ಕೊಂದು ಮಾದರಿ. ಮತ್ತು ಅವರಿಂದ ಉತ್ತಮ ರೀತಿಯ ಪ್ರಶಂಸೆಯನ್ನು ಪಡೆಯುವವರಾಗಿರುತ್ತೇವೆ.

ಉತ್ತಮ ಗುಣ– ನಡೆತೆಗಳಿಗೆ ಯಾವತ್ತು ಕೊನೆ ಎಂಬುದಿಲ್ಲ, ನಾವು ಎಲ್ಲೆ ಇದ್ದರೂ ಸಹ ನಮ್ಮ ನಡತೆಗಳನ್ನು ಮತ್ತೊಬ್ಬರಿಗೆ ಹೇಳುವ ಅನೇಕ ಉದಾಹರಣೆಗಳನ್ನು ಕಾಣಬಹುದು. ನಾವು ನಿತ್ಯ ಜೀವನದಲ್ಲಿ ಬೆಳೆಯುತ್ತಾ ಹೋದಂತೆ ಒಳ್ಳೆಯ ಕನಸುಗಳನ್ನು ಕಾಣಬೇಕು. ಕೆಟ್ಟ ದಾರಿಗೆ ಕುರುಡರಂತೆ ಇದ್ದು, ಉತ್ತಮವಾದ ದಾರಿಯಲ್ಲಿ ಹೆಜ್ಜೆ ಹಾಕಬೇಕು.

ಸ್ವಾಮಿ ವಿವೇಕಾನಂದರ ಜೀವನ ಶೈಲಿಯನ್ನು ನಾನು ಅರಿತುಕೊಂಡಿದ್ದೇವೆ ಅವರನ ಕನಸುಗಳನ್ನು ನಾವು ನನಸು ಮಾಡುವ ಉತ್ತಮ ವ್ಯಕ್ತಿಗಳಾ ಬೆಳೆದರೆ ನಾವು ಕಲಿತ ಶಿಕ್ಷಣಕ್ಕೂ ಗೌರವ. ಜೊತೆಗೆ ಅಧ್ಯಾತ್ಮಿಕತೆಯಲ್ಲಿಯೂ ತೊಡಗಿಸಿಕೊಂಡು ಧಾರ್ಮಿಕ ಕ್ಷೇತ್ರಗಳಲ್ಲಿ ಗುರುತಿಸುವುದರ ಮೂಲಕವೂ ಈ ಸಮಾಜಕ್ಕೆ ನಾವು ಅಪಾರ ಕೊಡುಗಳನ್ನು ಸೇವೆಗಳನ್ನು ನೀಡುವಂತವರಾಗಬೇಕು. ಅದೆಲ್ಲದಕ್ಕೂ ಮುಖ್ಯ ಕಾರಣ ತಾವು ವಿದ್ಯಾರ್ಥಿ ಜೀವನದಲ್ಲಿ ಉತ್ತಮರಾಗಿ ಬೆಳೆದರೆ ಮಾತ್ರ ಸಾಧ್ಯ.

ಉದಾಹರಣೆಗೆ ಸ್ವಾಮಿ ವಿವೇಕಾನಂದರು ಹೇಳಿದ ಮಾತಿನಂತೆ ಎಳಿ ಎದ್ದೆಳಿ ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬ ಅವರ ಪ್ರಸಿದ್ಧ ಸಂದೇಶವು ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ಮತ್ತು ಪರಿಶ್ರಮದ ಮಹತ್ವವನ್ನು ತಿಳಿಸುತ್ತದೆ. ಅವರು ಯುವಜನರು ಶಿಸ್ತು, ಸಮಯಪ್ರಜ್ಞೆ, ಪ್ರಾಮಾಣಿಕತೆ ಮತ್ತು ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಪ್ರೇರೇಪಿಸಿದರು.

ತಮ್ಮ ಜ್ಞಾನ ಮತ್ತು ಚಿಂತನೆಗಳ ಮೂಲಕ ಭಾರತ ಮಾತ್ರವಲ್ಲದೆ ಇಡೀ ಜಗತ್ತಿಗೆ ಭಾರತದ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಪರಿಚಯ ಮಾಡಿಸಿದ ಮಹಾನ್ ಯುವ ನಾಯಕ ಸ್ವಾಮಿ ವಿವೇಕಾನಂದರು. ಅವರ ಕನಸುಗಳನ್ನು ನಾವೆಲ್ಲರೂ ನನಸು ಮಾಡುವಂತಹ ವ್ಯಕ್ತಿಗಳಾಗೋಣ, ಅವರು ನೀಡಿದ ಸಂದೇಶವನ್ನು ಅರಿತು ಈ ಸಮಾಜಕ್ಕೆ ನಮ್ಮದೆ ಆದ ಕೊಡುಗೆಗಳನ್ನು ನೀಡುವಂತರಾಗೋಣ. ಹಾಗಾಗಿ ವಿದ್ಯಾರ್ಥಿ ಜೀವನದಲ್ಲೆ ನಾವು ಸದೃಷ್ಟ, ಬಲಿಷ್ಠ ಸಮಾಜ ನಿರ್ಮಾಣಕ್ಕೆ ಪಣ ತೊಡೋಣ.



ಜಯೇಶ್.ಎಂ
ವಿದ್ಯಾರ್ಥಿ
ಡಾ. ಕೆ ಶಿವರಾಮ ಕಾರಂತ ಸರಕಾರಿ ಪ್ರಥಮ ದರ್ಜೆ ಕಾಲೇಜು ಬೆಳ್ಳಾರೆ.

# ಪಾಲಕರ ಕಠೋರತೆ: ಮಕ್ಕಳ ಭವಿಷ್ಯ ಕಮರಿಸುವ ಬಿರುಗಾಳಿಯಾಗದಿರಲಿ

**ವೀರಣ್ಣ ಕಲಕೇರಿ, ಪತ್ರಕರ್ತ ಸಾಹಿತಿ ಕೆಂಭಾವಿ**



ಲೋಕದ ದೃಷ್ಟಿಯಲ್ಲಿ ತಂದೆಯೆಂದರೆ ಕಷ್ಟಗಳ ಮಳೆಯಿಂದ ಇಡೀ ಕುಟುಂಬವನ್ನು ಕಾಯುವ ಛತ್ರಿ. ಹಡೆದ ಮಕ್ಕಳಿಗೆ ಆತನೇ ಮೊದಲ ಆದರ್ಶ, ಬದುಕಿನ ಹಾದಿ ತೋರಿಸುವ ದಿಕ್ಸೂಚಿ. ಹಲವರಿಗೆ ತಂದೆಯೇ ಜಗತ್ತಿನ ಅತಿ ದೊಡ್ಡ 'ಹೀರೋ' ಆಗಿ ಕಾಣುವುದು ಇದೇ ಕಾರಣಕ್ಕೆ. ಆದರೆ, ಪ್ರತಿಯೊಬ್ಬರ ಬದುಕಿನ ಚಿತ್ರಣವೂ ಹೀಗೆಯೇ ಇರುವುದಿಲ್ಲ. ಕೆಲವು ಕುಟುಂಬಗಳಲ್ಲಿ ತಂದೆ ಎಂಬ ಸ್ಥಾನ ಕೇವಲ ಅಧಿಕಾರ ಅಥವಾ ಸರ್ವಾಧಿಕಾರದ ಕೇಂದ್ರವಾಗಿ ಮಾರ್ಪಟ್ಟುಬಿಡುತ್ತದೆ. ಆ ಸ್ಥಾನದಲ್ಲಿ ಅಜ್ಞಾನ ಮತ್ತು ಕಠೋರತೆ ಬಂದು ಕುಳಿತಾಗ, ಆತ ತನ್ನ ಅರಿವಿಲ್ಲದೆಯೇ ಮಕ್ಕಳ ಭವಿಷ್ಯವನ್ನು ಕಮರಿಸುವ ಬಿರುಗಾಳಿಯಾಗುತ್ತಾನೆ. ಇದಕ್ಕೆ ಮುಖ್ಯ ಕಾರಣ, ಪಾಲಕರ ಸೀಮಿತ ಬುದ್ಧಿ ಮತ್ತು ಕಠೋರ ಮನೋಭಾವ. ಇದು ಮಕ್ಕಳ ದೈಹಿಕ ಬೆಳವಣಿಗೆಗಿಂತ ಹೆಚ್ಚಾಗಿ ಅವರ ಮಾನಸಿಕ ಜಗತ್ತಿನ ಮೇಲೆ ಘೋರವಾದ ಗಾಯಗಳನ್ನು ಉಂಟುಮಾಡುತ್ತದೆ.

ಒಬ್ಬ ತಂದೆ ತನ್ನ ಸ್ಥಾನದ ಅರ್ಹತೆಯನ್ನು ಕಳೆದುಕೊಳ್ಳುವುದು ಆತನ ಭಾಷೆ ಮತ್ತು ವರ್ತನೆಯಿಂದ. ಮನೆಯವರೊಂದಿಗೆ ಬಳಸುವ ಅಸಭ್ಯ ಭಾಷೆ, ಸದಾ ನಿಂದಿಸುವ ಪ್ರವೃತ್ತಿ ಮತ್ತು ಮಕ್ಕಳ ಸ್ವಾತಂತ್ರ್ಯಕ್ಕೆ ಪ್ರತಿ ಹೆಜ್ಜೆಯಲ್ಲೂ ಅಡ್ಡಿಪಡಿಸುವುದು ಮಕ್ಕಳ ಮನೋಸ್ಥೈರ್ಯವನ್ನು ಕುಗ್ಗಿಸುತ್ತದೆ. ಅಜ್ಞಾನದಿಂದ ಹೇರುವ ಕಟ್ಟುನಿಟ್ಟಿನ ನಿಯಮಗಳು ಮಕ್ಕಳನ್ನು ಭಯಗ್ರಸ್ತರನ್ನಾಗಿ ಮಾಡುತ್ತವೆ. ನನಗೆ ಗೊತ್ತು ನೀ ಹೀಗೆ ಮಾಡುತ್ತಿ ಅಂತ ನಿನ್ನ ಹಣೆಬರಹವೆ ಇಷ್ಟು, ನೀ ಕಡೆತನಕ ಶ್ಯಾಣೆ ಆಗಲ್ಲ ಹೀಗೆ ಮಗುವಿನ ಕುರಿತು ನಿಮ್ಮ ಕೀಳರಿಮೆ ಮಾತು ಮಾನಸಿಕ ಸ್ಥೈರ್ಯ ಮತ್ತು ಬೆಳವಣಿಗೆಗೆ ಘೋರ ಪರಿಣಾಮ ಬೀರುತ್ತದೆ. ಹೀಗೇ ಇರಬೇಕು, ಹೀಗೆ ಮಾಡಬೇಕು ಎಂದು ಮಗುವಿನ ಸಣ್ಣ ಪುಟ್ಟ ತಪ್ಪುಗಳಿಗೆ ಗೆರೆ ಎಳೆಯುವುದರಿಂದ ಮಕ್ಕಳು ಮಾನಸಿಕವಾಗಿ ಕುಬ್ಜವಾಗಿ ಬೆಳೆಯುತ್ತಾರೆ. ತನ್ನ ಅಜ್ಞಾನವನ್ನೇ ಪರಮ ಜ್ಞಾನವೆಂದು ನಂಬುವ ಇಂತಹ ತಂದೆ, ಮಕ್ಕಳ ಕೌಶಲ್ಯಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಬದಲು ತನ್ನ ಅಧಿಕಾರ ಅವರ ಮೇಲೆ ಹೇರಲು ಮುಂದಾಗುತ್ತಾನೆ. ಮಕ್ಕಳ ಬಾಲ್ಯದ ಸ್ವಾತಂತ್ರ್ಯವನ್ನು ಕಿತ್ತುಕೊಂಡು, ನನ್ನ ಮಾತಿನ ಗೆರೆಯನ್ನು ದಾಟಬಾರದು ಎಂದು ಲಕ್ಷ್ಮಣ ರೇಖೆ ಎಳೆಯುವ ಮೂಲಕ ಮನೆಯನ್ನೇ ಮಕ್ಕಳ ಪಾಲಿಗೆ ಬಂಧಿಖಾನೆಯನ್ನಾಗಿ ಮಾಡುತ್ತಾನೆ. ಹೀಗಾದಾಗ ತಂದೆಯನ್ನು ಕಂಡರೆ ಪ್ರೀತಿಯಿಂದ ಓಡಿ ಬರಬೇಕಾದ ಮಕ್ಕಳು, ಆತನ ಹೆಜ್ಜೆಯ ಸದ್ದು ಕೇಳುತ್ತಿದ್ದಂತೆ ಕೋಣೆಯ ಮೂಲೆಗೆ ಸೇರಿ ನಡುಗುವಂತಾಗುವುದು ತಂದೆತನಕ್ಕೆ ಸಂಭವಿಸುವ ಅತಿ ದೊಡ್ಡ ಸೋಲೆ ಸರಿ.

ಹೀಗೆ ಬಾಲ್ಯದಲ್ಲಿ ನಿರಂತರವಾಗಿ ಭಯ ಮತ್ತು ಹತೋಟಿಯಲ್ಲಿ ಬೆಳೆದ ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ಸ್ವತಂತ್ರ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಕುಂಟಿತಗೊಳ್ಳುತ್ತದೆ. ಹೊರಗಿನ ಜಗತ್ತನ್ನು ಎದುರಿಸುವ ಧೈರ್ಯವಿಲ್ಲದೆ, ಸದಾ ಕೀಳರಿಮೆಯಿಂದ ಬಳಲುವಂತಾಗಬಹುದು, ಪಾಲಕರ ಈ ಕಠಿಣ ವರ್ತನೆಯಿಂದ ಬದುಕಿನಲ್ಲಿ ಸಿಗಬೇಕಾದ ಉತ್ತಮ ಅವಕಾಶಗಳು ಕೈತಪ್ಪಿಹೋಗುತ್ತವೆ. ವಯಸ್ಕನಾದ ಮೇಲೂ ಬದುಕಿನಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲು ಭಯಪಡುವಂತಾಗಿ, ಆಘಾತದಿಂದ ಹೊರಬರಲು ಮಗುವಿಗೆ ಹಲವು ವರ್ಷಗಳ ನಿರಂತರ ಹೋರಾಟ ಮಾಡಬೇಕಾಗುತ್ತದೆ.ಮಕ್ಕಳ ಬದುಕಿಗೆ ಪಾಲಕರೇ ಮೊದಲ ಶಿಲ್ಪಿಗಳು. ನಿಮ್ಮ ಪ್ರತಿಯೊಂದು ಮಾತು ಮತ್ತು ವರ್ತನೆ ಮಗುವಿನ ಮನಸ್ಸಿನ ಮೇಲೆ ಶಾಶ್ವತ ಪರಿಣಾಮ ಬೀರುತ್ತದೆ. ಕೇವಲ ಮಕ್ಕಳ ವರ್ತನೆ ಮಾತ್ರವಲ್ಲ, ಗಂಡ–ಹೆಂಡತಿಯ ಪರಸ್ಪರ ಸಂವಾದ ಮತ್ತು ನಡವಳಿಕೆಯೂ ಮಕ್ಕಳ ಮೇಲೆ ಪ್ರಭಾವ ಬೀರುತ್ತವೆ.

ಮಗು ಹುಟ್ಟಿದ್ದು ನನ್ನಿಂದ, ಹಾಗಾಗಿ ನಾನು ಹೇಳಿದ್ದೇ ಸರಿ ಎಂಬ ಧೋರಣೆ ಸರಿಯಲ್ಲ.

ವಯಸ್ಸಿನಲ್ಲಿ ಹಿರಿಯರಾದ ತಕ್ಷಣ ಮಕ್ಕಳ ಕುರಿತು ವಿಷಯಗಳಲ್ಲೂ ಜ್ಞಾನಿಗಳಾಗಲು ಸಾಧ್ಯವಿಲ್ಲ. ಮಕ್ಕಳಿಗೂ ಅವರ ಮನಸ್ಥಿಗೆ ತಕ್ಕಂತೆ ಸ್ವಂತ ಆಲೋಚನೆಗಳಿರುತ್ತವೆ ಎಂಬುದನ್ನು ಗೌರವಿಸಿ. ಶಿಸ್ತಿನ ಹೆಸರಿನಲ್ಲಿ ಮನೆಯಲ್ಲಿ ಭಯದ ಸಾಮ್ರಾಜ್ಯ ಕಟ್ಟಬೇಡಿ. ಇಂದು ನಿಮ್ಮ ಅಧಿಕಾರದ ಮುಂದೆ ಮಗು ಅಸಹಾಯಕವಾಗಿ ಅಳಬಹುದು.

ಆದರೆ ಕಾಲ ಉರುಳಿ, ಆ ಮಗು ಪ್ರಬುದ್ಧನಾದಾಗ ಅಂದು ನೀವು ತೋರಿದ ಅಹಂಕಾರದ ಹಿಂದಿದ್ದ ಬೌದ್ಧಿಕ ಅಭಾವವನ್ನು ನೋಡಿ ನಗಬಹುದು ಅಥವಾ ತನ್ನ ಬದುಕು ಹಾಳಾದದ್ದನ್ನು ನೆನೆದು ಕಣ್ಣೀರಿಡಬಹುದು. ನಿಮ್ಮ ಮಕ್ಕಳ ಕಣ್ಣಿನಲ್ಲಿ ಆ ನಗು ಮತ್ತು ಕಣ್ಣೀರಿನ ವಿಚಿತ್ರ ಸಂಗಮ ಮೂಡಬಾರದು ಎಂದರೆ ಇಂದೇ ಎಚ್ಚೆತ್ತುಕೊಳ್ಳಿ. ಮಕ್ಕಳಿಗೆ ಕೇವಲ ಆರ್ಥಿಕ ಆಸರೆಯಾಗದೆ, ಅವರ ಬದುಕಿನ ನಿಜವಾದ ಹೀರೋ ಮತ್ತು ಪ್ರೀತಿಯ ರಕ್ಷಣಾ ಕವಚವಾಗಿರಿ.



## ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು


# ಒಂದೇ ಜಾತಿ,ಒಂದೇ ಧರ್ಮ,ಒಂದೇ ಮತ, ಒಂದೇ ದೇವರು ಎಂದು ಪ್ರತಿಪಾದಿಸಿದ ಸಾರ್ವಕಾಲಿಕ ಸಮಾಜ ಸುಧಾರಕ ಶ್ರೀ ನಾರಾಯಣಗುರುಗಳ 170 ನೇ ವರ್ಷದ ಜನ್ಮ ಜಯಂತಿ

**ಗುರುಕುಲ ಪದ್ದತಿಯಲ್ಲಿ ಶಿಕ್ಷಣ ಪಡೆದು ಅಸಾಧಾರಣ ಬುದ್ಧಿಶಕ್ತಿ ಹೊಂದಿದ್ದ ಗುರು ಕಲಿಸಿಕೊಟ್ಟ ವಿದ್ಯೆಯನ್ನ ಅತಿ ಶೀಘ್ರದಲ್ಲಿ ಗ್ರಹಿಸುತ್ತಿದ್ದರು ಮುಂದೆ ಆಧ್ಯಾತ್ಮ ಲೋಕವನ್ನ ಆರಿಸಿಕೊಂಡು ಶಿಸ್ತು,ಶ್ರದ್ಧೆ,ಭಕ್ತಿಯಿಂದ ವೈರಾಗ್ಯ ದೀಕ್ಷೆಯನ್ನು ಸ್ವೀಕರಿಸಿ ಸಕಲ ವಿದ್ಯಾ ಪಾಂಡಿತ್ಯವನ್ನು ಗಳಿಸಿ ಸಮಾಜದಲ್ಲಿ ನೆಲೆಯೂರಿರುವ ಶಾಶ್ವತ ಸಮಾಜಕ ಪಿಡುಗನ್ನ ಹೋಗಲಾಡಿಸಲು ಶ್ರಮವಹಿಸಿದರು.**

ಶ್ರೀ ನಾರಾಯಣ ಗುರುಗಳು ಕೇರಳದ ತಿರುವಂಥಪುರದ ಬಳಿ ಚಂಬಳಂಬಿ ಎಂಬ ಗ್ರಾಮದಲ್ಲಿ 1856 ಆಗಸ್ಟ್ 31 ರಂದು ಜನಿಸಿದರು.

ತಂದೆ ಮದನ್ ಆಶಾನ್, ತಾಯಿ ಕುಟ್ಟಿಯಮ್ಮ. ನಾರಾಯಣ ಗುರುಗಳು ಬಾಲ್ಯದಿಂದಲೇ ಅನುಕಂಪ,ಪ್ರೀತಿ, ಸ್ನೇಹ,ದೇವರಲ್ಲಿ ಭಕ್ತಿಭಾವ ಎಲ್ಲಾ ಸದ್ಗುಣಗಳು ಮೈಗೂಡಿದವು. ಇವರು ಬೆಳೆದು ದೊಡ್ಡವರಾದ ಹಾಗೆ ಇಹಲೋಕದ ಆಕರ್ಷಣೆಗಳು,ಸಂಸಾರದ ಬಂಧನ ಎಲ್ಲರಿಗೂ ದೂರ ಸರಿಯಬೇಕೆಂಬ ಭಾವನೆ ಹುಟ್ಟಿತು. ಇವರಲ್ಲಿ ಸನ್ಯಾಸತ್ವ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುತ್ತಿತ್ತು.

ಸಮಾಜದಲ್ಲಿ ಬಲವಾಗಿ ನಾಟಿದ್ದ ಅಜ್ಞಾನ ಮತ್ತು ಮೌಢ್ಯಗಳನ್ನ ತೊಡೆದು ಹಾಕಲು ನಿರಂತರವಾಗಿ ಶ್ರಮಿಸಿ ಜ್ಞಾನದ ಬೆಳಕನ್ನ ಪ್ರಸರಿಸಿದ ಮಹಾನ್ ಸಾಧಕರು ಶ್ರೀ ನಾರಾಯಣ ಗುರುಗಳು. ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸಿದ ಇವರು ಶೋಷಿತರ ಉದ್ಧಾರಕ ಎನಿಸಿದ್ದಾರೆ. 12ನೇ ಶತಮಾನದಲ್ಲಿ ಬಸವಣ್ಣನವರು ಸಮಾಜದಲ್ಲಿ ಮೇಲು ಕೀಳೆಂಬ



ವ್ಯತ್ಯಾಸವನ್ನು ಕೊನೆಗಾಣಿಸಲು ಪ್ರಯತ್ನಿಸಿದಂತೆ 20ನೇ ಶತಮಾನದ ಪೂರ್ವಾರ್ಧದಲ್ಲಿ ಶ್ರೀ ನಾರಾಯಣ ಗುರುಗಳು ಜಾತಿ ಪದ್ಧತಿಯ ವಿರುದ್ಧ ಆಂದೋಲನ ನಡೆಸಿದರು.

ಈ ದೃಷ್ಟಿಯಲ್ಲಿ ನಾರಾಯಣ ಗುರು ಓರ್ವ ನಿರ್ಭಯ ಸಮಾಜ ಸುಧಾರಕ ಎನಿಸಿದ್ದಾರೆ. ಜಾತೀಯತೆ,ಅಸ್ಪೃಶ್ಯತೆ ಎಂಬ ವಿಷವೃಕ್ಷವು ಇಡೀ ಶೂದ್ರ ಜನಸಮೂಹವನ್ನು ಉಸಿರುಗಟ್ಟಿ ಸಾಯಿಸುತ್ತಿರುವ ಘೋರ ಕ್ರೌರ್ಯದ ತುರಿಯಾವಸ್ಥೆಯಲ್ಲಿ ಜಾತಿ ವೈಶಮ್ಯ, ಮೂಡನಂಬಿಕೆ, ಪ್ರಾಣಿವಧೆ,ಅಸ್ಪೃಶ್ಯತೆ ಹೀಗೆ ಸಮಾಜದ ಹಲವು ಅನಾಚಾರಗಳ ವಿರುದ್ಧ ಹೋರಾಟ ನಡೆಸಿದರು.

ಶ್ರೀ ನಾರಾಯಣ ಗುರುಗಳ ಸಮಾಜ ಸುಧಾರಣೆಯ ತತ್ವಗಳು ಒಂದೇ ಜಾತಿ, ಒಂದೇ ಧರ್ಮ,ಒಂದೇ ಮತ, ಒಂದೇ ಕುಲ,ಒಂದೇ ಪಂಗಡ ಒಬ್ಬನೇ ದೇವರು ಇಂತಹ ಬೋಧನೆಗಳು ಸಾರ್ವಕಾಲಿಕವಾಗಿದ್ದು ಅವುಗಳ ಪ್ರಸ್ತುತತೆ,ಚಿರಂತನ ಎನಿಸುತ್ತದೆ.

ಶ್ರೀ ನಾರಾಯಣ ಗುರುಗಳು ಇಡೀ ಸಮಾಜಕ್ಕೆ ಉತ್ತಮ ಸಂದೇಶ ನೀಡಿ 1928 ಸೆಪ್ಟೆಂಬರ್ 20 ರಂದು ಇಹಲೋಕವನ್ನ ತ್ಯಜಿಸಿ ಶಾಶ್ವತವಾಗಿ ಕಾಣದ ಲೋಕಕ್ಕೆ ಪಾದಾರ್ಪಣೆ ಮಾಡಿದರು.

ಇಂತಹ ಮಹಾನ್ ಸಂತ ಸಾರ್ವಕಾಲಿಕ ಸಮಾಜ ಸುಧಾರಕ ಶ್ರೀ ನಾರಾಯಣ ಗುರುಗಳ 170 ನೇ ವರ್ಷದ ಜನ್ಮದಿನದಂದು ನಾವು ಸ್ಮರಿಸಿ,ನೆನೆಯುತ್ತಾ ಅವರ ಆದರ್ಶಗಳು ತತ್ವಸಿದ್ಧಾಂತಗಳು, ಮನುಕುಲಕ್ಕೆ ಅಗತ್ಯವಾಗಿ ಬೇಕಾಗಿರುವ ಭವಿಷ್ಯದ ಚಿಂತನೆಗಳು, ಮಾನವೀಯತೆಗಳು ಈಗಿನ ಪೀಳಿಗೆಗೆ ಸ್ಫೂರ್ತಿದಾಯಕವಾಗಿದ್ದು ಎಲ್ಲಾ ಧರ್ಮ ವರ್ಗದ ಜನರು ಪಾಲಿಸುವ ಸಂಕಲ್ಪ ಮಾಡೋಣ.



## ಲೇಖಕರು

ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು


# ಯಶ್ ಜೀವನದ ಪಾಠ: ಹಣ ಯಶಸ್ಸು ಬಂದಾಗ ಬದಲಾಗುವ ಜನರ ದೃಷ್ಟಿಕೋನ

**ಕಷ್ಟದ ದಿನಗಳಲ್ಲಿ ಅವಕಾಶಕ್ಕಾಗಿ ಹೋರಾಡಿದ ಯಶ್, ಇಂದು ಭಾರತೀಯ ಚಿತ್ರರಂಗದಲ್ಲಿ ದೊಡ್ಡ ಹೆಸರು ಪಡೆದಿದ್ದಾರೆ. ಬೆಂಗಳೂರಿಗೆ ಬಂದ ಆರಂಭದ ದಿನಗಳಲ್ಲಿ ಅವರ ಬಳಿ ಕೇವಲ 300 ರೂಪಾಯಿ ಇದ್ದವು ಎಂದು ಅವರು ಹಿಂದಿನ ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದರು. ಅಲ್ಲಿಂದ ಆರಂಭವಾದ ಅವರ ಪ್ರಯಾಣ ಕಠಿಣ ಪರಿಶ್ರಮ, ಆತ್ಮವಿಶ್ವಾಸ ಮತ್ತು ನಿರಂತರ ಪ್ರಯತ್ನದ ಮೂಲಕ ದೊಡ್ಡ ಯಶಸ್ಸಿನ ಹಂತಕ್ಕೆ ತಲುಪಿತು.ಯಶಸ್ಸು ಬಂದ ನಂತರ ಜನರು ನಮ್ಮನ್ನು ನೋಡುವ ರೀತಿಯಲ್ಲಿ ಬದಲಾವಣೆ ಆಗುತ್ತದೆ ಎಂಬುದನ್ನು ಅವರು ತಮ್ಮ ಅನುಭವಗಳ ಮೂಲಕ ಅರ್ಥ ಮಾಡಿಕೊಂಡಿದ್ದಾರೆ.**

ಜೀವನದಲ್ಲಿ ಯಶಸ್ಸು ಸಿಕ್ಕಾಗ ಬದಲಾಗುವುದು ಕೇವಲ ನಮ್ಮ ಆರ್ಥಿಕ ಸ್ಥಿತಿಯಲ್ಲ; ನಮ್ಮ ಸುತ್ತಲಿನ ಜನರ ದೃಷ್ಟಿಕೋನವೂ ಬದಲಾಗುತ್ತದೆ. ನಿನ್ನೆ ಸಾಮಾನ್ಯ ವ್ಯಕ್ತಿಯಂತೆ ಕಂಡಿದ್ದವನನ್ನು ಇಂದು ಯಶಸ್ವಿ ವ್ಯಕ್ತಿಯಾಗಿ ನೋಡಲಾಗುತ್ತದೆ. ಹಣ, ಹೆಸರು, ಖ್ಯಾತಿ ಬಂದ ನಂತರ ಸಿಗುವ ಗೌರವದಲ್ಲಿ ಎಷ್ಟು ನಿಜವಾದದ್ದು, ಎಷ್ಟು ಪರಿಸ್ಥಿತಿಯಿಂದ ಬಂದದ್ದು ಎಂಬ ಪ್ರಶ್ನೆ ಬಹಳ ಸೂಕ್ಷ್ಮವಾದದ್ದು. ನಟ ಯಶ್ ಅವರ ಜೀವನಯಾನ ಈ ವಿಚಾರಕ್ಕೆ ಒಂದು ಗಮನಾರ್ಹ ಉದಾಹರಣೆಯಾಗಿದೆ. ಯಶಸ್ಸಿನ ಮೊದಲು ನಮ್ಮ ಸಾಮರ್ಥ್ಯವನ್ನು ಪ್ರಶ್ನಿಸುವವರೇ, ಯಶಸ್ಸಿನ ನಂತರ ನಮ್ಮನ್ನು ಹೊಗಳುವವರಾಗಬಹುದು. ಹಣವಿದ್ದಾಗ ನಮ್ಮ ಮಾತಿಗೆ ಹೆಚ್ಚಿನ ಬೆಲೆ ಸಿಗುತ್ತದೆ. ಅಧಿಕಾರ ಅಥವಾ ಖ್ಯಾತಿ ಬಂದಾಗ ನಮ್ಮ ಸುತ್ತಲೂ ಜನರ ಸಂಖ್ಯೆ ಹೆಚ್ಚಾಗುತ್ತದೆ. ಆದರೆ ಆ ಸಂಬಂಧಗಳೆಲ್ಲವೂ ಹೃದಯಪೂರ್ವಕವಾಗಿರುತ್ತವೆ ಎಂದು ಭಾವಿಸುವುದು ತಪ್ಪು.ಯಶ್ ಅವರ ಮಾತುಗಳಲ್ಲಿ ಮತ್ತೊಂದು ಪ್ರಮುಖ ಅಂಶವೆಂದರೆ ಯಶಸ್ಸನ್ನು ತಲೆಗೆ ಏರಿಸಿಕೊಳ್ಳಬಾರದು ಎಂಬುದು. ಅವರು ತಮ್ಮ ಹಿಂದಿನ ಸಂದರ್ಶನಗಳಲ್ಲಿ ಯಶಸ್ಸಿನ ಹಿಂದೆ ಶಿಸ್ತು, ಸಮರ್ಪಣೆ ಮತ್ತು ತ್ಯಾಗ ಮುಖ್ಯವೆಂದು ಹೇಳಿದ್ದಾರೆ. ಒಂದು ಚಿತ್ರದ ಯಶಸ್ಸನ್ನು ಒಬ್ಬರದ್ದೆಂದು ಪರಿಗಣಿಸುವುದು ತಪ್ಪು. ಅದರ ಹಿಂದೆ ಇಡೀ ತಂಡದ ಪರಿಶ್ರಮವಿರುತ್ತದೆ ಎಂಬ ಅವರ ನಿಲುವು ಗಮನಾರ್ಹ. ಇತ್ತೀಚಿನ ಅವರ ತಂದೆಯ ಕುರಿತ ನೆನಪು ಕೂಡ ಇದೇ ವಿಚಾರಕ್ಕೆ ಮತ್ತೊಂದು ಆಯಾಮ ನೀಡುತ್ತದೆ. ಯಶ್ ದೊಡ್ಡ ನಟನಾದ ನಂತರವೂ ಅವರ ತಂದೆ ಬಸ್ ಚಾಲಕರಾಗಿ ತಮ್ಮ ಕೆಲಸವನ್ನು ಮುಂದುವರಿಸಿದ್ದರು.

ಕೆಲಸವೆಂದರೆ ಕೇವಲ ಹಣ ಗಳಿಸುವ ಮಾರ್ಗವಲ್ಲ. ಅದರಲ್ಲಿ ಗೌರವ, ಆತ್ಮತೃಪ್ತಿ ಮತ್ತು ಸ್ವಾಭಿಮಾನವೂ ಇದೆ ಎಂಬ ಸಂದೇಶ ಈ ಘಟನೆ ನೀಡುತ್ತದೆ.

ಹೀಗಾಗಿ ಯಶ್ ಅವರ ಜೀವನ ನಮಗೆ ಹೇಳುವ ದೊಡ್ಡ ಪಾಠವೆಂದರೆ ಹಣ ಮತ್ತು ಯಶಸ್ಸು ನಮ್ಮ ಮೌಲ್ಯವನ್ನು ನಿರ್ಧರಿಸುವುದಿಲ್ಲ. ನಾವು ಕಷ್ಟದ ದಿನಗಳಲ್ಲಿ ಹೇಗಿದ್ದೆವು ಮತ್ತು ಯಶಸ್ಸಿನ ನಂತರವೂ ಹೇಗಿರುತ್ತೇವೆ ಎಂಬುದೇ ನಮ್ಮ ನಿಜವಾದ ವ್ಯಕ್ತಿತ್ವವನ್ನು ತೋರಿಸುತ್ತದೆ. ನಮ್ಮ ಸುತ್ತಲಿನ ಜನರ ವರ್ತನೆ ಬದಲಾಗಬಹುದು. ಆದರೆ ನಮ್ಮ ಸ್ವಭಾವ, ಸಂಬಂಧಗಳ ಬಗ್ಗೆ ಇರುವ ಗೌರವ ಮತ್ತು ನಮ್ಮ ಬೇರುಗಳ ಬಗ್ಗೆ ಇರುವ ನೆನಪು ಬದಲಾಗಬಾರದು.ಯಶಸ್ಸು ಬಂದಾಗ ನಮ್ಮನ್ನು ಹೊಗಳುವವರಿಗಿಂತ,




ಯಶಸ್ಸು ಬರುವ ಮೊದಲು ನಮ್ಮ ಕೈ ಹಿಡಿದವರನ್ನು ನೆನಪಿಸಿಕೊಳ್ಳುವುದು ಮುಖ್ಯ. ಏಕೆಂದರೆ ಹಣದಿಂದ ಸೌಲಭ್ಯಗಳನ್ನು ಖರೀದಿಸಬಹುದು; ಖ್ಯಾತಿಯಿಂದ ಗಮನ ಸೆಳೆಯಬಹುದು. ಆದರೆ ನಿಜವಾದ ಗೌರವ ಮತ್ತು ಪ್ರೀತಿ ಗಳಿಸಲು ವ್ಯಕ್ತಿತ್ವ, ಪರಿಶ್ರಮ ಮತ್ತು ಮಾನವೀಯತೆ ಅಗತ್ಯ. ಇದೇ ಯಶ್ ಅವರ ಜೀವನದಿಂದ ಕಲಿಯಬಹುದಾದ ಅತ್ಯಂತ ದೊಡ್ಡ ಪಾಠ.

# 'ಬರ'ಭಾಗ್ಯ, 5 ತಾಲ್ಲೂಕುಗಳ ಅನ್ನದಾತನಿಗೆ ಸರ್ಕಾರದ ಬರೆ!

## ಮುಂಗಾರು ಮಳೆ ಸಂಪೂರ್ಣವಾಗಿ ಕೈಕೊಟ್ಟಿದ್ದು, 1976ರ ನಂತರದ ಅತ್ಯಂತ ಭೀಕರ ಬರಗಾಲ ಎದುರಾಗಿದೆ

• ಇಲಿಯಾಸ್ ಪಟೇಲ್. ಬಳಗಾನೂರ ರಾಜ್ಯ ವಿಶೇಷ ವರದಿಗಾರರು

• ಉದಯವಾಹಿನಿ, ಯಾದಗಿರಿ :



ಉದಯವಾಹಿನಿ ಚಿತ್ರ

ರಾಜ್ಯದಲ್ಲಿ ಈ ಬಾರಿ ಮುಂಗಾರು ಮಳೆ ಸಂಪೂರ್ಣವಾಗಿ ಕೈಕೊಟ್ಟಿದ್ದು, 1976ರ ನಂತರದ ಅತ್ಯಂತ ಭೀಕರ ಬರಗಾಲ ಎದುರಾಗಿದೆ ಎಂದು ಸರ್ಕಾರವೇ ಒಪ್ಪಿಕೊಂಡಿದೆ. ವಿಧಾನಸೌಧದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ರಾಜ್ಯದ 101 ತಾಲ್ಲೂಕುಗಳನ್ನು 'ಬರಪೀಡಿತ' ಎಂದು ಘೋಷಣೆ ಮಾಡಲಾಗಿದ್ದು, ಇದರಲ್ಲಿ 89 ತಾಲ್ಲೂಕುಗಳನ್ನು 'ತೀವ್ರ ಬರ' ಹಾಗೂ 12 ತಾಲ್ಲೂಕುಗಳನ್ನು 'ಸಾಧಾರಣ ಬರ' ಎಂದು ವರ್ಗೀಕರಿಸಲಾಗಿದೆ. ಆದರೆ, ನಿಜವಾದ ಬರದ ಬೇಗೆಯಲ್ಲಿ ಬೇಯುತ್ತಿರುವ ಯಾದಗಿರಿ ಜಿಲ್ಲೆಯ ತಾಲೂಕುಗಳಿಗೆ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಕಣ್ಣು ಮುಚ್ಚಿ ಕುಳಿತಿರುವುದು ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಯಾದಗಿರಿ ಜಿಲ್ಲೆಯಲ್ಲಿ ಕೇವಲ ಶಹಾಪುರ ತಾಲ್ಲೂಕನ್ನು ಮಾತ್ರ ಬರಪೀಡಿತ ಎಂದು ಘೋಷಿಸಲಾಗಿದೆ. ಆದರೆ, ಬರದ ಬೇಗೆಯಲ್ಲಿ ಸಮಾನವಾಗಿ ಬೇಯುತ್ತಿರುವ ಸುರಪುರ, ಹುಣಸಗಿ, ಗುರುಮಿಠಕಲ್, ಯಾದಗಿರಿ ಹಾಗೂ ವಡಗೇರಾ ತಾಲ್ಲೂಕುಗಳನ್ನು ಬರಪೀಡಿತ ಪಟ್ಟಿಯಿಂದ ಸಂಪೂರ್ಣವಾಗಿ ಕೈಬಿಡಲಾಗಿದೆ.ಕಾಗದದ ಮೇಲಷ್ಟೇ ಮಳೆಯೇ? ವಾಸ್ತವ ಸ್ಥಿತಿ ಅತ್ಯಂತ ಭೀಕರ!

**ನೆಲಕಚ್ಚಿದ ಬೆಳೆಗಳು:** ಮುಂಗಾರು ಆರಂಭದಿಂದಲೂ ಈ ಭಾಗದಲ್ಲಿ ಸಮರ್ಪಕ ಮಳೆಯಾಗಿಲ್ಲ, ಬಿತ್ತಿದ ಹೆಸರು, ತೊಗರಿ ಸೇರಿದಂತೆ ಪ್ರಮುಖ ಬೆಳೆಗಳೆಲ್ಲವೂ ಮಳೆಯಿಲ್ಲದೆ ಕಣ್ಣೆದುರೇ ಒಣಗಿ ಬೂದಿಯಾಗುತ್ತಿದ್ದು, ರೈತರು ಕಣ್ಣೀರಲ್ಲಿ ಕೈ ತೊಳೆಯುತ್ತಿದ್ದಾರೆ.

**ಅಧಿಕಾರಿಗಳ ಎಸಿ ಕೊಠಡಿ ವರದಿ:** ನೆಲದ ಮೇಲಿನ ಕಟು ಸತ್ಯವನ್ನು ಅರಿಯದೇ, ಕೇವಲ ಸರ್ಕಾರಿ ಕಾಗದ-ಪತ್ರಗಳು, ತಪ್ಪು ಉಪಗ್ರಹ ವರದಿ ಹಾಗೂ ಅಧಿಕಾರಿಗಳ ಅಂಕಿ-ಅಂಶಗಳ ಆಧಾರದ ಮೇಲೆ ಈ ತಾಲೂಕುಗಳನ್ನು 'ಬರ ಮುಕ್ತ' ಎಂಬಂತೆ ಬಿಂಬಿಸಿರುವುದು ಈ ಭಾಗದ ಜನರ ಗಾಯದ ಮೇಲೆ ಬಿಸಿ ನೀರು ಚೆಲ್ಲಿದಂತಾಗಿದೆ.

ಬರಪೀಡಿತ ಪಟ್ಟಿಯಿಂದ ಹೊರಗುಳಿದಿದ್ದರಿಂದ ಈ ಐದೂ ತಾಲ್ಲೂಕುಗಳ ರೈತರಿಗೆ ಸರ್ಕಾರದ ಬೆಳೆ ನಷ್ಟ ಪರಿಹಾರ, ಕೃಷಿ ಸಾಲ ಮರುಪಾವತಿ ವಿನಾಯಿತಿ ಉದ್ಯೋಗ ಖಾತ್ರಿ ಯೋಜನೆಯ ಹೆಚ್ಚುವರಿ ದಿನಗಳು ಹಾಗೂ ಕುಡಿಯುವ ನೀರಿನ ವಿಶೇಷ ಅನುದಾನ ಸಿಗದಂತಾಗಿದೆ. ಶಹಾಪುರ ತಾಲ್ಲೂಕಿನ ರೈತರಿಗೆ ಸಿಗುವ ಸೌಲಭ್ಯಗಳು ಪಕ್ಕದ ತಾಲೂಕಿನ ರೈತರಿಗೆ ಸಿಗದಿರುವುದು ಸರ್ಕಾರದ ತಾರತಮ್ಯ ನೀತಿಗೆ ಹಿಡಿದ ಕನ್ನಡಿಯಾಗಿದೆ.

**ಸಪ್ಲಿಮೆಂಟರಿ ಪಟ್ಟಿ ಬಿಡುಗಡೆ:** ಬಿಟ್ಟುಹೋದ ಐದೂ ತಾಲ್ಲೂಕುಗಳನ್ನು ತಕ್ಷಣವೇ 'ತೀವ್ರ ಬರಪೀಡಿತ' ಪಟ್ಟಿಗೆ ಸೇರ್ಪಡೆಗೊಳಿಸಿ, ರೈತರಿಗೆ ಬೆಳೆ ಪರಿಹಾರ ಹಾಗೂ ಉದ್ಯೋಗ ಖಾತ್ರಿ ಕೆಲಸಗಳನ್ನು ಒದಗಿಸಬೇಕು.

ಸರ್ಕಾರ ತಕ್ಷಣವೇ ಎಚ್ಚೆತ್ತುಕೊಂಡು ಯಾದಗಿರಿ ಜಿಲ್ಲೆಯ ಈ ತಾಲ್ಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರಿಸದಿದ್ದರೆ, ಉಗ್ರ ಹೋರಾಟ ಹಾಗೂ 'ಜಿಲ್ಲಾ ಬಂದ್' ನಡೆಸುವುದು ಅನಿವಾರ್ಯ ಎಂಬ ಎಚ್ಚರಿಕೆಯನ್ನು ಕಷ್ಟದಲ್ಲಿರುವ ಅನ್ನದಾತರು ನೀಡಿದ್ದಾರೆ.

**ಸರ್ಕಾರಕ್ಕೆ ರೈತರ ಸ್ಪಷ್ಟ ಎಚ್ಚರಿಕೆ:**

ಪುನರ್ ಪರಿಶೀಲನೆ ಹಾಗೂ ಮರು ಸಮೀಕ್ಷೆ: ಸರ್ಕಾರ ತಕ್ಷಣವೇ ತಾಂತ್ರಿಕ ತಂಡಗಳನ್ನು ಕಳುಹಿಸಿ ಸುರಪುರ, ಹುಣಸಗಿ, ಗುರುಮಿಠಕಲ್, ಯಾದಗಿರಿ ಮತ್ತು ವಡಗೇರಾ ತಾಲೂಕುಗಳಲ್ಲಿ ಬೆಳೆ ಹಾನಿ ಜಂಟಿ ಸ್ಥಳ ಪರಿಶೀಲನೆ ನಡೆಸಿ ನೈಜ ವರದಿ ಪಡೆಯಬೇಕು.



ಸರ್ಕಾರಕ್ಕೆ ಕಣ್ಣಿದೆಯೋ ಅಥವಾ ಇಲ್ಲವೋ ಗೊತ್ತಾಗುತ್ತಿಲ್ಲ! ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕನ್ನು ಮಾತ್ರ ಬರಪೀಡಿತ ಎಂದು ಘೋಷಿಸಿ, ಉಳಿದ ಯಾದಗಿರಿ, ಸುರಪುರ, ಹುಣಸಗಿ, ಗುರುಮಿಠಕಲ್ ಮತ್ತು ವಡಗೇರಾ ತಾಲ್ಲೂಕುಗಳನ್ನು ಸಂಪೂರ್ಣವಾಗಿ ಬಿಟ್ಟುಹಾಕಲಾಗಿದೆ. ಒಂದೇ ಜಿಲ್ಲೆಯಲ್ಲಿದ್ದುಕೊಂಡು ಸರ್ಕಾರ ಇಂತಹ ತಾರತಮ್ಯ ನೀತಿ ಅನುಸರಿಸುತ್ತಿರುವುದು ಅತ್ಯಂತ ಖಂಡನೀಯ. ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಬಿಟ್ಟುಹೋದ ಐದೂ ತಾಲ್ಲೂಕುಗಳನ್ನು ತಕ್ಷಣವೇ 'ತೀವ್ರ ಬರಪೀಡಿತ' ಎಂದು ಘೋಷಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ, ಉಗ್ರ ಹೋರಾಟ ರೂಪಿಸಲಾಗುವುದು.
-ಎಚ್. ಆರ್. ಬಡಿಗೇರ್ (ರಾಜ್ಯ ಕಾರ್ಯದರ್ಶಿ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ )

## ಬಳ್ಳಾರಿಗೆ ಬಿಜೆಪಿ ಪಾದಯಾತ್ರೆ: ರೆಡ್ಡಿ- ಶ್ರೀರಾಮುಲು ಜೋಡಿಯಿಂದ ದಿಢೀರ್ ರೂಟ್ ಬದಲು!

• ಉದಯವಾಹಿನಿ, ಬಳ್ಳಾರಿ:

ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣ ಹಾಗೂ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ಖಂಡಿಸಿ ಬಿಜೆಪಿ ಹಮ್ಮಿಕೊಂಡಿರುವ ಬಳ್ಳಾರಿ ಪಾದಯಾತ್ರೆಯ ಮಾರ್ಗದಲ್ಲಿ ದಿಢೀರ್ ಬದಲಾವಣೆ ಮಾಡಲಾಗಿದೆ. ಈ ಹಿಂದೆ ರಾಜ್ಯ ನಾಯಕರು ಬಿಡುಗಡೆ ಮಾಡಿದ್ದ ರೂಟ್ ಮ್ಯಾಪ್ ಅನ್ನು ಬದಿಗೊತ್ತಿ, ಶಾಸಕ ಜಿ. ಜನಾರ್ದನ ರೆಡ್ಡಿ ಹಾಗೂ ಮಾಜಿ ಸಚಿವ ಬಿ. ಶ್ರೀರಾಮುಲು ತಮ್ಮ ರಾಜಕೀಯ ಅಸ್ತಿತ್ವ ಮತ್ತು ಭವಿಷ್ಯದ ದೃಷ್ಟಿಯಿಂದ ಪಾದಯಾತ್ರೆಯ ಹೊಸ ರೂಟ್ ಪ್ರಕಟಿಸಿದ್ದಾರೆ ಎಂಬ ಚರ್ಚೆ ಬಳ್ಳಾರಿ ರಾಜಕೀಯ ವಲಯದಲ್ಲಿ ತೀವ್ರಗೊಂಡಿದೆ.

ಬಿಜೆಪಿ ಸಿದ್ಧಪಡಿಸಿದ್ದ ಮೊದಲ ಯೋಜನೆಯ ಪ್ರಕಾರ, ಪಾದಯಾತ್ರೆಯು ರಾಯಚೂರಿನ ಗುರುಗುಂಟಾದಿಂದ ಆರಂಭವಾಗಿ ಸಿಂಧನೂರು ಹಾಗೂ ಸಿರುಗುಪ್ಪ ಮಾರ್ಗವಾಗಿ ಬಳ್ಳಾರಿ ನಗರವನ್ನು ಪ್ರವೇಶಿಸಬೇಕಿತ್ತು. ಆದರೆ ಈಗ ರಾಜ್ಯ ನಾಯಕರ ಮೇಲೆ ಒತ್ತಡ ಹೇರಿ ಮಾರ್ಗ ಬದಲಾವಣೆ ಮಾಡಲಾಗಿದ್ದು, ಸಿರುಗುಪ್ಪ ಬದಲಾಗಿ ಕಾರಟಗಿ, ಗಂಗಾವತಿ, ಕಂಪ್ಲಿ ಮತ್ತು ಸಂಡೂರು ಮಾರ್ಗವಾಗಿ ಬಳ್ಳಾರಿಯನ್ನು ಪ್ರವೇಶಿಸಲಾಗುವುದು ಎಂದು ಸ್ವತಃ ಶಾಸಕ ಜನಾರ್ದನ ರೆಡ್ಡಿ ಬಹಿರಂಗಪಡಿಸಿದ್ದಾರೆ.


ಉದಯವಾಹಿನಿ ಚಿತ್ರ

ಪಾದಯಾತ್ರೆ, ಸಾಗಲಿರುವ ಗಂಗಾವತಿಯು ಜನಾರ್ದನ ರೆಡ್ಡಿ ಅವರ ಹಾಲಿ ವಿಧಾನಸಭಾ ಕ್ಷೇತ್ರವಾಗಿದ್ದರೆ, ಕಂಪ್ಲಿ ಕ್ಷೇತ್ರವನ್ನು ಬಿ. ಶ್ರೀರಾಮುಲು ತಮ್ಮ ಮುಂದಿನ ರಾಜಕೀಯ ಭದ್ರಕೋಟೆಯನ್ನಾಗಿ ಮಾಡಿಕೊಳ್ಳಲು ಕಣ್ಣಿಟ್ಟಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು, ಸಚಿವ ನಾಗೇಂದ್ರ ಅವರ ವಿರುದ್ಧದ ಹೋರಾಟವನ್ನೇ ಪ್ರಮುಖ ಅಸ್ತ್ರವನ್ನಾಗಿಸಿಕೊಂಡು ಬಳ್ಳಾರಿ, ಕೊಪ್ಪಳ ಹಾಗೂ ವಿಜಯನಗರ ಭಾಗದಲ್ಲಿ ಪಕ್ಷ ಸಂಘಟನೆ ಮತ್ತು ತಮ್ಮ ವೈಯಕ್ತಿಕ ಪ್ರಭಾವವನ್ನು ಮರಳಿ ಪಡೆಯಲು ರೆಡ್ಡಿ-ರಾಮುಲು ಜೋಡಿ ಈ ತಂತ್ರ ರೂಪಿಸಿದೆ ಎನ್ನಲಾಗುತ್ತಿದೆ.

## ಧರ್ಮಸ್ಥಳ-ಕಲ್ಮಂಜ-ಉಜಿರೆ ಬಸ್‌ಗೆ ಬೇಡಿಕೆ: ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಅನುಕೂಲ

• ಉದಯವಾಹಿನಿ, ಬೆಳ್ತಂಗಡಿ:

ಧರ್ಮಸ್ಥಳದಿಂದ ಕಲ್ಮಂಜ ಮೂಲಕ ಉಜಿರೆಗೆ ಬಸ್ ಸೌಲಭ್ಯ ಕಲ್ಪಿಸಿದರೆ ವಿದ್ಯಾರ್ಥಿಗಳ ಸಹಿತ ಈ ಭಾಗದ ಅನೇಕ ನಾಗರಿಕರಿಗೆ ಅನುಕೂಲವಾಗಲಿದೆ. ಧರ್ಮಸ್ಥಳದಿಂದ ಕಲ್ಮಂಜದ ಕೂಟದ ಕಲ್ಲುತನಕ ಬೆಳಗ್ಗೆ ಹಾಗೂ ಸಂಜೆ ಶಾಲಾ ಮಕ್ಕಳ ಅನುಕೂಲಕ್ಕಾಗಿ ಒಂದು ಕೆಎಸ್ಆರ್‌ಟಿಸಿ ಬಸ್ ಶಾಲಾ ದಿನಗಳಲ್ಲಿ ಓಡಾಟ ನಡೆಸುತ್ತದೆ. ಈ ಬಸ್ ಧರ್ಮಸ್ಥಳಕ್ಕೆ ಹೋಗುವವರಿಗೆ ಮಾತ್ರ ಅನುಕೂಲ ಕಲ್ಪಿಸುತ್ತದೆ.

ಈ ಮಾರ್ಗದಲ್ಲಿ ಧರ್ಮಸ್ಥಳ-ಕಲ್ಮಂಜ-ಮುಂಡಾಜೆ ಮೂಲಕ ಬಸ್ ಓಡಾಟದ ಬೇಡಿಕೆ ಅನೇಕ ವರ್ಷಗಳಿಂದ ಇದೆ. ಈ ರೂಟ್‌ನಲ್ಲಿ ಬಸ್ ಓಡಾಡಿದರೆ ಮುಂಡಾಜೆ, ಸೋಮಂತಡ್ಕ ಮೊದಲಾದ ಕಡೆ ಹೋಗುವ ಶಾಲಾ ಮಕ್ಕಳು, ಸಾರ್ವಜನಿಕರಿಗೆ ಅನುಕೂಲವಾಗಲಿದೆ. ಮುಂಡಾಜೆಯ ಸೋಮಂತಡ್ಕದ ಶೈಕ್ಷಣಿಕ ಸಂಸ್ಥೆಗಳಿಗೆ ಹೋಗುವ ವಿದ್ಯಾರ್ಥಿಗಳಿಗೂ ಈ ಸೇವೆ ಅನುಕೂಲವಾಗಲಿದೆ.

ಮುಂಡಾಜೆ, ಸೋಮಂತಡ್ಕದ ಜನರು ನೆರಿಯ, ಚಾರ್ಮಾಡಿ, ದಿಡುಪೆ, ಗಂಡಿಬಾಗಿಲು, ಆಲಂತಡ್ಕ, ದೇವಗಿರಿ ಮೊದಲಾದ ಕಡೆಗಳಿಂದ ಬರುವ ಬಸ್‌ಗಳಲ್ಲಿ ಪ್ರಯಾಣಿಸಬೇಕು. ಈ ರೂಟ್‌ನಲ್ಲಿ ಬಸ್ ಸಂಚರಿಸಿದರೆ ಅದು ಇತರ ಬಸ್‌ಗಳಲ್ಲಿ ಉಂಟಾಗುವ ಪ್ರಯಾಣಿಕರ ಒತ್ತಡ ತಪ್ಪಿಸಲಿದೆ. ಈಗ ಕೂಟದಕಲ್ಲಿನವರೆಗೆ


ಉದಯವಾಹಿನಿ ಚಿತ್ರ

ಸಂಚರಿಸುವ ಬಸ್ಸನ್ನು ವಿಸ್ತರಿಸಿದರೂ ಅನುಕೂಲವಾಗಲಿದೆ.

**ಸ್ವಂತ, ಬಾಡಿಗೆ ವಾಹನಗಳೇ ಆಸರೆ:** ಕಲ್ಮಂಜ, ಮುಂಡಾಜೆ ಗ್ರಾಪಂ ವ್ಯಾಪ್ತಿಯ ಒಜಿರಬೈಲು, ಸಿದ್ದಬೈಲು, ಪರಾರಿ, ಆನಂಗಳ್ಳಿ, ಪಿಲತ್ತಡ್ಕ, ಕೊಂಬಿನಡ್ಕ ಮತ್ತಿತರ ಪ್ರದೇಶಗಳ ಜನರಿಗೆ ಸ್ವಂತ ಅಥವಾ ಬಾಡಿಗೆ ವಾಹನಗಳೇ ಆಸರೆ. ಈ ರಸ್ತೆಯಲ್ಲಿ ಆಟೋರಿಕ್ಷಾ, ಜೀಪು ಇತ್ಯಾದಿ ಸರ್ವಿಸ್ ವಾಹನಗಳ ಸೇವೆ ಇಲ್ಲ. ಇಲ್ಲಿನ ಜನರು ಪೇಟೆಗಳಿಗೆ ಹೋಗಬೇಕಾದರೆ ಸ್ವಂತ ವಾಹನ ಅಥವಾ ಬಾಡಿಗೆ ವಾಹನಗಳಲ್ಲಿ ತೆರಳಬೇಕು. ಈ ಪ್ರದೇಶದಲ್ಲಿ ಬಸ್ ಓಡಾಡಿದರೆ ಇಲ್ಲಿನ ಜನರ ಬೇಡಿಕೆ ಈಡೇರಲಿದೆ.

## ವಿವಿ ಸಾಗರದ ವಿಚಾರಕ್ಕೆ ಬಂದರೆ ಎಚ್ಚರ ಎಂದು ಬಿಜೆಪಿ ಎಚ್ಚರಿಕೆ

• ಉದಯವಾಹಿನಿ ಹಿರಿಯೂರು:

'ಶಾಸಕ ಟಿ.ಬಿ. ಜಯಚಂದ್ರ ಅವರು ತಮ್ಮ ಕ್ಷೇತ್ರಕ್ಕೆ ನೀರು ತರಲೇಬೇಕೆಂಬ ಬದ್ಧತೆ ಹೊಂದಿದ್ದರೆ, ಕಣ್ಣನ್ನು ಹೇಮಾವತಿ, ಎತ್ತಿನಹೊಳೆ ಕಡೆಗೆ ಬಿಡುವುದು ಒಳಿತು. ವಿವಿ ಸಾಗರದ ವಿಚಾರಕ್ಕೆ ಬಂದರೆ ರಾಜಕೀಯವನ್ನು ಬದಿಗಿಟ್ಟು ರೈತರೊಂದಿಗೆ ಉಗ್ರ ಹೋರಾಟ ನಡೆಸುತ್ತೇವೆ' ಎಂದು ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಕೆ. ಅಭಿನಂದನ್ ಎಚ್ಚರಿಸಿದರು. ನಗರದ ಬಿಜೆಪಿ ಕಚೇರಿಯಲ್ಲಿ ಜಯಚಂದ್ರ ಹೇಳಿಕೆ ಖಂಡಿಸಿ ಹಮ್ಮಿಕೊಂಡಿದ್ದ ಪಕ್ಷದ ರೈತ ಮುಖಂಡರ ಸಭೆಯಲ್ಲಿ ಮಾತನಾಡಿದರು.

ಶಿರಾ ತಾಲ್ಲೂಕಿಗೆ ನೀರು ಕೊಡಲೇಬೇಕೆಂಬ ಉದ್ದೇಶವಿದ್ದರೆ, ನಿಮ್ಮದೇ ಸರ್ಕಾರದ ಮೂಲಕ ವಿವಿ ಸಾಗರಕ್ಕೆ 10 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿಸಿ, ಶಿರಾಕ್ಕೆ ಒಯ್ಯುವುದಾದರೆ ನಮ್ಮ ಅಭ್ಯಂತರವಿಲ್ಲ. ಅದರ ಬದಲು ಇರುವ ನೀರಿಗೆ ಕನ್ನ ಹಾಕಲು ಬಂದರೆ ತೀವ್ರ ವಿರೋಧ ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಸಿದರು. 'ನಗರದ ತಾಲ್ಲೂಕು ಕಚೇರಿ ಆವರಣದಲ್ಲಿ ರೈತರು 543 ದಿನ ನಡೆಸಿದ ಹೋರಾಟದ ಫಲವಾಗಿ ಭದ್ರಾ ಮೇಲ್ದಂಡೆ ಯೋಜನೆ ಜಾರಿಯಾಗಿದೆ. ಜಲಾಶಯದಿಂದ ವಾರ್ಷಿಕ 10 ಟಿಎಂಸಿ ಅಡಿ ನೀರಿಗೆ ಬೇಡಿಕೆ ಇದ್ದು, ಕಾಂಗ್ರೆಸ್ ಸರ್ಕಾರ ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಕೇವಲ 2 ಟಿಎಂಸಿ ಅಡಿ ನೀರು ಮೀಸಲಿಡುವ ಮೂಲಕ ಅನ್ಯಾಯ ಮಾಡಿದ್ದು, ಮತ್ತೊಮ್ಮೆ ಅನ್ಯಾಯ ಮಾಡಲು ಮುಂದಾದರೆ ರೈತರೊಂದಿಗೆ ಹೋರಾಟ ನಡೆಸುತ್ತೇವೆ' ಎಂದು ಮುಖಂಡ ಎಂ.ಎಸ್. ರಾಘವೇಂದ್ರ ತಿಳಿಸಿದರು.

## ಹಂದಿಗಳನ್ನು ಬೀದಿಗೆ ಬಿಡದಂತೆ ಮಹಾನಗರ ಪಾಲಿಕೆ ಎಚ್ಚರಿಕೆ

• ಉದಯವಾಹಿನಿ ದಾವಣಗೆರೆ:

ಬೀಡಾಡಿ ಹಂದಿಗಳನ್ನು ಮಾಲೀಕರು ಸ್ವಯಂಪ್ರೇರಿತವಾಗಿ ಹಿಡಿದು ಸಾಕಾಣಿಕೆಗೆ ವ್ಯವಸ್ಥೆ ಮಾಡಿಕೊಳ್ಳಲು ಮಹಾನಗರ ಪಾಲಿಕೆ ಆ.31ರವರೆಗೆ ಗಡುವು ನೀಡಿದೆ. ಆ ಬಳಿಕವೂ ಬೀದಿಗೆ ಬರುವ ಹಂದಿಗಳನ್ನು ಸೆರೆಹಿಡಿದು ಬೇರೆಡೆ ಸ್ಥಳಾಂತರಿಸುವ ಎಚ್ಚರಿಕೆ ನೀಡಿದೆ.

ಇಲ್ಲಿನ ಮಹಾನಗರ ಪಾಲಿಕೆಯಲ್ಲಿ ನಡೆದ ಹಂದಿ ಮಾಲೀಕರ ಸಭೆಯಲ್ಲಿ ಆಯುಕ್ತ ಎನ್. ಮಹಾಂತೇಶ್ ಈ ಬಗ್ಗೆ ಸೂಚನೆ ನೀಡಿದರು. ಬೀಡಾಡಿ ಹಂದಿಗಳು ಬೀದಿಗೆ ಬರುವುದನ್ನು ತಡೆಯುವ ನಿಟ್ಟಿನಲ್ಲಿ ಅವರು 2ನೇ ಸಭೆ ನಡೆಸಿದರು. 'ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀಡಾಡಿ ಹಂದಿಗಳ ಹಾವಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ದೂರುಗಳು ಬರುತ್ತಿವೆ. ಮೊಬೈಲ್‌ನಲ್ಲಿ ಚಿತ್ರಗಳನ್ನು ಸೆರೆಹಿಡಿದು ಅಹವಾಲುಗಳನ್ನು ಸಲ್ಲಿಸುತ್ತಿದ್ದಾರೆ.

ಸಿದ್ಧವೀರಪ್ಪ ಬಡಾವಣೆ, ಆಂಜನೇಯ ಬಡಾವಣೆ, ಚಾಮರಾಜಪೇಟೆ ವೃತ್ತ ಸೇರಿ ಹಲವೆಡೆ ಹಂದಿಗಳ ಹಿಂಡು ಕಾಣಿಸಿಕೊಳ್ಳುತ್ತಿವೆ' ಎಂದು ಮಹಾಂತೇಶ್ ತಿಳಿಸಿದ್ದಾರೆ. ''ಬೀಡಾಡಿ ಹಂದಿಗಳು ನಗರದಲ್ಲಿ ಅನೈರ್ಮಲ್ಯ ಸೃಷ್ಟಿಸುತ್ತಿವೆ.


ಉದಯವಾಹಿನಿ ಚಿತ್ರ

ವಾಹನ ಸಂಚಾರಕ್ಕೂ ಅಡಚಣೆಯುಂಟು ಮಾಡುತ್ತಿವೆ. ಹಂದಿಗಳಿಂದ ಅಪಘಾತ ಸಂಭವಿಸಿದರೆ ಯಾರು ಹೊಣೆ? ಹಲವು ಬಡಾವಣೆಗಳಲ್ಲಿ ಮಕ್ಕಳಿಗೆ ತೊಂದರೆ ಮಾಡಿದ ನಿದರ್ಶನಗಳಿವೆ. ಸಾಂಕ್ರಾಮಿಕ ರೋಗಗಳು ಹರಡುವ ಆತಂಕವೂ ಇದೆ' ಎಂದರು.

'ಹಂದಿ ಸಾಕಾಣಿಕೆ ಒಂದು ವೃತ್ತಿ. ಇದಕ್ಕೆ ಅಡ್ಡಿಪಡಿಸುವುದು ಪಾಲಿಕೆಯ ಉದ್ದೇಶವಲ್ಲ. ನಗರದ ಹೊರಭಾಗದ ಜಮೀನುಗಳಲ್ಲಿ ಶೆಡ್‌ಗಳನ್ನು ನಿರ್ಮಿಸಿಕೊಂಡು ಸಾಕಾಣಿಕೆ ಮಾಡಲು ಯಾರ ತಕರಾರೂ ಇಲ್ಲ. ಪಾಲಿಕೆಯ ವ್ಯಾಪ್ತಿಯಲ್ಲಿ ಅನುಮತಿ ಇಲ್ಲದೇ ಹಂದಿ ಸಾಕಾಣಿಕೆ ಮಾಡುವಂತಿಲ್ಲ. ಹಂದಿಗಳನ್ನು ಬೀದಿಗೆ ಬಿಡುವುದನ್ನು ಸಹಿಸಿಕೊಳ್ಳುವುದಿಲ್ಲ' ಎಂದು ಎಚ್ಚರಿಕೆ ನೀಡಿದರು.

'ಪ್ರತಿ ಹಂದಿ ಹತ್ತಾರು ಮರಿಗಳಿಗೆ ಜನ್ಮ ನೀಡುತ್ತದೆ. ಇದರಿಂದ ಹಂದಿ ಸಂತತಿ ಸುಲಭವಾಗಿ ಹೆಚ್ಚಳವಾಗುತ್ತದೆ. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಹಂದಿಗಳು ಹಾಗೂ ಸಾಕಾಣಿಕೆದಾರರ ನಿಖರ ಮಾಹಿತಿ ಸಂಗ್ರಹಿಸಲು ಆಯುಕ್ತ ಮಹಾಂತೇಶ್ ಅವರು ಆರೋಗ್ಯ ನಿರೀಕ್ಷಕರಿಗೆ ಸೂಚನೆ ನೀಡಿದರು. 'ಕೆಲ ಬಡಾವಣೆಗಳಲ್ಲಿ ಹೆಚ್ಚು ಹಂದಿಗಳಿವೆ. ಆಯಾ ವಾರ್ಡ್ ಆರೋಗ್ಯ ನಿರೀಕ್ಷಕರು ಹಂದಿಗಳ ಸಂಖ್ಯೆಯ ಬಗ್ಗೆ ಮಾಹಿತಿ ಕಲೆಹಾಕಬೇಕು. ಹಂದಿಗಳ ಹಾವಳಿಯನ್ನು ನಿಯಂತ್ರಿಸಲು ಇದರಿಂದ ಅನುಕೂಲವಾಗಲಿದೆ' ಎಂದು ಹೇಳಿದರು.


ಹೊಟ್ಟೆಪಾಡಿಗೆ ನಾಲ್ಕಾರು ಹಂದಿಗಳನ್ನು ಸಾಕಿದ್ದೇವೆ. ಬೀದಿಗೆ ಬಿಡದೇ ಮನೆ ಸಮೀಪ ಕಟ್ಟಿಹಾಕಿದ್ದೇವೆ. ಬೀಡಾಡಿ ಹಂದಿಗಳ ನೆಪದಲ್ಲಿ ನಮಗೂ ತೊಂದರೆ ನೀಡಬೇಡಿ.
-ಫಕೀರಪ್ಪ, ಹಂದಿ ಸಾಕಾಣಿಕೆದಾರ

## ಸಹೋದರತೆ, ಭ್ರಾತೃತ್ವದ ಸಂಕೇತದ ರಕ್ಷಾ ಬಂಧನ

• ಉದಯವಾಹಿನಿ ಭಾಲ್ಕಿ:

ಸಹೋದರತೆ, ಭ್ರಾತೃತ್ವದ ಸಂಕೇತದ ರಕ್ಷಾ ಬಂಧನ ಹಬ್ಬಕ್ಕೆ ಒಂದೇ ದಿನ ಬಾಕಿ ಇದ್ದು, ಮಾರುಕಟ್ಟೆಯಲ್ಲಿ ಬಗೆ ಬಗೆಯ ರಾಖಿಗಳು ರಾರಾಜಿಸುತ್ತಿವೆ. ಹೆಣ್ಣು ಮಕ್ಕಳು ತಮ್ಮ ಪ್ರೀತಿಯ ಸಹೋದರರಿಗೆ ಕಟ್ಟಲು ರಾಖಿ ಖರೀದಿ ಜೋರು ಮಾಡುತ್ತಿದ್ದಾರೆ. ರಕ್ಷಾ ಬಂಧನ ಹಬ್ಬದ ಮೆರುಗು ಹೆಚ್ಚಿಸಲು ಮಾರುಕಟ್ಟೆಯಲ್ಲಿ ವಿವಿಧ ವಿನ್ಯಾಸದಲ್ಲಿರುವ ಚಿತ್ತಾಕರ್ಷಕ, ಫ್ಯಾನ್ಸಿ ರಾಖಿಗಳು ಮಹಿಳೆಯರನ್ನು ಸೆಳೆಯುತ್ತಿವೆ. ನಗರದ ಮಹಾತ್ಮಗಾಂಧಿ ವೃತ್ತದ ಸುತ್ತಮುತ್ತ ಸೇರಿದಂತೆ ಬಹುತೇಕ ಜನರಲ್ ಸ್ಟೋರ್, ಕಿರಾಣಿ ಅಂಗಡಿಗಳು ಮತ್ತು ತಳ್ಳುಬಂಡಿಗಳಲ್ಲಿ ರಾಖಿ ಮಾರಾಟ ಭರ್ಜರಿಯಾಗಿ ನಡೆಯುತ್ತಿದೆ.

ಸದ್ಯ ಮಾರುಕಟ್ಟೆ ಪ್ರದೇಶದಲ್ಲಿ ಕಾಲಿಟ್ಟರೆ ಸಾಕು ನೂರಾರು ಬಗೆಯ ರಾಖಿಗಳು ನೋಡುಗರ ಕಣ್ಮನ ಸೆಳೆಯುತ್ತಿವೆ. ಕಾಲಕ್ಕೆ ತಕ್ಕಂತೆ ರಾಖಿಗಳ ವಿನ್ಯಾಸವೂ ಬದಲಾಗಿದೆ. ಅಂಗಡಿಗಳಲ್ಲಿ ವಿವಿಧ ಬಣ್ಣಗಳ ನೂಲಿನ, ರುದ್ರಾಕ್ಷಿ, ಮುತ್ತಿನಹಾರ, ಶ್ರೀ, ಶಿವ, ಗಣೇಶ, ರಾಧಾ-ಕೃಷ್ಣ, ಜೈ ಶ್ರೀ ರಾಮ್ ಎಂದು ಬರೆದಿರುವ ತನಿಷ್ಕ ಸ್ಟೋನ್ ಇರುವ, ಛೋಟಾ ಭೀಮ್,


ಉದಯವಾಹಿನಿ ಚಿತ್ರ

ರೇಷ್ಮೆದಾರ, ಮುತ್ತಿನ ರಾಖಿ, ಕಸೂತಿ, ಮಣಿ ಜೋಡಣೆ, ಕ್ರಿಸ್ಟಲ್, ಸ್ಟೋನ್ಸ್ ಸೇರಿದಂತೆ ವಿವಿಧ ಬಗೆಯ ರಾಖಿಗಳು ಲಭ್ಯ ಇವೆ. 'ನಮ್ಮ ಅಂಗಡಿಗಳಲ್ಲಿ ಸುಮಾರು 5 ಯಿಂದ ಪ್ರಾರಂಭವಾಗಿ 500 ವರೆಗಿನ ಬಗೆಬಗೆಯ ರಾಖಿಗಳು ಲಭ್ಯವಿದೆ. ನೂಲು, ತನಿಷ್ಕ, ಜೈ ಶ್ರೀ ರಾಮ್ ಮತ್ತು ಶಿವನ ಚಿತ್ರವಿರುವ ರಾಖಿಗಳಿಗೆ ಹೆಚ್ಚಿನ ಬೇಡಿಕೆ ಇದೆ. ಗುರುವಾರ ಹೆಚ್ಚಿನ ರಾಖಿಗಳ ಮಾರಾಟದ ನಿರೀಕ್ಷೆ ಇದೆ. ಮಹಿಳೆಯರು ತಮ್ಮ ಸಹೋದರರಿಗಾಗಿ ರಾಖಿಗಳನ್ನು ಆಯ್ಕೆ ಮಾಡಿಕೊಂಡು ಖರೀದಿಸುತ್ತಿದ್ದಾರೆ' ಎಂದು ಬಾಲಾಜಿ ವಾಕುಡೆ, ಆದರ್ಶ ತಪಸ್ಯಾಳೆ ಸೇರಿದಂತೆ ವಿವಿಧ ಅಂಗಡಿಗಳ ಮಾಲೀಕರು ತಿಳಿಸಿದರು.

ಚಿತ್ತಾಕರ್ಷಕ ರಾಖಿಗಳು ಹೆಣ್ಣುಮಕ್ಕಳಿಂದ ರಾಖಿ ಖರೀದಿ

## ನೀರು ನಾಯಿಗಳು ಅಪರೂಪವಾಯಿತೇಕೆ?

• ಉದಯವಾಹಿನಿ ಉಡುಪಿ:

ಶುದ್ಧಜಲದಲ್ಲಿ ವಾಸಿಸುವ ನೀರುನಾಯಿಗಳು (ಇಂಡಿಯನ್ ಒಟ್ಟರ್) ಇಂದು ಕರಾವಳಿ ಜಿಲ್ಲೆಯಾದ ಉಡುಪಿಯಲ್ಲೂ ಕಾಣಸಿಗುವುದೇ ಅಪರೂಪವಾಗಿವೆ.ನದಿಗಳು, ಕೆರೆಗಳು ಮತ್ತು ಚೌಗು ಪ್ರದೇಶಗಳ ದಂಡೆಯಲ್ಲಿರುವ ಕಲ್ಲುಗಳ ಪೊಟರೆಗಳಲ್ಲಿ ಹಾಗೂ ಬಂಡೆಗಳ ಸಂಧಿಗಳಲ್ಲಿ ವಾಸಿಸುವ ನೀರು ನಾಯಿಗಳು ಹಿಂದೆ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಿದ್ದವು. ಆದರೆ ಈಗ ಕಣ್ಣಿಗೆ ಬೀಳುವುದೇ ಕಡಿಮೆ ಎನ್ನುತ್ತಾರೆ ಗ್ರಾಮೀಣರು.

ಕುಂದಾಪುರ ತಾಲ್ಲೂಕು ವ್ಯಾಪ್ತಿಯ ವಾರಾಹಿ ನದಿ, ಕೊಲ್ಲೂರಿನ ಆನೆಝರಿ, ಕೋಡಿ, ಆನಗಳ್ಳಿ ಮೊದಲಾದೆಡೆಯ ಆವಾಸ ಸ್ಥಾನಗಳಲ್ಲಷ್ಟೇ ಅವುಗಳು ಇತ್ತೀಚೆಗೆ ಕಂಡು ಬರುತ್ತಿವೆಯಾದರೂ ಅವುಗಳು ಸಂಖ್ಯೆ ಕಡಿಮೆಯಾಗಿವೆ ಎನ್ನುತ್ತಾರೆ ಪರಿಸರ ಪ್ರೇಮಿಗಳು. ಆವಾಸಸ್ಥಾನಕ್ಕೆ ಧಕ್ಕೆಯಾಗುತ್ತಿರುವುದರಿಂದ ಅವುಗಳ ಸಂತತಿ ಕ್ಷೀಣಿಸುತ್ತಿದೆಯಾ ಎಂಬ ಆತಂಕವು ಜಿಲ್ಲೆಯ ಪರಿಸರಪ್ರಿಯರನ್ನು ಕಾಡುತ್ತಿದೆ. ನೀರುನಾಯಿಗಳ ಸಂತತಿ ಕ್ಷೀಣವಾಗುತ್ತಿದೆಯಾ ಎಂಬುದರ ಬಗ್ಗೆ ಜಿಲ್ಲೆಯಲ್ಲಿ ಇದುವರೆಗೆ ಯಾವುದೇ ಅಧ್ಯಯನಗಳು ನಡೆದಿಲ್ಲ. ಇತ್ತೀಚೆಗಿನ ವರ್ಷಗಳಲ್ಲಿ ಅವುಗಳು ಕಾಣಸಿಗುವುದು ಅಪರೂಪವಾಗಿರುವುದರಿಂದ


ಉದಯವಾಹಿನಿ ಚಿತ್ರ

ಇಂತಹ ಅಧ್ಯಯನ ನಡೆಯಬೇಕಿದೆ ಎನ್ನುತ್ತಾರೆ ಪರಿಸರಪ್ರೇಮಿಗಳು. ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹಾಗೂ ತುಂಗಭದ್ರಾ ನದಿ, ಜಲಾಶಯ, ಹಿನ್ನೀರು ಪ್ರದೇಶಗಳಲ್ಲಿ ನೀರುನಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣ ಸಿಗುತ್ತವೆ. ಆ ಕಾರಣಕ್ಕೆ ಆ ನದಿ ಪ್ರದೇಶವನ್ನು ಸರ್ಕಾರವು ತುಂಗಭದ್ರಾ ನೀರು ನಾಯಿ ಸಂರಕ್ಷಿತ ಮೀಸಲು ಪ್ರದೇಶ ಎಂದು ಘೋಷಿಸಿದೆ. ಅದೇ ರೀತಿ ಜಿಲ್ಲೆಯಲ್ಲೂ ನೀರುನಾಯಿಗಳು ಹೆಚ್ಚಾಗಿ ಕಂಡು ಬರುವ ಪ್ರದೇಶವನ್ನು ಅದರ ಸಂರಕ್ಷಿತ ಪ್ರದೇಶವಾಗಿ ಘೋಷಿಸಬೇಕು ಎನ್ನುವ ಬೇಡಿಯನ್ನೂ ಮುಂದಿಡುತ್ತಾರೆ.

# ದೇಶಾದ್ಯಂತ 41 ಅಗತ್ಯ ವಸ್ತುಗಳ ಬೆಲೆ ಸ್ಥಿರತೆಗೆ ಮುಂದಾದ ಕೇಂದ್ರ

## 579 ಕೇಂದ್ರಗಳಲ್ಲಿ ದೈನಂದಿನ ಮೇಲ್ವಿಚಾರಣೆಗೆ ಸಚಿವ ಪ್ರಲ್ಹಾದ್ ಜೋಶಿ ನಿರ್ದೇಶನ

• ಉದಯವಾಹಿನಿ ಹುಬ್ಬಳ್ಳಿ:

ಶ್ರಾವಣ ಬಂತೆಂದರೆ ಹಬ್ಬ ಹರಿದಿನ, ಧಾರ್ಮಿಕ ಮಹೋತ್ಸವ ಹಾಗೂ ವಿವಾಹ ಸಮಾರಂಭಗಳ ಸುಗ್ಗಿ ಶುರುವಾದಂತೆ. ಈ ಹಂಗಾಮಿನಲ್ಲಿ ಸಹಜವಾಗಿಯೇ ಅಗತ್ಯ ವಸ್ತುಗಳ ಬೆಲೆ ಏರಿಕೆ ಕಂಡುಬರುತ್ತದೆ.

1 : ಬೆಲೆ ನಿಯಂತ್ರಣಕ್ಕೆ ಮುಂದಾದ ಕೇಂದ್ರ ಸರ್ಕಾರ,
2 : ದೇಶದ 5 ಪ್ರಮುಖ ನಗರಗಳಿಗೆ ಕಾಂದಾ ಎಕ್ಸ್‌ಪ್ರೆಸ್
3 : ನಾಸಿಕ್‌ನಿಂದ ರೈಲು ಮೂಲಕ ಈರುಳ್ಳಿ ಪೂರೈಕೆಗೆ ಚಾಲನೆ

ಆದರೆ, ಕೇಂದ್ರ ಸರ್ಕಾರ ಈ ಬಾರಿ ಹಬ್ಬಗಳ ಋತುವಿನ ಆರಂಭದಿಂದಲೇ ಬೆಲೆ ಸ್ಥಿರೀಕರಣಕ್ಕೆ ಆದ್ಯತೆ ನೀಡಿದೆ.

ನಾಗರ ಪಂಚಮಿ, ವರಮಹಾಲಕ್ಷ್ಮಿ ಹಬ್ಬ ಹಾಗೂ ಗಣೇಶ ಚತುರ್ಥಿ, ದಸರಾ, ದೀಪಾವಳಿಯಂತಹ ಹಬ್ಬಗಳ ಋತುವಿನಲ್ಲೂ ಹಾಲು, ಬೇಳೆಕಾಳು ಮತ್ತು ತರಕಾರಿ ಸೇರಿದಂತೆ 41 ಬಗೆಯ ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಣ ಮತ್ತು ಸ್ಥಿರವಾಗಿರಿಸಲು ಕೇಂದ್ರ


ಉದಯವಾಹಿನಿ ಚಿತ್ರ

ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಅವರ ಮುಂದಾಳತ್ವದಲ್ಲಿ ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ನಾಸಿಕ್‌ನಿಂದ ನವದೆಹಲಿಗೆ ಕಾಂದಾ ಎಕ್ಸ್‌ಪ್ರೆಸ್ ರೈಲು ಮೂಲಕ ಈರುಳ್ಳಿ ಸಾಗಣೆ ಆರಂಭಿಸಿದೆ.

**ಮೊಬೈಲ್ ವ್ಯಾನ್, ಮಳಿಗೆಗಳಲ್ಲಿ ಚಿಲ್ಲರೆ ಮಾರಾಟ ವ್ಯವಸ್ಥೆ:** ಮಾರುಕಟ್ಟೆಗಳಲ್ಲಿ ಬೇಡಿಕೆ ಆಧಾರದ ಮೇಲೆ ಬಫರ್ ಈರುಳ್ಳಿಯನ್ನು ಗ್ರಾಹಕ ಕೇಂದ್ರಗಳಿಗೆ ಸಕಾಲಿಕವಾಗಿ ಸಾಗಿಸಲು ಕ್ರಮ ಕೈಗೊಂಡಿರುವ ಕೇಂದ್ರ ಸರ್ಕಾರ, ಮತ್ತು ಕೇಂದ್ರೀಯ ಭಂಡಾರ್ ಮೂಲಕ ಒಟ್ಟಾರೆ 122 ಮಳಿಗೆಗಳಲ್ಲಿ ಹಾಗೂ 90 ಮೊಬೈಲ್ ವ್ಯಾನ್‌ಗಳಲ್ಲಿ ಈರುಳ್ಳಿ ಚಿಲ್ಲರೆ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಕಾಂದಾ ಎಕ್ಸ್‌ಪ್ರೆಸ್ ನಾಸಿಕ್‌ನಿಂದ ಅದಾಗಲೇ ದೆಹಲಿ ತಲುಪಿದ್ದರೆ, ಇತ್ತ ಚೆನ್ನೈ, ಕೋಲ್ಕತ್ತಾ, ಎರ್ನಾಕುಲಂ, ಗುವಾಹಟಿ, ವಾರಣಾಸಿ, ಲಕ್ನೋ, ಪಾಟ್ನಾ, ಚಂಡೀಗಢ, ಜಮ್ಮು ಮತ್ತು ಅಮೃತಸರಗಳಿಗೆ ರಸ್ತೆ ಸಾರಿಗೆ ಮೂಲಕ ಈರುಳ್ಳಿ ಸಾಗಿಸಲಾಗುತ್ತಿದೆ.ಅದರಂತೆ ದೇಶಾದ್ಯಂತ 579 ಕೇಂದ್ರಗಳಲ್ಲಿ ಗ್ರಾಹಕ ವ್ಯವಹಾರಗಳ ಇಲಾಖೆ ಒಟ್ಟು 41 ಬಗೆಯ ಅಗತ್ಯ ವಸ್ತುಗಳ ಪೂರೈಕೆ, ಬೇಡಿಕೆ, ಸರಬರಾಜು ಮತ್ತು ಬೆಲೆ ಏರಿಕೆ ಮೇಲೆ ಕಣ್ಣಿಟ್ಟಿದೆ. ನಿರಂತರವಾಗಿ ಮೇಲ್ವಿಚಾರಣೆ ನಡೆಸುತ್ತ ಬೆಲೆ ಸ್ಥಿರೀಕರಣಕ್ಕೆ ಆದ್ಯತೆ ನೀಡಿದೆ.

ಪ್ರಸ್ತುತ ಮಾರುಕಟ್ಟೆಯಲ್ಲಿ ಟೊಮೆಟೊ, ಆಲೂಗಡ್ಡೆ ಮತ್ತು ಕಡಲೆಬೇಳೆ ಬೆಲೆ ಕಳೆದ ವರ್ಷಕ್ಕೆ ಹೋಲಿಸಿದರೆ ಕಡಿಮೆಯಾಗಿದೆ. ತೊಗರಿ, ಕಡಲೆ, ಮಸೂರ್, ಉದ್ದು ಮತ್ತು ಹೆಸರುಕಾಳು ಸೇರಿದಂತೆ ಪ್ರಮುಖ ದ್ವಿದಳ ಧಾನ್ಯಗಳು ಹಾಗೂ ಟೊಮೆಟೊ, ಆಲೂಗಡ್ಡೆಯಂತಹ ಅಗತ್ಯ ತರಕಾರಿಗಳ ಬೆಲೆಗಳೂ ಸ್ಥಿರವಾಗಿದ್ದು, ಇವುಗಳ ಬೆಲೆ ಮೇಲೆಯೂ ಕೇಂದ್ರ ನಿಗಾ ವಹಿಸಿದೆ.

579 ಕೇಂದ್ರಗಳಲ್ಲಿ ದೈನಂದಿನ ಮೇಲ್ವಿಚಾರಣೆಗೆ ನಿರ್ದೇಶನ ಇನ್ನು ದೇಶೀಯ ಮಾರುಕಟ್ಟೆಗಳಲ್ಲಿ ಈರುಳ್ಳಿ, ಬೇಳೆಕಾಳು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರುಮುಖವಾಗುತ್ತಲೇ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರ ಸಚಿವ ಪ್ರಲಹಾದ ಜೋಶಿ ಅವರು ಮೇಲ್ವಿಚಾರಣೆಗೆ ನಿರ್ದೇಶನ ನೀಡಿದ್ದಾರೆ. -ಸಚಿವ ಪ್ರಲ್ಹಾದ ಜೋಶಿ


**ಎಲ್ಲಾ ರಾಜ್ಯಗಳಲ್ಲೂ ಬೆಲೆ ಏರಿಕೆ ಮೇಲೆ ನಿಗಾ**

ಕೇಂದ್ರ ಸರ್ಕಾರ, ಎಲ್ಲಾ ರಾಜ್ಯಗಳಲ್ಲೂ ಈರುಳ್ಳಿ ಬೆಲೆ, ಬೇಡಿಕೆ ಮತ್ತು ಲಭ್ಯತೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. ಸಾಕಷ್ಟು ಸರಬರಾಜು ಮಾಡುವ ಜತೆಗೆ ಅನಗತ್ಯ ಬೆಲೆ ಏರಿಕೆ ತಡೆಗೆ ಮಧ್ಯಸ್ಥಿಕೆ ವಹಿಸಿ ಗ್ರಾಹಕರ ಹಿತ ರಕ್ಷಣಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ಓಣಂ, ಗಣೇಶ ಚತುರ್ಥಿ, ದುರ್ಗಾ ಪೂಜೆ, ದಸರಾ, ದೀಪಾವಳಿ ಮತ್ತು ವಿವಾಹ ಋತು ಸೇರಿದಂತೆ ಹಬ್ಬದ ಋತುವಿನಲ್ಲಿ ಅನಗತ್ಯ ಬೆಲೆ ಏರಿಳಿತ ತಡೆಗಟ್ಟಲು ಬಫರ್ ಸ್ಟಾಕ್‌ನಿಂದ ಈರುಳ್ಳಿ ಪೂರೈಸುತ್ತಿದೆ.

## ಮಿನಿ ನ್ಯೂಸ್

### ಯಾರನ್ನ ಸೇರಿಸಬೇಕಿದ್ರು, ತೆಗೆಯಬೇಕಾದ್ರೂ ನನ್ನ ಬಳಿಯೇ ಬರಬೇಕು: ಮಲ್ಲಿಕಾರ್ಜುನ ಖರ್ಗೆ

• ಉದಯವಾಹಿನಿ ಕಲಬುರಗಿ:


ಉದಯವಾಹಿನಿ ಚಿತ್ರ

ಯಾವುದೇ ಫೈಲ್ ನನ್ನ ಬಳಿ ಬರದೇ ಹೋವುದಿಲ್ಲ. ಯಾರನ್ನೇ ಸೇರಿಸಬೇಕಿದ್ರೂ, ತೆಗೆಯಬೇಕಾದ್ರೂ ನನ್ನ ಬಳಿಯೇ ಬರಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.ಸಚಿವ ಸಂಪುಟ ಬದಲಾವಣೆ ವಿಚಾರವಾಗಿ ಸಿಎಂ ಡಿಕೆಶಿ ದೇಹಲಿ ಭೇಟಿ ಸಂಬಂಧ ಕಲಬುರಗಿ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು. ನಿಮಗೇನಾದ್ರೂ ಗೊತ್ತಿದ್ರೆ ಹೇಳಿ, ನನಗೇನು ಗೊತ್ತಿಲ್ಲ. ನಾನು ಕಲಬುರಗಿಯಲ್ಲಿ ಇದ್ದೇನೆ ಏನಾದ್ರು ಬರಬೇಕಾದ್ರೆ ನನ್ನ ಬಳಿಯೇ ಬರಬೇಕು ತಾನೆ ಎಂದರು. ಯಾವುದೇ ಫೈಲ್ ನನ್ನ ಬಳಿ ಬರದೇ ಹೋಗೋದಿಲ್ಲ. ಯಾರನ್ನೇ ಸೇರಿಸಬೇಕು, ಯಾರನ್ನ ತೆಗೆಯಬೇಕಾದ್ರೂ ನನ್ನ ಬಳಿಯೇ ಬರಬೇಕು. ಹಾಗೆ ನನ್ನ ಬಳಿ ಫೈಲ್ ಬಂದಾಗ ನಿಮಗೆ ತಿಳಿಸುತ್ತೇನೆ ಎಂದು ಹೇಳಿದರು.

ಇನ್ನೂ ನೇಪಾಳ ಪ್ರವಾಹದಲ್ಲಿ ಭಾರತೀಯರು ನಾಪತ್ತೆಯಾಗಿರುವ ಬಗ್ಗೆ ಮಾತನಾಡಿ, ನೇಪಾಳ ಪ್ರವಾಹದಲ್ಲಿ ಕರ್ನಾಟಕ ಮಾತ್ರವಲ್ಲ, ದೇಶದ ಸಾಕಷ್ಟು ಜನ ಸಿಲುಕಿದ್ದಾರೆ. ನೂರಾರು ಜನ ಕೊಚ್ಚಿಹೋಗಿದ್ದಾರೆ. ಅವರೆಲ್ಲರಿಗೂ ನಾನು ಶ್ರದ್ಧಾಂಜಲಿ ಅರ್ಪಿಸುತ್ತೇನೆ. ಜೊತೆಗೆ ಪ್ರಧಾನಿಗೆ ಪತ್ರ ಬರೆದಿದ್ದೇನೆ. ಕರ್ನಾಟಕ ಅಷ್ಟೇ ಅಲ್ಲಾ ದೇಶದ ಎಷ್ಟು ಜನ ಪ್ರಾಣ ಕಳೆದುಕೊಂಡಿದ್ದಾರೆ ಅವರಿಗೆ ಪರಹಾರ ಕೊಡಬೇಕು. ನೇಪಾಳದ ಜೊತೆಗೆ ನಿಲ್ಲುವಂತೆ ಕೂಡ ಪತ್ರ ಬರೆದಿದ್ದೇನೆ ಎಂದು ತಿಳಿಸಿದ್ದಾರೆ.

### ಈದ್ ಮೆರವಣಿಗೆಯಲ್ಲಿ ಹಾರಾಡಿದ ಪ್ಯಾಲೆಸ್ತೀನ್ ಧ್ವಜ ಪೊಲೀಸರಿಂದ ಧ್ವಜ ವಶಕ್ಕೆ

• ಉದಯವಾಹಿನಿ ಕಾರವಾರ:

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಪಟ್ಟಣದಲ್ಲಿ ಈದ್ ಮಿಲಾದ್ ಹಬ್ಬದ ಸಂಭ್ರಮದ ಮೆರವಣಿಗೆ ಸಾಗುತ್ತಿದ್ದ ವೇಳೆ ಕೆಲವರು ಪ್ಯಾಲೆಸ್ತೀನ್ ಧ್ವಜವನ್ನು ಪ್ರದರ್ಶಿಸಿದ ಘಟನೆ ನಡೆದಿದೆ.

ವಿಷಯ ತಿಳಿಯುತ್ತಿದ್ದಂತೆಯೇ ತಕ್ಷಣವೇ ಕಾರ್ಯಪ್ರವೃತ್ತರಾದ ಪೊಲೀಸರು, ಸ್ಥಳದಲ್ಲೇ ಧ್ವಜವನ್ನು ವಶಕ್ಕೆ ಪಡೆದು ಮುನ್ನೆಚ್ಚರಿಕೆ ನೀಡಿದ್ದಾರೆ. ಯಾವುದೇ ಗೊಂದಲ ಅಥವಾ ಅಹಿತಕರ ಘಟನೆಗಳಿಗೆ ಆಸ್ಪದ ನೀಡದೆ ಪರಿಸ್ಥಿತಿಯನ್ನು ತಿಳಿಗೊಳಿಸಿದ ಪೊಲೀಸರು, ಇಂತಹ ಧ್ವಜಗಳನ್ನು ಹಾರಿಸದಂತೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿ ಮೆರವಣಿಗೆ ಶಾಂತಿಯುತವಾಗಿ ಮುಂದುವರಿಯಲು ಅವಕಾಶ ಮಾಡಿಕೊಟ್ಟರು.

ಇನ್ನು ಇತ್ತ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಕುಡಚಿ ಪಟ್ಟಣದ ಹೊರವಲಯದಲ್ಲಿ ಇರಾನ್ ದೇಶದ ಧ್ವಜ ಹಾರಾಡಿದೆ. ಎರಡು ದಿನಗಳ ಹಿಂದೆ ನಡೆದ ಘಟನೆ, ತಡವಾಗಿ ಬೆಳಕಿಗೆ ಬಂದಿದೆ. ಧ್ವಜ ಹಾರಾಟದ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು ಪೊಲೀಸರು ಹಾಗೂ ಸ್ಥಳೀಯರು ಧ್ವಜ ತೆರವುಗೊಳಿಸಿದ್ದಾರೆ.

### ಕಂಬಳಕ್ಕೆ ಪ್ರೋತ್ಸಾಹ ಇಲ್ಲ, ಮೈಸೂರಿಗೆ 8 ಕೋಟಿ ಯಾಕೆ?

• ಉದಯವಾಹಿನಿ ಉಡುಪಿ:

'ಕಂಬಳಕ್ಕೆ ಎಲ್ಲಾ ಕಡೆ ಪ್ರೋತ್ಸಾಹ ಸಿಗಬೇಕು. ಉಡುಪಿ ಜಿಲ್ಲೆಯಲ್ಲಿ ಆಡಳಿತವು ಕಂಬಳಕ್ಕೆ ಪ್ರೋತ್ಸಾಹ ನೀಡುತ್ತಿಲ್ಲ. ಮೈಸೂರಿನಲ್ಲಿ ಕಂಬಳಕ್ಕೆ 8 ಕೋಟಿ ನೀಡುತ್ತಿದೆ. ಇಂತಹ ಇಬ್ಬಗೆಯ ನೀತಿ ಯಾಕೆ?' ಎಂದು ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಹೇಳಿದರು.

ಮೈಸೂರು ದಸರಾ ಕಂಬಳ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಉಡುಪಿ ತಾಲ್ಲೂಕಿನ 80 ಬಡಗುಬೆಟ್ಟು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಾವು ಕಂಬಳ ನಡೆಸಲು ಮುಂದಾದಾಗ ಕಾಂಗ್ರೆಸ್‌ನವರು ವಿರೋಧ ವ್ಯಕ್ತಪಡಿಸಿ, ನ್ಯಾಯಾಲಯದಿಂದ ತಡೆಯಾಜ್ಞೆ ತಂದು ಅದನ್ನು ನಿಲ್ಲಿಸಿದ್ದಾರೆ. 144ನೇ ಸೆಕ್ಷನ್ ಜಾರಿಗೊಳಿಸಿ ತಡೆವೊಡ್ಡಲಾಗಿತ್ತು. ಅಲ್ಲದೆ ಕಂಬಳ ಸಮಿತಿಯವರ ಮೇಲೆ ಎಫ್ಐಆರ್ ಕೂಡ ದಾಖಲಿಸಲಾಗಿತ್ತು' ಎಂದರು.

### ಆರ್ ಎಸ್ ಎಸ್ ಪಥಸಂಚಲನದಲ್ಲಿ ಭಾಗಿಯಾದ ಆರೋಪ: ಯಾದಗಿರಿಯಲ್ಲಿ ಇಬ್ಬರು ಶಿಕ್ಷಕರ ಅಮಾನತು

• ಉದಯವಾಹಿನಿ ಯಾದಗಿರಿ:

ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗಿಯಾದ ಆರೋಪದ ಮೇಲೆ ಮುಖ್ಯ ಶಿಕ್ಷಕ ಸೇರಿ ಇಬ್ಬರು ಶಿಕ್ಷಕರನ್ನು ಡಿಡಿಪಿಐ ಅಮಾನತು ಮಾಡಿದ್ದಾರೆ. ಸುರಪುರ ತಾಲ್ಲೂಕಿನ ಕುಪ್ಪಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಅಣ್ಣಾ ಸಾಹೇಬ ಹಾಗೂ ಹುಣಸಗಿಯ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಶಿಕ್ಷಕ ಗುರುರಾಜ ಜೋಷಿ ಅಮಾನತುಗೊಂಡವರು. ಆರ್‌ಎಸ್‌ಎಸ್‌ಗೆ ನೂರು ವರ್ಷ ತುಂಬಿದ ಪ್ರಯುಕ್ತ ಕಳೆದ ವರ್ಷದ ಅಕ್ಟೋಬರ್‌ನಲ್ಲಿ ನಡೆದ ಪಥಸಂಚಲನದಲ್ಲಿ ಈ ಶಿಕ್ಷಕರು ಪಾಲ್ಗೊಂಡಿದ್ದ ಆರೋಪ ಕುರಿತು ವಿಚಾರಣೆಯನ್ನು ಕಾಯ್ದಿರಿಸಿ, ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

### ಧಾರ್ಮಿಕ ಆಚರಣೆಗಳಿಂದ ಸಮಾಜದಲ್ಲಿ ಶಾಂತಿ, ಸಾಮರಸ್ಯ


ಉದಯವಾಹಿನಿ ಚಿತ್ರ

• ಉದಯವಾಹಿನಿ ನರೇಗಲ್:

'ಧಾರ್ಮಿಕ ಆಚರಣೆಗಳು ಮತ್ತು ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯಗಳು ಸಮಾಜದಲ್ಲಿ ಶಾಂತಿ, ಸಾಮರಸ್ಯ ಹಾಗೂ ಸೌಹಾರ್ದ ಹೆಚ್ಚಿಸಲು ಪೂರಕವಾಗಿವೆ' ಎಂದು ನರೇಗಲ್ ಹಿರೇಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ 3ನೇ ವಾರ್ಡ್‌ನ ಬುಲ್ಡೋಜರ್ ನಗರದಲ್ಲಿ ನಿರ್ಮಿಸಲಾದ ಕೂಗಮ್ಮದೇವಿ ಹಾಗೂ ಜೇಜಮ್ಮದೇವಿ ದೇವಸ್ಥಾನದ ನೂತನ ಗೋಪುರ ಲೋಕಾರ್ಪಣೆ ಮತ್ತು ಕಳಸಾರೋಹಣ ಮಹೋತ್ಸವದಲ್ಲಿ ಮಾತನಾಡಿದರು. 'ದೇವಾಲಯಗಳು ಕೇವಲ ಪೂಜಾ ಸ್ಥಳಗಳಾಗಿ ಉಳಿಯದೆ ಸಂಸ್ಕೃತಿ, ಸಂಸ್ಕಾರ ಹಾಗೂ ಸದಾಚಾರವನ್ನು ಮುಂದಿನ ಪೀಳಿಗೆಗೆ ದಾಟಿಸುವ ಕೇಂದ್ರಗಳಾಗಬೇಕು. ಸಾರ್ವಜನಿಕರು ಭಕ್ತಿಭಾವದೊಂದಿಗೆ ಸಮಾಜಮುಖಿ ಚಿಂತನೆಗಳನ್ನು ಮೈಗೂಡಿಸಿಕೊಂಡಾಗ ಇಂತಹ ಧಾರ್ಮಿಕ ಆಚರಣೆಗಳಿಗೆ ನೈಜ ಸಾರ್ಥಕತೆ ದೊರೆಯುತ್ತದೆ' ಎಂದರು.

ಕೆಎಸ್ ಪಿಯು ಕಾಲೇಜಿನ ಪ್ರಾಚಾರ್ಯ ಶಿವಾನಂದ ಗೋಗೇರಿ, 'ಸಿಂಧೋಳ್ಳಿ ಸಮಾಜದ ಪ್ರತಿಯೊಂದು ಕುಟುಂಬವೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಮೊದಲ ಆದ್ಯತೆ ನೀಡಬೇಕು' ಎಂದರು. ಪೂರ್ಣಕುಂಭ ಮೆರವಣಿಗೆ ನಡೆಯಿತು.

# ದಿಢೀರ್ ಏರಿದ ಈರುಳ್ಳಿ ದರ: ಕರ್ನಾಟಕ ರೈತರ ಕಣ್ಣಲ್ಲಿ ನೀರು

## ಈ ಬಾರಿ ಮಳೆ ಪ್ರಮಾಣ ಕಡಿಮೆ ಇದ್ದುದರಿಂದ ಕರ್ನಾಟಕ ರೈತರು ಈರುಳ್ಳಿ ಬೆಳೆ ಕಡಿಮೆ ಬೆಳೆದಿದ್ದರು.

**• ಉದಯವಾಹಿನಿ ಹುಬ್ಬಳ್ಳಿ:**

ರಾಜ್ಯದಲ್ಲಿ ಬರ ಹಾಗೂ ಮಹಾರಾಷ್ಟ್ರದಲ್ಲಿ ಪ್ರವಾಹದಿಂದ ಈರುಳ್ಳಿ (ಉಳ್ಳಾಗಡ್ಡಿ) ಅಭಾವದಿಂದ ಚಿಲ್ಲರೆ ಮಾರುಕಟ್ಟೆಯಲ್ಲಿ 1 ಕಿಲೋ ಈರುಳ್ಳಿ 60ರೂ.ಗೆ ಮಾರಾಟವಾಗುತ್ತಿದೆ. ಗ್ರಾಹಕರು ಈ ಬೆಲೆ ಕೇಳಿ ಹೌಹಾರುತ್ತಿದ್ದಾರೆ.

ಐದಾರು ದಿನಗಳ ಹಿಂದಷ್ಟೇ ಗುಣಮಟ್ಟದ ದೊಡ್ಡ ಈರುಳ್ಳಿ 45ಕ್ಕೆ ಕಿಲೋ ಮಾರಾಟವಾಗಿದ್ದು, 30 ಹಾಗೂ 35 ರೂ.ಗೆ ಮಧ್ಯಮ ಹಾಗೂ ಸಣ್ಣ ಗಾತ್ರ ಈರುಳ್ಳಿ ಸಿಗುತ್ತಿತ್ತು. ಹುಬ್ಬಳ್ಳಿ ಎಪಿಎಂಸಿಯಲ್ಲೂ ಸೋಮವಾರ ಕ್ವಿಂಟಾಲ್‌ಗೆ ಕನಿಷ್ಠ ದರ 3,900ರಿಂದ 4,500 ವರೆಗೂ ಮಾರಾಟವಾಗಿದೆ. ಆದರೆ ಇದೇ ಈರುಳ್ಳಿಯನ್ನು ರೀಟೆಲ್ ವ್ಯಾಪಾರಿಗಳು ಸಂತೆಗಳಲ್ಲಿ ಕೆ.ಜಿ.ಗೆ 55 ರಿಂದ 60 ರೂಪಾಯಿಗೆ ಮಾರಾಟ ಮಾಡುತ್ತಿದ್ದು, ಗ್ರಾಹಕರು ಕಂಗಾಲಾಗಿದ್ದಾರೆ.

ರಾಜ್ಯದಲ್ಲಿ ಮಳೆ ಕೊರತೆ ಹಾಗೂ ಮಹಾರಾಷ್ಟ್ರದಲ್ಲಿ ಹೆಚ್ಚಿನ ಮಳೆಯಾಗಿ ಬೆಳೆ ಕೊಳೆತು ಹೋಗಿದೆ. ಅದರ ಮಧ್ಯದಲ್ಲಿಯೇ ಮಹಾರಾಷ್ಟ್ರದ ಈರುಳ್ಳಿ ಈಗ ಹುಬ್ಬಳ್ಳಿ ಎಪಿಎಂಸಿಗೆ ಲಗ್ಗೆ ಇಟ್ಟಿದೆ. ರಾಜ್ಯದ ಈರುಳ್ಳಿ ಬೆಳೆ ಕುಸಿತದ ಲಾಭವನ್ನು ಅವರು ಪಡೆಯುತ್ತಿದ್ದಾರೆ. ಇಲ್ಲಿ ಈರುಳ್ಳಿ ಅಭಾವದಿಂದ ಹೆಚ್ಚಿನ ಪ್ರಮಾಣದ ಈರುಳ್ಳಿ ಬರುತ್ತಿದ್ದು, ಉತ್ತಮ ಬೆಲೆ ಸಿಗುತ್ತಿದೆ.


ಉದಯವಾಹಿನಿ ಚಿತ್ರ

> ನಾವು ಹೆಚ್ಚಾಗಿ ಬೆಳೆದಾಗಲೇ ಬೆಲೆ ಸಿಗುವುದಿಲ್ಲ. ಈ ವರ್ಷ ನಾವು ಮಳೆ ಇಲ್ಲದ್ದಕ್ಕೆ ಈರುಳ್ಳಿ ಬೆಳೆದಿಲ್ಲ. ಈಗ ಏಕಾಏಕಿಯಾಗಿ ಬೆಲೆ ಹೆಚ್ಚಳವಾಗಿದೆ. ನಾವು ಮಾರಾಟ ಮಾಡಲು ಬಂದಾಗ ಈ ದರ ಸಿಗುವುದಿಲ್ಲ. ಕೆಲವೊಮ್ಮೆ ಈರುಳ್ಳಿ ಕೊಳೆತು ಇಲ್ಲಿಯೇ ಎಸೆದು ಹೋಗುತ್ತೇವೆ. ಈಗ ನಮಗೆ ಈರುಳ್ಳಿ ಇಲ್ಲ. ಹೀಗಾಗಿ ರೈತರಾದ ನಾವು ಕೂಡ ಹೆಚ್ಚಿನ ದರ ಕೊಟ್ಟು ಖರೀದಿ ಮಾಡುವ ಅನಿವಾರ್ಯತೆ ಇದೆ ಎಂದು ಬೇಸರ ವ್ಯಕ್ತಪಡಿಸಿದರು.
> -ಮಂಟೂರು ಗ್ರಾಮದ ರೈತ ಮಂಜುನಾಥ

> ನಾವು ಬೆಳೆದ ಬೆಳೆಗೆ ದರ ಸಿಗುವುದಿಲ್ಲ. ಆದರೆ ಈಗ ಅದೇ ಈರುಳ್ಳಿ ಕ್ವಿಂಟಾಲ್‌ಗೆ ಈಗ 5 ಸಾವಿರ ರೂ. ಆಗಿದೆ. ನಾವು ಈರುಳ್ಳಿ ಬೆಳೆಯುತ್ತೇವೆ. ಆದರೆ ಮಳೆ ಇಲ್ಲದೆ ಈರುಳ್ಳಿ ಬೆಳೆ ಒಣಗಿ ಹೋಗಿದೆ. ನಮ್ಮ ಬೆಳೆ ಬಂದಾಗ ಮತ್ತೆ ಎರಡ್ಮೂರು ಸಾವಿರ ರೂಪಾಯಿಗೆ ಕ್ವಿಂಟಾಲ್ ಆಗುತ್ತದೆ. ಈಗ ನಾವು ಹೆಚ್ಚಿನ ದರ ಕೊಟ್ಟು ಖರೀದಿ ಮಾಡಿದ್ದೇವೆ. ರೈತರಿಗೆ ಯಾವಾಗಲೂ ಲಾಭವಿಲ್ಲ. ಮಧ್ಯವರ್ತಿಗಳು ಹಾಗೂ ದಲಾಲಿ ಅಂಗಡಿ ಮಾಲೀಕರಿಗೆ ಲಾಭವಿದೆ ಎಂದು ಹೇಳಿದರು.
> -ರೈತ ಮುತ್ತಪ್ಪ

ಸ್ಥಿತಿ ಹೀಗೆ ಮುಂದುವರಿದರೆ ದರ ಇನ್ನೂ ಹೆಚ್ಚಳವಾಗುವ ಸಾಧ್ಯತೆ ಇದೆ ಎನ್ನುತ್ತಾರೆ ವ್ಯಾಪಾರಸ್ಥರು.ಮಹಾರಾಷ್ಟ್ರದಿಂದ ಶೇ. 60ರಷ್ಟು ಈರುಳ್ಳಿ ರಾಜ್ಯದ ಬೆಂಗಳೂರು, ಹುಬ್ಬಳ್ಳಿ, ದಾವಣಗೆರೆ ಸೇರಿ ಪ್ರಮುಖ ಮಾರುಕಟ್ಟೆಗಳಿಗೆ ಬರುತ್ತದೆ.

ವಿಜಯನಗರ, ಬಳ್ಳಾರಿ, ಗದಗ, ಧಾರವಾಡ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಈರುಳ್ಳಿಯನ್ನು ಹೆಚ್ಚಿನ ಪ್ರಮಾಣದಲ್ಲಿ ರೈತರು ಬೆಳೆಯುತ್ತಾರೆ. ಆದರೆ ಈ ವರ್ಷ ಮಳೆ ಕೊರತೆಯಿಂದ ಈರುಳ್ಳಿ ಕಡಿಮೆಯಾಗಿದೆ. ಆದರೂ ನೀರಾವರಿ, ಮಳೆ ಆಶ್ರಿತ ಸೇರಿ ರಾಜ್ಯದಲ್ಲಿ ಪ್ರತಿ ವರ್ಷ ಮೂರು ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬಿತ್ತನೆ ಮಾಡುತ್ತಾರೆ.

ಗ್ರಾಹಕರಾದ ಸಂಜೀವ ಮಾತನಾಡಿ, ಬೆಲೆ ಎಷ್ಟು ಹೆಚ್ಚಾದರೂ ಅನಿವಾರ್ಯವಾಗಿ ಕೊಳ್ಳಬೇಕಿದೆ. ಏಕಾಏಕಿಯಾಗಿ ಕೆಜಿಗೆ 50 ರೂಪಾಯಿಯಾಗಿದೆ. ಮೊದಲು ಕೆಜಿಗೆ 12-15 ರೂಪಾಯಿ ಇತ್ತು. ಈಗ ಶ್ರಾವಣ ಮಾಸ ಇರುವುದರಿಂದ ಸಭೆ ಸಮಾರಂಭಗಳು ಹೆಚ್ಚಾಗಿವೆ. ಈರುಳ್ಳಿ ಬೆಲೆ ಇನ್ನೂ ಹೆಚ್ಚಾಗುವ ಸಂಭವವಿದೆ. ಮೊದಲು ಮೂಟೆಗಟ್ಟಲೆ ಈರುಳ್ಳಿ ಖರೀದಿ ಮಾಡುವವರು ಈಗ 5-10 ಕೆಜಿ ಮಾತ್ರ ಖರೀದಿ ಮಾಡುವಂತಾಗಿದೆ ಎಂದು ತಿಳಿಸಿದರು.

### ಗ್ರಾಹಕರ ಅಸಮಾಧಾನ

ಬೇಡಿಕೆಯಷ್ಟು ಈರುಳ್ಳಿ ಬರುತ್ತಿಲ್ಲ. ಹೀಗಾಗಿ ತೀವ್ರ ಅಭಾವ ಉಂಟಾಗಿದ್ದು, ಐದಾರು ದಿನದಲ್ಲಿ ಕಿಲೋಗೆ 35ರಿಂದ 60 ರೂ. ವರೆಗೂ ಬೆಲೆ ಹೆಚ್ಚಾಗಿದೆ. ದರ ಏರಿಕೆಗೆ ಗ್ರಾಹಕರು ಸಹ ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

## ಹೆಲ್ಮೆಟ್ ಇಲ್ಲದೆ ಬುಲೆಟ್ ಓಡಿಸಿದ ಶಾಸಕ ಪ್ರಕಾಶ್ ಕೋಳಿವಾಡಗೆ ಬಿತ್ತು 500 ರೂ.ದಂಡ..!

**• ಉದಯವಾಹಿನಿ ಹಾವೇರಿ:**

ಸಾಮಾನ್ಯ ಜನರಾಗಲಿ, ಜನಪ್ರತಿನಿಧಿಗಳೇ ಆಗಲಿ 'ನಿಯಮ ಎಲ್ಲರಿಗೂ ಒಂದೇ' ಎಂಬುದನ್ನು ಹಾವೇರಿ ಪೊಲೀಸರು ಮತ್ತೊಮ್ಮೆ ತೋರಿಸಿದ್ದಾರೆ.

ಹೆಲ್ಮೆಟ್ ಧರಿಸದೆ ಬೈಕ್ ರ್ಯಾಲಿಯಲ್ಲಿ ಭಾಗವಹಿಸಿದ್ದ ರಾಣೆಬೆನ್ನೂರು ಶಾಸಕ ಪ್ರಕಾಶ್ ಕೋಳಿವಾಡ ಅವರಿಗೆ ನೋಟಿಸ್ ಜಾರಿ ಮಾಡಿ, ರೂ. 500 ದಂಡ ವಿಧಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಈ ಘಟನೆಗೆ ವ್ಯಾಪಕ ಟೀಕೆ ವ್ಯಕ್ತವಾದ ಬಳಿಕ ಪೊಲೀಸರು ಶಾಸಕರಿಗೆ ನೋಟಿಸ್ ಜಾರಿ ಮಾಡಿದ್ದು, ತಮ್ಮ ತಪ್ಪನ್ನು ಒಪ್ಪಿಕೊಂಡ ಪ್ರಕಾಶ್ ಕೋಳಿವಾಡ ದಂಡ ಪಾವತಿಸಿದ್ದಾರೆ.

ಸರ್ಕಾರಿ ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್‌ಗಳ ವಿತರಣೆ ಅಂಗವಾಗಿ 'ಶೀ ಫಾರ್ ಸೊಸೈಟಿ' ಆಯೋಜಿಸಿದ್ದ ಬೈಕ್ ರ್ಯಾಲಿಯಲ್ಲಿ ಶಾಸಕ ಪ್ರಕಾಶ್ ಕೋಳಿವಾಡ ಅವರು ಹೆಲ್ಮೆಟ್ ಧರಿಸದೆ ಬೈಕ್ ಚಲಾಯಿಸಿದ್ದರು.


ಉದಯವಾಹಿನಿ ಚಿತ್ರ

ಈ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ, ಸಾರ್ವಜನಿಕರಿಂದ ಟೀಕೆ ವ್ಯಕ್ತವಾಗಿತ್ತು.

ಹಾವೇರಿ ಜಿಲ್ಲಾ ಪೊಲೀಸರು ಈಗಾಗಲೇ ಸಿಸಿಟಿವಿ ಹಾಗೂ ಸಂಚಾರ ಸಿಗ್ನಲ್ ಕ್ಯಾಮೆರಾಗಳ ಮೂಲಕ ಹೆಲ್ಮೆಟ್ ಧರಿಸದ ವಾಹನ ಸವಾರರಿಗೆ ದಂಡ ವಿಧಿಸುತ್ತಿರುವ ಹಿನ್ನೆಲೆಯಲ್ಲಿ, ಶಾಸಕ ನೇತೃತ್ವದ ಬೈಕ್ ರ್ಯಾಲಿಯ ದೃಶ್ಯಗಳು ವೈರಲ್ ಆದ ಬಳಿಕ ಪೊಲೀಸರು ಕ್ರಮ ಕೈಗೊಳ್ಳುವಂತೆ ನೆಟ್ಟಿಗರು ಆಗ್ರಹಿಸಿದ್ದರು.

> "ಪೊಲೀಸ್ ಇಲಾಖೆ ನನಗೆ ನೋಟಿಸ್ ನೀಡಿದೆ. ನಾನು ಅದನ್ನು ಗೌರವಿಸುತ್ತೇನೆ. ನಾನು ತಪ್ಪು ಮಾಡಿದ್ದೇನೆ ಮತ್ತು ಅದನ್ನು ಒಪ್ಪಿಕೊಂಡಿದ್ದೇನೆ. ಪೊಲೀಸರು ವಿಧಿಸಿದ ದಂಡವನ್ನೂ ಪಾವತಿಸಿದ್ದೇನೆ ಎಂದು ಹೇಳಿದ್ದಾರೆ.
> -ಶಾಸಕ ಪ್ರಕಾಶ್ ಕೋಳಿವಾಡ

ಹಲವು ಬಾರಿ ರಾಜಕೀಯ ನಾಯಕರು ಬೈಕ್ ರ್ಯಾಲಿ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳ ವೇಳೆ ಸಂಚಾರ ನಿಯಮಗಳನ್ನು ನಿರ್ಲಕ್ಷಿಸುತ್ತಾರೆ.ಜಾಗೃತ ನೆಟ್ಟಿಗರು ಇಂತಹ ಘಟನೆಗಳನ್ನು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡುತ್ತಾರೆ. ಪೊಲೀಸರು ತಮ್ಮ ಕರ್ತವ್ಯ ನಿರ್ವಹಿಸಿದ್ದಾರೆ. ನಿಯಮಗಳು ಎಲ್ಲರಿಗೂ ಒಂದೇ" ಎಂದು ಪೊಲೀಸರು ತಿಳಿಸಿದ್ದಾರೆ.

## ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಅವ್ಯವಸ್ಥೆ- ಪ್ರತಿಭಟನೆ


ಉದಯವಾಹಿನಿ ಚಿತ್ರ

**• ಉದಯವಾಹಿನಿ ಬಾಗಲಕೋಟೆ:**

ಬೀಳಗಿ ಪಟ್ಟಣದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಅವ್ಯವಸ್ಥೆಗಳನ್ನು ಖಂಡಿಸಿ, ಶಾಲೆಯ ಪ್ರಾಂಶುಪಾಲರು ಹಾಗೂ ನಿಲಯ ಪಾಲಕರನ್ನು ಕೂಡಲೇ ಅಮಾನತುಗೊಳಿಸುವಂತೆ ಆಗ್ರಹಿಸಿ ದಲಿತ ಮತ್ತು ಕನ್ನಡಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಲಾಯಿತು. ವಸತಿ ನಿಲಯದ ಪಾಲಕ ಎನ್.ಆರ್. ಹುದ್ದಾರ ಹಾಗೂ ಪ್ರಾಂಶುಪಾಲ ಎಲ್.ಎ. ಬಿರಾದಾರ ಅವರ ನಿರ್ಲಕ್ಷ್ಯ ಧೋರಣೆಯಿಂದಾಗಿ ವಿದ್ಯಾರ್ಥಿಗಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ಹೊರಹಾಕಿದರು. ವಿದ್ಯಾರ್ಥಿಗಳಿಗೆ ಸರ್ಕಾರದ ನಿಯಮಾವಳಿ ಪ್ರಕಾರ ಗುಣಮಟ್ಟದ ಹಾಗೂ ಪೌಷ್ಟಿಕ ಆಹಾರವನ್ನು ನೀಡದೆ ಕಳಪೆ ಆಹಾರ ವಿತರಿಸಲಾಗುತ್ತಿದೆ. ಶೌಚಾಲಯ, ಶುದ್ಧ ಕುಡಿಯುವ ನೀರು ಸೇರಿದಂತೆ ಕನಿಷ್ಠ ಮೂಲಸೌಕರ್ಯಗಳಿಲ್ಲದೆ ವಿದ್ಯಾರ್ಥಿಗಳು ಪರದಾಡುತ್ತಿದ್ದಾರೆ. ಬೇಜವಾಬ್ದಾರಿಯಿಂದಾಗಿ ಮುಗ್ಧ ವಿದ್ಯಾರ್ಥಿಗಳ ಆರೋಗ್ಯ ಮತ್ತು ಜೀವದ ಜೊತೆ ಅಧಿಕಾರಿಗಳು ಚೆಲ್ಲಾಟವಾಡುತ್ತಿದ್ದಾರೆ ಎಂದು ಆರೋಪಿಸಿದರು.

ಜಿಲ್ಲಾಡಳಿತ ಭವನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಕರ್ತವ್ಯ ಲೋಪವೆಸಗಿರುವ ಇಬ್ಬರೂ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ತನಿಖೆ ನಡೆಸಿ ಕೂಡಲೇ ಅಮಾನತುಗೊಳಿಸಬೇಕು ಹಾಗೂ ವಸತಿ ಶಾಲೆಯ ಸಮಸ್ಯೆಗಳನ್ನು ಶೀಘ್ರವೇ ಬಗೆಹರಿಸಬೇಕೆಂದು ಆಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

## ರೇಷ್ಮೆ ಉತ್ಪಾದನೆಯಲ್ಲಿ ಭಾರತ ಅಗ್ರಸ್ಥಾನಕ್ಕೇರಲಿ: ಗೋವಿಂದ ಕಾರಜೋಳ

**• ಉದಯವಾಹಿನಿ ಚಿತ್ರದುರ್ಗ:**

ವಿಶ್ವದ ರೇಷ್ಮೆ ಉತ್ಪಾದನೆಯಲ್ಲಿ ಚೀನಾ ಮೊದಲ ಸ್ಥಾನದಲ್ಲಿದ್ದರೆ, ಭಾರತ ಎರಡನೇ ಸ್ಥಾನದಲ್ಲಿದೆ. ನಮ್ಮ ದೇಶದಲ್ಲಿ ಕರ್ನಾಟಕ ರೇಷ್ಮೆ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಕಠಿಣ ಶ್ರಮ ಹಾಗೂ ತಾಂತ್ರಿಕ ಸಂಶೋಧನೆಗಳ ಮೂಲಕ ಭಾರತ ರೇಷ್ಮೆ ಉತ್ಪಾದನೆಯಲ್ಲಿ ಪ್ರಥಮ ಸ್ಥಾನಕ್ಕೇರುವಂತೆ ರೈತರು ಹಾಗೂ ವಿಜ್ಞಾನಿಗಳು ಶ್ರಮಿಸಬೇಕು ಎಂದು ಸಂಸದ ಗೋವಿಂದ ಎಂ. ಕಾರಜೋಳ ಹೇಳಿದರು.


ಉದಯವಾಹಿನಿ ಚಿತ್ರ

ನಗರದ ರೇಷ್ಮೆ ಇಲಾಖೆ ಉಪನಿರ್ದೇಶಕರ ಕಚೇರಿಯಲ್ಲಿ ಕೇಂದ್ರ ರೇಷ್ಮೆ ಮಂಡಳಿ ಹಾಗೂ ರೇಷ್ಮೆ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ 'ನನ್ನ ರೇಷ್ಮೆ-ನನ್ನ ಹೆಮ್ಮೆ ಅಭಿಯಾನದಡಿ ರೈತರು ಮತ್ತು ವಿಜ್ಞಾನಿಗಳ ನಡುವಿನ ಸಂವಾದ ಹಾಗೂ ವಿಚಾರ ವಿನಿಮಯ ಕಾರ್ಯಕ್ರಮ' ಉದ್ಘಾಟಿಸಿ ಮಾತನಾಡಿದರು.

ಚಿತ್ರದುರ್ಗದ ಮಾರಗಟ್ಟದಲ್ಲಿ ಇಲ್ಲಿಯವರೆಗೆ ಕಾರ್ಯನಿರ್ವಹಿಸುತ್ತಿದ್ದ ರೇಷ್ಮೆ ಕೃಷಿ ಸಂಶೋಧನಾ ಕೇಂದ್ರ, ವಿಸ್ತರಣ ಕೇಂದ್ರವನ್ನು ಪ್ರಾದೇಶಿಕ ರೇಷ್ಮೆ ಕೃಷಿ ಸಂಶೋಧನಾ ಕೇಂದ್ರವನ್ನಾಗಿ ಮೇಲ್ದರ್ಜೆ ಗೇರಿಸಲಾಗಿದೆ. 1982ರಲ್ಲಿ ಪ್ರಾರಂಭವಾದ ಚಿತ್ರದುರ್ಗ ತಾಲ್ಲೂಕಿನ ಮಾರಗಟ್ಟದಲ್ಲಿರುವ ರೇಷ್ಮೆ ಸಂಶೋಧನಾ ವಿಸ್ತರಣ ಕೇಂದ್ರವು ಚಿತ್ರದುರ್ಗ, ಬಳ್ಳಾರಿ ಮತ್ತು ದಾವಣಗೆರೆ ಮೂರು ಜಿಲ್ಲೆಗಳ ರೇಷ್ಮೆ ಬೆಳೆಗಾರರ ಅಗತ್ಯತೆಗಳನ್ನು ಪೂರೈಸುತ್ತಿತ್ತು.

ಬೆಂಗಳೂರಿನ ಸರ್ಜಾಪುರದ ಬಳಿಯ ಕೊಡತಿಯಿಂದ ಪ್ರಾದೇಶಿಕ ರೇಷ್ಮೆ ಕೃಷಿ ಸಂಶೋಧನಾ ಕೇಂದ್ರವನ್ನು ಚಿತ್ರದುರ್ಗದ ಮಾರಗಟ್ಟಕ್ಕೆ ಸ್ಥಳಾಂತರಿಸಿ ಮೇಲ್ದರ್ಜೆಗೇರಿಸಲಾಗಿದೆ ಎಂದು ಹೇಳಿದರು. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಜಿಲ್ಲೆಯ ಒಟ್ಟು 1,42,767 ರೈತರಿಗೆ 713.72 ಕೋಟಿ ರು. ನೇರ ಹಣ ವರ್ಗಾವಣೆಯಾಗಿದೆ. ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ ಯಡಿ ಜಿಲ್ಲೆಯ 3,43,000 ರೈತರು 113 ಕೋಟಿ ರೂ. ಪ್ರೀಮಿಯಂ ವಂತಿಗೆ ಪಾವತಿಸಿದ್ದರು.

## ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಡಾ. ಎನ್.ಎಸ್. ಹಾರ್ಡಿಕರ್ ಪುಣ್ಯಸ್ಮರಣೆ: ಸೇವಾದಳ ಸಂಸ್ಥಾಪಕರಿಗೆ ಪುಷ್ಪನಮನ

**• ಉದಯವಾಹಿನಿ ಚಿತ್ರದುರ್ಗ:**

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೇವಾದಳದ ಸಂಸ್ಥಾಪಕ ರಾದ ಎನ್.ಎಸ್. ಡಾ. ಹಾರ್ಡಿಕರ್ ಪುಣ್ಯ ಸ್ಮರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಎನ್ ಎಸ್ ಹರ್ಡಿಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟನೆ ಮಾಡಲಾಯಿತು ಎನ್.ಎಸ್. ಹರ್ಡಿಕರ್ ಅವರು ನಡೆದು ಬಂದ ಹಾದಿ ಹಾಗೂ ಅವರ ಕುರಿತು ಮಾತನಾಡಿದ ಕಾಂಗ್ರೆಸ್ ಸೇವಾದಳ ಜಿಲ್ಲಾಧ್ಯಕ್ಷರಾದ ಬೂತೇಶ್ ನಾರಾಯಣ್ ಸುಬ್ಬರಾವ್ ಹಾರ್ಡಿಕರ್ ಒಬ್ಬ ಸ್ವಾತಂತ್ರ್ಯ ಹೋರಾಟ ಗಾರ ಮತ್ತು ಕಾಂಗ್ರೆಸ್ ರಾಜಕಾರಣಿಯಾಗಿದ್ದು, ಅವರು ಕಾಂಗ್ರೆಸ್ ಸೇವಾ ದಳವನ್ನು ಸ್ಥಾಪಿಸಿದರು .ಅವರು ಕಲ್ಕತ್ತಾದ ವೈದ್ಯರು ಮತ್ತು ಶಸ್ತ್ರಚಿಕಿತ್ಸಕರ ಕಾಲೇಜಿನಲ್ಲಿ ವೈದ್ಯಕೀಯ ಪದವಿ ಪಡೆದರು ಮತ್ತು ನಂತರ ಉನ್ನತ ಶಿಕ್ಷಣಕ್ಕಾಗಿ ಅಮೆರಿಕಕ್ಕೆ ಹೋದರು. 1916ರಲ್ಲಿ, ಅವರು ಮಿಚಿಗನ್ ವಿಶ್ವವಿದ್ಯಾಲಯದಿಂದ ಸಾರ್ವಜನಿಕ ಆರೋಗ್ಯದಲ್ಲಿ ಎಂ.ಎಸ್ಸಿ ಪದವಿ ಪಡೆದರು. ರೈ ಅವರ ಸಹೋದ್ಯೋಗಿಯಾಗಿ, ಹಾರ್ಡಿಕರ್ ಅಮೆರಿಕದಲ್ಲಿ ಅನೇಕ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಅವರು ಹೋಮ್ ರೂಲ್ ಲೀಗ್‌ನ ಕಾರ್ಯದರ್ಶಿಯಾಗಿದ್ದರು ಮತ್ತು ಅಮೆರಿಕದ ಭಾರತೀಯ ಕಾರ್ಮಿಕರ ಒಕ್ಕೂಟವನ್ನು ಸಂಘಟಿಸಲು ಸಹಾಯ ಮಾಡಿದರು. ಹೋಮ್ ರೂಲ್ ಲೀಗ್‌ನ ಪದಾಧಿಕಾರಿಗಳಾಗಿ, ರೈ ಮತ್ತು ಹಾರ್ಡಿಕರ್ ಯುಎಸ್ ಸೆನೆಟ್‌ನ ವಿದೇಶಾಂಗ ಸಂಬಂಧ ಸಮಿತಿಯನ್ನು ಉದ್ದೇಶಿಸಿ ಮಾತನಾಡಿದರು ಅವರು ಹಿಂದೂಸ್ತಾನ್ ಅಸೋಸಿಯೇಷನ್ ಆಫ್ ಅಮೆರಿಕದ ಅಧ್ಯಕ್ಷರೂ ಆಗಿದ್ದರು. ಅವರು ಯಂಗ್ ಇಂಡಿಯಾ ಜರ್ನಲ್‌ನ ವ್ಯವಸ್ಥಾಪಕ ಸಂಪಾದಕರಾಗಿದ್ದರು, "ಭಾರತದ ಜನರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳೊಂದಿಗೆ ಅಮೆರಿಕದ ಜನರನ್ನು ಪರಿಚಯಿಸುವಲ್ಲಿ ಅಮೂಲ್ಯವಾದ ಸೇವೆಯನ್ನು" ಸಲ್ಲಿಸಿದ್ದಾರೆ.


ಉದಯವಾಹಿನಿ ಚಿತ್ರ

1923 ರಲ್ಲಿ ಕಾಕಿನಾಡದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ನಂತರ ಸೇವಾ ದಳವನ್ನು 1923 ರಲ್ಲಿ ರಚಿಸ ಲಾಯಿತು. ಜವಾಹರಲಾಲ್ ನೆಹರು ಡಾ. ಹಾರ್ಡಿಕರ್ ಅವರನ್ನು ಬೆಂಬಲಿಸಿದರೂ, ದಳವು ನಾಗರಿಕ ಅಸಹಕಾರ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿತು, ಸೇವಾ ದಳವು ಕಾಂಗ್ರೆಸ್‌ನ ಕೇಂದ್ರ ಸ್ವಯಂಸೇವಕ ಸಂಘಟನೆಯಾಯಿತು ಮತ್ತು ಅದರ ಸ್ವಯಂಸೇವಕರಿಗೆ ದೈಹಿಕ ತರಬೇತಿಯನ್ನು ನೀಡುವತ್ತ ಗಮನ ಹರಿಸಿತು ಮತ್ತು ಕೋಮು ಸೌಹಾರ್ದತೆಯನ್ನು ಉತ್ತೇಜಿಸುವತ್ತ ಕೆಲಸ ಮಾಡಿತು ಡಾ. ಹಾರ್ಡಿಕರ್ ಅವರು ಘಟಪ್ರಭಾದಲ್ಲಿ ಕರ್ನಾಟಕ ಆರೋಗ್ಯ ಸಂಸ್ಥೆಯನ್ನು ಸ್ಥಾಪಿಸಲು ಸಹಾಯ ಮಾಡಿದರು . ಅವರು 1952 ರಿಂದ 1962 ರವರೆಗೆ ಎರಡು ಬಾರಿ ರಾಜ್ಯಸಭಾ ಸದಸ್ಯರಾಗಿದ್ದರು ಮತ್ತು 1958 ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ಪಡೆದರು ಡಾ. ಹಾರ್ಡಿಕರ್ 26 ಆಗಸ್ಟ್ 1975 ರಂದು ನಿಧನರಾದರು. ಅವರ ಜನ್ಮ ಶತಮಾನೋತ್ಸವದ ಸ್ಮರಣಾರ್ಥವಾಗಿ, ಅಂಚೆ ಇಲಾಖೆ 1989 ರಲ್ಲಿ ಅವರ ಗೌರವಾರ್ಥವಾಗಿ ಸ್ಮರಣಾರ್ಥ ಅಂಚೆಚೀಟಿಯನ್ನು ಬಿಡುಗಡೆ ಮಾಡಿತು.

ಈ ಸಂದರ್ಭದಲ್ಲಿ ಸೇವಾದಳ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್, ಮಹಿಳಾ ಅಧ್ಯಕ್ಷರಾದ ನೇತ್ರ, ಮಹಿಳಾ ಪ್ರಧಾನ ಕಾರ್ಯದರ್ಶಿ ರಾದಮ್ಮ, ಸೇವಾದಳ ರಾಜ್ಯ ಪ್ರಧಾನ ಕಾರ್ಯದರ್ಶಿ ರಮೇಶ್, ಕಾಂಗ್ರೆಸ್ ಮುಖಂಡರಾದ ಪ್ರಕಾಶ್ ರಮಾನಾಯ್ಕ್, ಮೈಲಾರಪ್ಪ, ಹಾಗೂ ಪಕ್ಷದ ಅನೇಕ ಮುಖಂಡರು ಹಾಜರಿದ್ದರು

# ಭತ್ತ ಬೆಳೆದ ರೈತರಿ ಗದ್ದೆಗೆ ಮಂಗಗಳ ಹಾವಳಿ ಬೆಳೆ ಲೂಟಿ, ಕಂಗಾಲಾದ ಬೆಳೆಗಾರರು!

## ಮಳೆ ಕೊರತೆ ನಡುವೆಯೂ ಕುಂದಾಪುರದಲ್ಲಿ ರೈತರು ಭತ್ತದ ಕೃಷಿ ನಡೆಸಿದ್ದು, ಭತ್ತದ ಬೆಳೆ ಬಲಿಯುವ ಹಂತ ತಲುಪಿದೆ.

**• ಉದಯವಾಹಿನಿ ಕುಂದಾಪುರ:**

ಮಳೆ ಅನಿಶ್ಚಿತತೆಯ ನಡುವೆಯೂ ಮುಂಗಾರು ಭತ್ತ ಕೃಷಿ ನಡೆಸಿರುವ ರೈತರಿಗೆ ಇದೀಗ ಮಂಗಗಳ ಹಾವಳಿ ಮತ್ತೊಂದು ಸಂಕಷ್ಟ ತಂದೊಡ್ಡಿದೆ. ಹಿಂಡುಹಿಂಡಾಗಿ ಗದ್ದೆಗಳಿಗೆ ನುಗ್ಗುತ್ತಿರುವ ಮಂಗಗಳು ಬಲಿಯುತ್ತಿರುವ ಭತ್ತದ ಸಸಿಗಳನ್ನು ತುಳಿದು ನಾಶಪಡಿಸುವುದರ ಜೊತೆಗೆ ಕಾಳುಗಳನ್ನು ತಿಂದು ಹಾಕುತ್ತಿವೆ. ಇದರಿಂದ ಕೃಷಿಕರು ಆರ್ಥಿಕ ನಷ್ಟ ಅನುಭವಿಸುವಂತಾಗಿದೆ.

ಮಂಗಗಳನ್ನು ಓಡಿಸಲು ರೈತರು ಹಲವು ಮಾರ್ಗೋಪಾಯಗಳನ್ನು ಅನುಸರಿಸುತ್ತಿದ್ದಾರೆ. ಶಬ್ದ ಹೊರಸೂಸುವ ಸಾಧನ, ಪಟಾಕಿ ಸಿಡಿಸುವುದು, ಡ್ರಮ್ ಬಾರಿಸುವುದು, ಗದ್ದೆಯ ಅಂಚಿನಲ್ಲಿ ಬೆಳಕು ಪ್ರತಿಫಲಿಸುವ ರಿಬ್ಬನ್‌ಗಳನ್ನು ಕಟ್ಟುವುದು, ಮಂಗಗಳ ಪ್ರತಿಕೃತಿಗಳನ್ನು ನೇತು ಹಾಕುವುದು ಸೇರಿದಂತೆ ಹಲವು ಪ್ರಯತ್ನ ನಡೆಸಲಾಗುತ್ತಿದೆ. ಆದರೆ ಇವುಗಳಿಗೆ ಕೆಲವೇ ದಿನಗಳಲ್ಲಿ ಒಗ್ಗಿಕೊಳ್ಳುತ್ತಿರುವ ಮಂಗಗಳು ಮತ್ತೆ ಗದ್ದೆಗಳಿಗೆ ಲಗ್ಗೆ ಇಡುತ್ತಿವೆ. ಬೆಳೆ ಬಲಿಯುವ ಹಂತದಲ್ಲಿ ಮಂಗಗಳ ಹಿಂಡು ದಾಳಿ ನಡೆಸುತ್ತಿರುವುದು ರೈತರ ಆತಂಕ ಹೆಚ್ಚಿಸಿದೆ. ಒಂದು ಬಾರಿ ಗದ್ದೆಗೆ ನುಗ್ಗಿದರೆ ಗಂಟೆಗಟ್ಟಲೆ ಉಳಿದು ಭತ್ತದ ತೆನೆಗಳನ್ನು ತಿನ್ನುತ್ತಿರುವುದರಿಂದ ಬೆಳೆ ರಕ್ಷಿಸುವುದು ರೈತರಿಗೆ ಸವಾಲಾಗಿದೆ.

1. ರೈತರಿಗೆ ಇದೀಗ ಮಂಗಗಳ ಹಾವಳಿ.
2. ಭತ್ತದ ತೆನೆ ಸೇರಿ ತರಕಾರಿಗಳನ್ನು ಧ್ವಂಸ
3. ಪಾರ್ಕ್ ನಿರ್ಮಿಸಿ ಶಾಶ್ವತ ಪರಿಹಾರ

**ರೈತನ ಜೀವಕ್ಕೂ ಅಪಾಯ**

ಎರಡು ದಿನಗಳ ಹಿಂದೆ ಹಾಲಾಡಿಯಲ್ಲಿ ತೋಟಕ್ಕೆ ನುಗ್ಗಿದ ಕಾಡುಪ್ರಾಣಿಯನ್ನು ಓಡಿಸಲು ತೆರಳಿದ್ದ ರೈತ ಪ್ರಾಣ ಕಳೆದುಕೊಂಡ ಘಟನೆ ನಡೆದಿರುವುದು ಗ್ರಾಮೀಣ ಪ್ರದೇಶದಲ್ಲಿ ಆತಂಕ ಮೂಡಿಸಿದೆ. ಈ ನಡುವೆ ಬೆಳೆ ಬರುವ ಸಂದರ್ಭ ವನ್ಯಜೀವಿಗಳು ತೋಟ, ಗದ್ದೆಗಳಿಗೆ ಲಗ್ಗೆ ಇಡುತ್ತಿರುವುದು ಕೃಷಿಕರಿಗೆ ಹೊಸ ತಲೆನೋವಾಗಿ ಪರಿಣಮಿಸಿದೆ.


ಉದಯವಾಹಿನಿ ಚಿತ್ರ

> ಮಂಗಗಳ ಲೂಟಿ ಕೃಷಿಗದ್ದೆಗೆ ಮಾತ್ರ ಸೀಮಿತವಾಗಿಲ್ಲ. ತೋಟಗಳಲ್ಲಿ ಬೆಳೆದ ತರಕಾರಿ ಮತ್ತು ಹಣ್ಣುಗಳನ್ನೂ ನಾಶಪಡಿಸುತ್ತಿವೆ. ಭತ್ತದ ಹೊಲಗಳ ರಕ್ಷಣೆಗಾಗಿ ಗದ್ದೆ ಅಂಚಿನಲ್ಲಿ ಹಳ್ಳಿಮನೆ ನಿರ್ಮಿಸಿಕೊಂಡು ಉಳಿಯುವ ಅನಿವಾರ್ಯ ಸ್ಥಿತಿ ಎದುರಾಗಿದೆ. ನಿರಂತರ ಬೆಳೆಹಾನಿ ಕೃಷಿಕ ಸಮುದಾಯಕ್ಕೆ ಆರ್ಥಿಕ ಮತ್ತು ಸಾಮಾಜಿಕ ಸವಾಲು ಸೃಷ್ಟಿಸಿದೆ.
> -ಬಾಲಚಂದ್ರ ಕುಲಾಲ ಯಡಮೊಗೆ, ಕೃಷಿಕ

ಘಾಟಿ ಹಾಗೂ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಈ ಭಾಗದಲ್ಲಿ ಮಂಗಗಳನ್ನು ಹಿಡಿದು ತಂದು ಬಿಟ್ಟು ಹೋಗುವ ಪ್ರವೃತ್ತಿಯೂ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿದೆ ಎಂಬ ಆರೋಪ ಕೇಳಿಬರುತ್ತಿದೆ. ಮಂಗಗಳ ಸಂಖ್ಯೆ ಹೆಚ್ಚುತ್ತಿರುವ ಪರಿಣಾಮ ಭತ್ತದ ಜೊತೆಗೆ ತೋಟಗಳಲ್ಲಿನ ತರಕಾರಿ, ಹಣ್ಣುಗಳಿಗೂ ಹಾನಿಯಾಗುತ್ತಿದೆ.

### ಮಂಕಿಪಾರ್ಕ್ ನಿರ್ಮಿಸಿ

ಮಂಗಗಳ ಹಾವಳಿ ನಿಯಂತ್ರಿಸಲು ತಾತ್ಕಾಲಿಕ ಕ್ರಮಗಳ ಬದಲು ವೈಜ್ಞಾನಿಕ ಹಾಗೂ ದೀರ್ಘಕಾಲೀನ ಪರಿಹಾರ ರೂಪಿಸಬೇಕು. ಮಂಗಗಳನ್ನು ಹಿಡಿದು ಸಂರಕ್ಷಿಸಲು ಹಾಗೂ ನಿರ್ವಹಿಸಲು ಸೂಕ್ತ ಪ್ರದೇಶದಲ್ಲಿ ಮಂಕಿಪಾರ್ಕ್ ನಿರ್ಮಿಸುವ ಯೋಜನೆ ರೂಪಿಸಬೇಕು ಎಂದು ರೈತ ಮುಖಂಡ ಹರಿಪ್ರಸಾದ್ ಶೆಟ್ಟಿ ಆಗ್ರಹಿಸಿದ್ದಾರೆ.

> ಕೋತಿಗಳ ಹಿಂಡು ಒಮ್ಮೆ ಭತ್ತದ ಗದ್ದೆಗೆ ನುಗ್ಗಿದರೆ ಬೆಳೆ ರಕ್ಷಿಸುವುದು ಅತ್ಯಂತ ಕಷ್ಟ. ಸಸಿಗಳನ್ನು ನಾಶಪಡಿಸುವುದರ ಜತೆಗೆ ಕಾಳುಗಳನ್ನು ತಿಂದು ನಷ್ಟ ಉಂಟುಮಾಡುತ್ತವೆ. ಕೋತಿಗಳ ಸಂಖ್ಯೆ ನಿಯಂತ್ರಿಸಲು ಪರಿಹಾರ ಕಂಡುಕೊಳ್ಳಬೇಕು.
> -ಬಲಾಡಿ ಸಂತೋಷ್ ಶೆಟ್ಟಿ ಅಂಪಾರು, ಕೃಷಿಕ.

**ಪರಿಹಾರವೂ ಮರೀಚಿಕೆ**

ಮಂಗಗಳಿಂದಾಗುವ ಬೆಳೆಹಾನಿಗೆ ಸೂಕ್ತ ಪರಿಹಾರ ದೊರೆಯದಿರುವುದು ರೈತರ ಅಸಮಾಧಾನಕ್ಕೆ ಕಾರಣವಾಗಿದೆ. ಬೆಳೆ ರಕ್ಷಿಸಲು ಗದ್ದೆಯ ಅಂಚಿನಲ್ಲೇ ತಾತ್ಕಾಲಿಕ ವಾಗಿ ಉಳಿದುಕೊಳ್ಳಬೇಕಾದ ಪರಿಸ್ಥಿತಿ ರೈತರಿಗೆ ಎದುರಾಗಿದೆ. ನಿರಂತರ ಬೆಳೆಹಾನಿ ಕೃಷಿಕರ ಆರ್ಥಿಕ ಸ್ಥಿತಿಯ ಮೇಲೂ ಪರಿಣಾಮ ಬೀರುತ್ತಿದೆ.

**ಮಂಗಗಳ ಹಾವಳಿ ಏಕೆ ಹೆಚ್ಚುತ್ತಿದೆ ?**

ಅರಣ್ಯ ಪ್ರದೇಶದಲ್ಲಿ ಆಹಾರ ಮತ್ತು ನೀರಿನ ಲಭ್ಯತೆ ಕಡಿಮೆಯಾಗುವುದು ಮಂಗಗಳು ನಾಡಿನತ್ತ ಬರುವುದಕ್ಕೆ ಒಂದು ಕಾರಣವಾಗಿರಬಹುದು.ಆಹಾರದ ಆಕರ್ಷಣೆಯೂ ಒಂದು ಕಾರಣವಾಗಿದ್ದು, ಭತ್ತದ ಕಾಳು, ಹಣ್ಣು, ತರಕಾರಿ ಸೇರಿದಂತೆ ಕೃಷಿ ಉತ್ಪನ್ನಗಳು ಮಂಗಗಳಿಗೆ ಸುಲಭವಾಗಿ ಆಹಾರವಾಗಿ ಲಭ್ಯವಾಗುತ್ತಿವೆ. ಕೆಲ ಪ್ರದೇಶಗಳಲ್ಲಿ ಮಂಗಗಳನ್ನು ಹಿಡಿದು ಬೇರೆಡೆ ತಂದು ಬಿಟ್ಟುಹೋಗುತ್ತಿರುವ ಆರೋಪವೂ ಕೇಳಿ ಬರುತ್ತಿದೆ.

## ದಿನ ಭವಿಷ್ಯ

| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
|---|---|---|
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ:** ನಿಮ್ಮ ಉತ್ತಮ ಆರೋಗ್ಯದ ಸಲುವಾಗಿ ದೀರ್ಘ ನಡಿಗೆಗೆ ಹೋಗಿ. ಇಂದು ನೀವು ಆಲ್ಕೊಹಾಲ್ಯುಕ್ತ ಮದ್ಯವನ್ನು ಸೇವಿಸಬಾರದು, ಮಾದಕತೆಯ ಸಂದರ್ಭದಲ್ಲಿ ನೀವು ಯಾವುದೇ ಬೆಲೆಬಾಳುವ ವಸ್ತುಗಳನ್ನು ಕಳೆದುಕೊಳ್ಳಬಹುದು. ಇತರರ ವ್ಯವಹಾರಗಳಲ್ಲಿ ನಿಮ್ಮ ಮೂಗುತೂರಿಸುವಿಕೆಯನ್ನು ಇಂದು ತಡೆಯಬೇಕು.

**ವೃಷಭ:** ನಿಮ್ಮ ಸಂಗಾತಿಯ ಕುಟುಂಬದ ಸದಸ್ಯರ ಅಡ್ಡಿಯ ಕಾರಣದಿಂದ ನಿಮ್ಮ ದಿನ ಸ್ವಲ್ಪ ಏರುಪೇರಾಗಬಹುದು. ಒಂದು ಕಠಿಣ ಸಮಯದ ನಂತರ, ಕೆಲಸದಲ್ಲಿ ಏನಾದರೂ ಸುಂದರವಾದ್ದರಿಂದ ಈ ದಿನ ನಿಮಗೆ ಆಶ್ಚರ್ಯವನ್ನುಂಟು ಮಾಡುತ್ತದೆ. ನೀವು ನಿಮ್ಮ ಸಮಯದ ಬಗ್ಗೆ ಕಾಳಜಿ ವಹಿಸಬೇಕು.

**ಮಿಥುನ:** ನೀವೇ ಕೆಲವು ಟೀಕೆಗಳನ್ನು ಎದುರಿಸುವ ಸಾಧ್ಯತೆಗಳಿವೆ. ನಿಮ್ಮ ಹಾಸ್ಯಪ್ರಜ್ಞೆ ಜಾಗೃತವಾಗಿರಲಿ ಮತ್ತು ನಿಮ್ಮ ಸ್ವರಕ್ಷಣೆ ಕಡಿಮೆಯಿರಲಿ. ಹೀಗಿದ್ದಲ್ಲಿ ಟೀಕೆಯನ್ನು ಎದುರಿಸುವ ಸಾಮರ್ಥ್ಯ ನಿಮ್ಮಲ್ಲಿ ಹೆಚ್ಚಿರುತ್ತದೆ. ಸಣ್ಣ ಉದ್ಯೋಗವನ್ನು ಮಾಡುವ ಜನರು, ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು.

**ಕಟಕ:** ಆರ್ಥಿಕವಾಗಿ ನೀವು ಸಾಕಷ್ಟು ಬಲವಾಗಿ ಕಾಣುವಿರಿ, ಗ್ರಹ ಮತ್ತು ನಕ್ಷತ್ರಗಳ ಚಲನೆಯಿಂದ ಇಂದು ನಿಮಗಾಗಿ ಹಣವನ್ನು ಸಂಪಾದಿಸುವ ಅನೇಕ ಅವಕಾಶಗಳು ಉಂಟಾಗುತ್ತವೆ. ಸಂಬಂಧಿಕರು ಮತ್ತು ಸ್ನೇಹಿತರಿಂದ ಅನಿರೀಕ್ಷಿತ ಉಡುಗೊರೆಗಳು. ಈ ದಿನ ಒಂದು ಸುಂದರ ಸಂದೇಶದೊಂದಿಗೆ ಆನಂದ ಸಂತೋಷದಿಂದ ತುಂಬಿದೆ.

**ಸಿಂಹ:** ನೀವು ಆರೋಗ್ಯ ಸಮಸ್ಯೆಯಿಂದಾಗಿ ಒಂದು ಪ್ರಮುಖ ಕೆಲಸಕ್ಕೆ ಹೋಗಲು ಸಾಧ್ಯವಾಗದಿರುವುದರಿಂದ ಕೆಲವು ಹಿನ್ನಡೆ ಎದುರಿಸುವ ಸಾಧ್ಯತೆಯಿದೆ. ಆದರೆ ನಿಮ್ಮನ್ನು ಮೇಲೆತ್ತಲು ನಿಮ್ಮ ತಾರ್ಕಿಕತೆಯನ್ನು ಬಳಸಿ. ರಿಯಲ್ ಎಸ್ಟೇಟ್ ಮತ್ತು ಆರ್ಥಿಕ ವ್ಯವಹಾರಗಳಿಗೆ ಒಳ್ಳೆಯ ದಿನ.

**ಕನ್ಯಾ:** ಆರೋಗ್ಯ ಸಂಬಂಧಿತ ಸಮಸ್ಯೆಗಳು ಅಸ್ವಸ್ಥತೆಯನ್ನು ಉಂಟುಮಾಡಬಹುದು. ನೀವು ನಿಮ್ಮ ಸ್ನೇಹಿತರೊಂದಿಗೆ ಎಲ್ಲಿಗಾದರೂ ಸುತ್ತಾಡಲು ಹೋಗುತ್ತಿದ್ದರೆ, ಹಣವನ್ನು ಚೆನ್ನಾಗಿ ಯೋಚಿಸಿ ಖರ್ಚು ಮಾಡಿ. ಹಣದ ನಷ್ಟವಾಗಬಹುದು. ನೀವು ಅಪರೂಪಕ್ಕೆ ಭೇಟಿ ಮಾಡುವ ಜನರನ್ನು ಸಂಪರ್ಕಿಸಲು ಒಳ್ಳೆಯ ದಿನ.

**ತುಲಾ:** ನಿಮ್ಮ ಭಾವನೆಗಳನ್ನು ವಿಶೇಷವಾಗಿ ಕೋಪವನ್ನು ನಿಯಂತ್ರಿಸಲು ಪ್ರಯತ್ನಿಸಿ. ವೆಚ್ಚದ ಏರಿದರೂ ಆದಾಯದಲ್ಲಿನ ಹೆಚ್ಚಳ ನಿಮ್ಮ ಖರ್ಚುಗಳನ್ನು ನೋಡಿಕೊಳ್ಳುತ್ತದೆ. ಮಕ್ಕಳೊಂದಿಗೆ ಸಮಯ ಕಳೆಯುವುದು ಮುಖ್ಯ.ನೀವು ಪ್ರೀತಿಯ ಮನೋಭಾವದಲ್ಲಿರುತ್ತೀರಿ ಅದಕ್ಕೆ ಅವಕಾಶಗಳೂ ಸಾಕಷ್ಟಿರುತ್ತವೆ.

**ವೃಶ್ಚಿಕ:** ಇದು ನಿಮಗೆ ಆರ್ಥಿಕ ಲಾಭವನ್ನು ನೀಡುತ್ತದೆ. ಸ್ನೇಹಿತರು ಹಾಗೂ ಕುಟುಂಬದ ಸದಸ್ಯರೊಡನೆ ಒಂದು ಸಂಜೆಯನ್ನು ಆಯೋಜಿಸಿ. ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ ನಿಮ್ಮ ಪ್ರೀತಿಪಾತ್ರರು ನಿಮಗೆ ಅಪಾರ ಸಂತೋಷ ತರುತ್ತಾರೆ. ಪಾಲುದಾರರು ಹೊಸ ಯೋಜನೆಗಳು ಸಾಹಸಗಳ ಬಗ್ಗೆ ಉತ್ಸಾಹ ತೋರಿಸುತ್ತಾರೆ.

**ಧನಸ್ಸು:** ನೀವು ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ಹಣಕಾಸಿನಲ್ಲಿ ಸುಧಾರಣೆ ದೀರ್ಘಕಾಲದಿಂದ ಬಾಕಿಯಿರುವ ನಿಮ್ಮ ಬಾಕಿಗಳು ಮತ್ತು ಬಿಲ್ಲುಗಳನ್ನು ಪಾವತಿಸುವುದನ್ನು ಅನುಕೂಲಕರವಾಗಿಸುತ್ತದೆ.

**ಮಕರ:** ನಿಮ್ಮ ಒರಟು ವರ್ತನೆ ನಿಮ್ಮ ಸ್ನೇಹಿತರಿಗೆ ಸ್ವಲ್ಪ ಸಮಸ್ಯೆ ಉಂಟುಮಾಡಬಹುದು. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ ಎಂದು ಭರವಸೆ ಇದೆ. ಸ್ನೇಹಿತರು ಒಂದು ಅದ್ಭುತ ಸಂಜೆಗಾಗಿ ಬರುತ್ತಾರೆ.

**ಕುಂಭ:** ಮನರಂಜನೆ ಮೋಜಿನ ಒಂದು ದಿನ. ವ್ಯಾಪಾರಿಗಳಿಗೆ ಇಂದು ವ್ಯಾಪಾರದಲ್ಲಿ ಹಾನಿ ಉಂಟಾಗಬಹುದು ಮತ್ತು ತಮ್ಮ ವ್ಯಾಪಾರವನ್ನು ಉತ್ತಮಗೊಳಿಸಲು ನೀವು ಹಣವನ್ನು ಖಾರುಚು ಮಾಡಬೇಕಾಗುತ್ತದೆ. ಸಂಪರ್ಕಗಳು ಮತ್ತು ಚರ್ಚೆಗಳು ಚೆನ್ನಾಗಿ ನಡೆಯದಿದ್ದಲ್ಲಿ ನೀವು ನಿಮ್ಮ ಶಾಂತತೆ ಕಳೆದುಕೊಳ್ಳಬಹುದು.

**ಮೀನ:** ನಿಮ್ಮ ನಿರೀಕ್ಷೆಗಳನ್ನು ಪೂರೈಸಲು ವೈಯಕ್ತಿಕ ಸಂಬಂಧಗಳನ್ನು ದುರ್ಬಳಕೆ ಮಾಡುವುದು ನಿಮ್ಮ ಪತ್ನಿಗೆ ಕೋಪ ಬರಿಸುತ್ತದೆ. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ, ನಿಮ್ಮ ಮೂಲಕ ಉಳಿಸಲಾಗಿರುವ ಹಣ ತುಂಬಾ ಕೆಲಸಕ್ಕೆ ಬರಬಹುದು ನೀವು ಯಾವುದೇ ದೊಡ್ಡ ಸಮಸ್ಯೆಯಿಂದ ಹೊರಬರಬಹುದು.

## ಈದ್ ಮಿಲಾದ್ ಮೆರವಣಿಗೆಗೆ 40 ಅಡಿ ಟಿಪ್ಪು ಕಟೌಟ್; ಮುಜಾಹಿದ್ ಬೆಂಬಲಿತ ಹಾಡು ಬಳಕೆ; 7 ಮಂದಿ ಬಂಧನ

**• ಉದಯವಾಹಿನಿ ಚಿಕ್ಕಮಗಳೂರು:**

ಈದ್ ಮಿಲಾದ್ ಹಬ್ಬದ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಪಾಕಿಸ್ತಾನ ಪರ ಹಾಡು ಬಳಸಿ ವಿಡಿಯೋ ಹರಿಬಿಟ್ಟಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರು ನಗರ ಪೊಲೀಸರು ಒಟ್ಟು ಏಳು ಜನರನ್ನು ವಶಕ್ಕೆ ಪಡೆದಿದ್ದಾರೆ. ಚಿಕ್ಕಮಗಳೂರಿನಲ್ಲಿ ಈದ್ ಮಿಲಾದ್-ಉನ್-ನಬಿ ಹಬ್ಬವನ್ನು ಧಾರ್ಮಿಕ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಈ ಹಿನ್ನೆಲೆಯಲ್ಲಿ ನಗರದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಟಿಪ್ಪು ನಗರದಲ್ಲಿ ಈದ್ ಮಿಲಾದ್ ಹಬ್ಬಕ್ಕಾಗಿ ಅಳವಡಿಸಲಾಗಿದ್ದ 40 ಅಡಿ ಎತ್ತರದ ಟಿಪ್ಪು ಸುಲ್ತಾನ್ ಕಟೌಟ್ ಹಿನ್ನೆಲೆಗೆ, ಪಾಕಿಸ್ತಾನ್ ಮುಜಾಹಿದ್ದೀನ್ ಸೈನಿಕರು ಎಂಬ ದೇಶವಿರೋಧಿ ಗೀತೆಯನ್ನು ಎಡಿಟ್ ಮಾಡಿ ಇನ್‌ಸ್ಟಾಗ್ರಾಮ್ ರೀಲ್ಸ್ ಹಾಗೂ ವಾಟ್ಸಾಪ್ ಸ್ಟೇಟಸ್‌ಗಳಲ್ಲಿ ಹಂಚಿಕೊಳ್ಳಲಾಗಿತ್ತು.

ತನಿಖೆ ಕೈಗೆತ್ತಿಕೊಂಡ ಪೊಲೀಸರು ಮುಖ್ಯ ಆರೋಪಿ ರೋಷನ್‌ನನ್ನು ಬಂಧಿಸಿದ್ದು, ವಿಡಿಯೋ ಎಡಿಟಿಂಗ್ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲು ಸಾಥ್ ನೀಡಿದ ಇಬ್ಬರು ಅಪ್ರಾಪ್ತರು ಸೇರಿದಂತೆ ಏಳು ಜನರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.ವಿಡಿಯೋದಲ್ಲಿದ್ದ ಹಾಡನ್ನು ಯಾರು ಪೋಸ್ಟ್ ಮಾಡಿದ್ದರು ಹಾಗೂ ಅದನ್ನು ಪೋಸ್ಟ್ ಮಾಡಲು ಯಾರಾದರೂ ಪ್ರಚೋದನೆ ನೀಡಿದ್ದರೇ ಎಂಬುದರ ಕುರಿತು ಪೊಲೀಸರು ಶಂಕಿತರನ್ನು ವಿಚಾರಣೆ ನಡೆಸುತ್ತಿದ್ದಾರೆ.

## ಮುಳುಗುತ್ತಿದ್ದ ದೋಣಿಯಿಂದ 27 ಮೀನುಗಾರರ ರಕ್ಷಣೆ

**• ಉದಯವಾಹಿನಿ ಉಡುಪಿ:**


ಅರಬ್ಬಿ ಸಮುದ್ರದಲ್ಲಿ ರಭಸವಾದ ಅಲೆಗೆ ಸಿಲುಕಿ ಮೀನುಗಾರಿಕಾ ಬೋಟ್‌ನ ಹಲಗೆ ಕಿತ್ತುಹೋಗಿ ಮುಳುಗಿದ ಘಟನೆ ಜಿಲ್ಲೆಯ ಗಂಗೊಳ್ಳಿಯಲ್ಲಿ ನಡೆದಿದೆ. ಬೋಟ್‌ನಲ್ಲಿದ್ದ 27 ಮಂದಿ ಮೀನುಗಾರರನ್ನು ಸಕಾಲಿಕ ಕಾರ್ಯಾಚರಣೆ ನಡೆಸಿ ಸುರಕ್ಷಿತವಾಗಿ ರಕ್ಷಿಸಲಾಗಿದೆ. ಮಧ್ಯಾಹ್ನ ಗಂಗೊಳ್ಳಿ ಮ್ಯಾಂಗನೀಸ್ ಜಟ್ಟಿಯಿಂದ 'ಶ್ರೀ ಬಾಲಾಂಜನೇಯ' ಮೀನುಗಾರಿಕಾ ಬೋಟ್ ಅರಬ್ಬಿ ಸಮುದ್ರಕ್ಕೆ ತೆರಳಿತ್ತು.

ಗಂಗೊಳ್ಳಿ ಸೀಮೌತ್‌ನಿಂದ ಸುಮಾರು 3 ನಾಟಿಕಲ್ ಮೈಲು ದೂರದಲ್ಲಿ, ಮಧ್ಯಾಹ್ನ 3.30ರ ಸುಮಾರಿಗೆ ಸಮುದ್ರದ ರಭಸವಾದ ಅಲೆಯ ಹೊಡೆತಕ್ಕೆ ಬೋಟ್‌ನ ಹಲಗೆ ಕಿತ್ತುಹೋಗಿದೆ. ಪರಿಣಾಮ ಬೋಟ್‌ನೊಳಗೆ ನೀರು ನುಗ್ಗಿ ಮುಳುಗಲು ಆರಂಭಿಸಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ವಿಷಯ ತಿಳಿದ ತಕ್ಷಣ ಗಂಗೊಳ್ಳಿ ಸಿಎಸ್‌ಪಿ ಠಾಣೆಯ ಪಿಐ ರಮೇಶ್ ಕೆ., ಪಿಎಸ್‌ಐ ಸುಬ್ರಹ್ಮಣ್ಯ ಹಾಗೂ ಸಿಬ್ಬಂದಿ ಯುವರಾಜ, ರಾಘವೇಂದ್ರ, ರಮೇಶ್, ನಾಗರಾಜ ಖಾರ್ವಿ, ನಾಗೇಶ್ ಖಾರ್ವಿ, ಕಿರಣ ಮತ್ತು ಕೆಎನ್‌ಡಿ ಸದಸ್ಯರಾದ ಸಂತೋಷ ಖಾರ್ವಿ, ಸಂದೇಶ್ ಅವರು 'ಸುಮುಖ' ಹಾಗೂ 'ಮತ್ಸ್ಯಾಮೃತ (ಶ್ರೀ ನಿಧಿ)' ಮೀನುಗಾರಿಕಾ ಬೋಟ್‌ಗಳ ಮೂಲಕ ಸ್ಥಳಕ್ಕೆ ತೆರಳಿ ಯಶಸ್ವಿ ರಕ್ಷಣಾ ಕಾರ್ಯಾಚರಣೆ ನಡೆಸಿದರು.

## ತುಂಗಾ ನಾಲೆಯಲ್ಲಿ ಈಜಲು ಹೋಗಿದ್ದ ಬಾಲಕ ನೀರುಪಾಲು

**• ಉದಯವಾಹಿನಿ ಶಿವಮೊಗ್ಗ:**


ಉದಯವಾಹಿನಿ ಚಿತ್ರ

ತುಂಗಾ ನಾಲೆಯಲ್ಲಿ ಈಜಲು ಹೋಗಿದ್ದ ಬಾಲಕ ನೀರುಪಾಲಾಗಿರುವ ಘಟನೆ ಶಿವಮೊಗ್ಗ ತಾಲ್ಲೂಕಿನ ಅಬ್ಬಲಗೆರೆ ಬಳಿಯ ತುಂಗಾ ಮೇಲ್ದಂಡೆ ನಾಲೆಯಲ್ಲಿ ನಡೆದಿದೆ. ಬೊಮ್ಮನಕಟ್ಟೆಯ ನಿವಾಸಿ ಕೃಷ್ಣ (15) ನೀರುಪಾಲಾದ ಬಾಲಕ. ಕೃಷ್ಣ ಶಿವಮೊಗ್ಗ ನಗರದ ಶಾಲೆಯಲ್ಲಿ ಹತ್ತನೇ ತರಗತಿ ವ್ಯಾಸಂಗ ಮಾಡುತ್ತಿದ್ದ.

ಆರು ಜನ ಸ್ನೇಹಿತರ ಜೊತೆ ತುಂಗಾ ನಾಲೆಗೆ ಈಜಲು ತೆರಳಿದ್ದ ವೇಳೆ ನಾಲೆಯಲ್ಲಿ ನೀರಿನ ಹರಿವು ಹೆಚ್ಚಿದ್ದರಿಂದ ನಿಯಂತ್ರಣ ಕಳೆದುಕೊಂಡು ಕೃಷ್ಣ ಕಣ್ಮರೆಯಾಗಿದ್ದಾನೆ. ಬಾಲಕ ಕೃಷ್ಣನ ರಕ್ಷಿಸಲು ಸ್ನೇಹಿತರ ಯತ್ನ ವಿಫಲವಾಗಿದೆ. ಅಗ್ನಿಶಾಮಕ ದಳ ಹಾಗೂ ಸ್ಥಳೀಯರಿಂದ ಬಾಲಕನಿಗೆ ಶೋಧ ಕಾರ್ಯ ನಡೆಯುತ್ತಿದೆ. ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.